ಸುದರ್ಶನ ದೇಸಾಯಿ

# ವಿಷಮಂಥನ




894.814 3
DES N93
ಗ್ರಂಥ ಸ್ವಾಮ್ಯ ವಿಭಾಗ

# ವಿಷಮಂಥನ

ಸುದರ್ಶನ ದೇಸಾಯಿ

ಭಾಗ್ಯಲಕ್ಷ್ಮೀ ಪ್ರಕಾಶನ
87, 3ನೇ ಕ್ರಾಸ್, 4ನೇ ಬ್ಲಾಕ್
ಬನಶಂಕರಿ 3ನೇ ಸ್ಟೇಜ್, 3ನೇ ಫೇಸ್
ಬೆಂಗಳೂರು-560 085

META ENTERED

VISHAMANTHANA-a novel by Sri Sudarshana Desai,
Published by Bhagyalakshmi Prakashana, 87,
3rd cross, 4th Block, Banashankari III Stage, III Phase
Bangalore-560085

Pages : viii + 104

First Edition : 1993

© Smt. Sujatha Sudarshan Desai

Art : P. S. Kumar

Printed at :

PRATHIBHA PRINTERS
411, 8th Main. Hanumantanagar
Bangalore-560019

# ಮುನ್ನುಡಿ

ಮಿತ್ರರಾದ ಶ್ರೀ ಸುದರ್ಶನ ದೇಸಾಯಿಯವರ ಈ ಹೊಸ ಕಾದಂಬರಿಗೆ ನಾನು ಮುನ್ನುಡಿ ಬರೆಯಲು ಒಪ್ಪಿಕೊಂಡದ್ದು ಒಂದು ಆಕಸ್ಮಿಕವೆಂದೇ ಹೇಳಬೇಕು. ಅವರು ಪತ್ತೇದಾರಿ ಸಾಹಿತ್ಯದ ಶತಮಾನೋತ್ಸವದಲ್ಲಿ ನನ್ನನ್ನು ತೊಡಗಿಸಿರದಿದ್ದರೆ ಈ ಪ್ರಸಂಗ ಬರುತ್ತಿರಲಿಲ್ಲ. ಕನ್ನಡದಲ್ಲಿ ಪತ್ತೇದಾರಿ ಸಾಹಿತ್ಯಕ್ಕೆ ಪ್ರೋತ್ಸಾಹವಿಲ್ಲ, ಸಾಹಿತ್ಯದ ಪಂಕ್ತಿಯಲ್ಲಿ ಅದಕ್ಕೆ ಸ್ಥಾನವಿಲ್ಲ ಎಂಬ ಕೊರಗು ನನಗೂ ಇತ್ತು. ಸಣ್ಣವನಿದ್ದಾಗ 'ಮಾಯಾವಿ' 'ತುಬ್ಬುಗಾರ ಸುಬ್ಬಣ್ಣ'ದಂಥ ಕೆಲವು ಉತ್ಕೃಷ್ಟ ಕಾದಂಬರಿಗಳನ್ನೋದಿ ನನ್ನ ಸಾಹಿತ್ಯದ ಅಭಿರುಚಿ ಬೆಳೆದು ಬಂದಿತ್ತು. ಈಗ ಅಂಥ ಕಾದಂಬರಿಗಳು ಸಿಗಬಹುದೇ ಎಂಬ ಸಂಶಯ ನನಗಿದೆ. ಮುಂದೆ Conan Doyleನಂಥ ಲೇಖಕನ ಕೃತಿಗಳನ್ನು ಓದಿದ ಮೇಲೆ ಕನ್ನಡದಲ್ಲಿ ಅಂಥ ಕೃತಿಗಳು ಸಿಗಲು ಸಾಧ್ಯವಿಲ್ಲವೆಂದು ತಿಳಿದ ನಾನು ಓದುವುದನ್ನೂ ಬಿಟ್ಟೆ. ಆದರೆ 'ತುಷಾರ' ಪತ್ರಿಕೆಯಲ್ಲಿ ಸುದರ್ಶನ ದೇಸಾಯಿಯವರ 'ವಿಷಮಂಥನ' ಓದಿದೆ. ಕಾರಣವೆಂದರೆ ಅದು ಸ್ನೇಹಿತರ ಕೃತಿ ಎಂದು. ಓದುತ್ತಾ ಹೋದಂತೆ ಇದೊಂದು ಹೊಸಬಗೆಯ ಕಾದಂಬರಿ ಎಂದು ತೋರಿತು. ನನ್ನ ಅನುಭವವನ್ನೇ ವಿಶ್ಲೇಷಿಸುತ್ತ ಈ ಕೆಳಗಿನ ನಾಲ್ಕು ಮಾತು ಬರೆದಿದ್ದೇನೆ.

ಪತ್ತೆದಾರಿ ಕಾದಂಬರಿಯೆಂದರೆ ವಾಸ್ತವಮಾರ್ಗದ ಕಾದಂಬರಿಯಲ್ಲ. ಸಮಾಜದಲ್ಲಿ ಅದೂ ನಮ್ಮ ದೇಶದಲ್ಲಿ – ನಡೆಯುತ್ತಿರುವ ಅಪರಾಧಗಳು ಅಷ್ಟೊಂದು ಮುಚ್ಚುಮರೆಯಿಂದ ನಡೆಯುವದೂ ಇಲ್ಲ. ಸಮಾಜದ

ಸಂಸ್ಕೃತಿ ಪರಿಷ್ಕೃತವಾಗುತಿರುವಂತೆ ಅಪರಾಧಗಳೂ ಪರಿಷ್ಕೃತವಾಗುತ್ತವೆ. ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮಲ್ಲಿ ಅಸ್ತಿತ್ವದಲ್ಲಿದ್ದ ಅಭಿಜಾತ ಶ್ರೀಮಂತ ವರ್ಗವೂ ಈಗ ಉಳಿದಿಲ್ಲ. ಇಂಗ್ಲೆಂಡದಲ್ಲಿಯ ವಿಕ್ಟೋರಿಯನ್ ಯುಗ ತನ್ನ ನೆರಳನ್ನು ನಮ್ಮ ದೇಶದ ಮೇಲೆ ಕೂಡ ಕೆಡವಿದ್ದ ಕಾಲ ಅದು. ಈಗಿನ ಬಹಿರಂಗ ಸಮಾಜದಲ್ಲಿ ಕೊಲೆ, ಸುಲಿಗೆ, ಕಳವು ಮೊದಲಾದವು ಮುಕ್ತವಾಗಿಯೇ ನಡೆಯುತ್ತವೆ ಅಂದ ಮೇಲೆ ಅಪರಾಧದ ಪತ್ತೆ ಮಾಡಲು Sherlock Holmesನಂಥ ಮೇಧಾವಿ ಬೇಕಾಗಿಲ್ಲ. ನಮ್ಮಲ್ಲಿ ನೂರಕ್ಕೆ ಅರವತ್ತರಷ್ಟು ನಿರಕ್ಷರರು. ಸೂಕ್ಷ್ಮವಾದ ಪತ್ತೇದಾರಿಗೂ ಸಾಕ್ಷರತೆಗೂ ಬಹಳ ಸೂಕ್ಷ್ಮವಾದ ಸಂಬಂಧವಿದೆ. ಅಪರಾಧಗಳ ಸ್ವರೂಪ ಪರಿಷ್ಕೃತವಾದಂತೆ ಪತ್ತೇದಾರಿ ಪ್ರಜ್ಞೆ ಸೂಕ್ಷ್ಮವಾಗುತ್ತದೆ.

ಸುದರ್ಶನ ದೇಸಾಯರ 'ವಿಷಮಂಥನ' ಪತ್ತೇದಾರಿಯ ಹಂಗನ್ನು ಬಿಟ್ಟುಕೊಟ್ಟ ಒಂದು ಅಪರಾಧದ ಕಾದಂಬರಿಯಾಗಿದೆ. ಸುಬ್ಬರಾವ್, ಸದಾನಂದ, ಜಾನ್ ಮೊದಲಾದವರು ಸಂಘಟಿಸಿದ ಅಪರಾಧಗಳ ಜಾಲ ವಾಸ್ತವಿಕವೇ ಅವಾಸ್ತವಿಕವೇ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತವಾಗಿದೆ. ಕಾದಂಬರಿಯ ಕೊನೆಯ ಬಗ್ಗೆ ಹೇಳುವದಾದರೆ ಅದು ಇಂದಿನ ಹಿಂದೀ ಸಿನೆಮಗಳ ಪ್ರಭಾವದಿಂದ ಬಣ್ಣಗೊಂಡಿದೆ. ಆದರೆ ಇವೆಲ್ಲ ಮಹತ್ವದ ಸಮಸ್ಯೆಗಳಲ್ಲ. ಬರವಣಿಗೆ ಪ್ರಬುದ್ಧವಾದಂತೆ ಇಂಥ ದೋಷಗಳು ತಾವಾಗಿ ಮಾಯವಾಗುತ್ತವೆ. ಆದರೆ ನನಗೆ ಮಹತ್ವದ್ದಾಗಿ ಕಂಡದ್ದೆಂದರೆ ಕಥಾನಾಯಕ ಸ್ವತಃ ಪತ್ತೇದ್ದಾರಿ ಕಾದಂಬರಿಕಾರನಾಗಿಯೂ, ಅಪರಾಧಗಳ ಜಗತ್ತಿನಿಂದ ದೂರವಾಗಿರುವ ಸಂಗತಿ. ಇದರರ್ಥ ಪತ್ತೇದಾರರೆಲ್ಲ ಅಪರಾಧಗಳ ಜಗತ್ತಿಗೆ ಸೇರಿದವರೆಂದೇನೂ ಅಲ್ಲ. ನಮ್ಮಲ್ಲಿಯ ಮಧ್ಯಮ ವರ್ಗದ ಪರಿಸ್ಥಿತಿಯ ಉಪಯೋಗವನ್ನು ಕಾದಂಬರಿ ಮಾಡಿಕೊಂಡದ್ದು. ಮಧ್ಯಮ ವರ್ಗಕ್ಕೆ ಅಪರಾಧ ಅಪರಿಚಿತವಷ್ಟೇ ಅಲ್ಲ, ಅಪರಾಧಿಗಳು ಅವರಿಗೆ ಬಹಿಷ್ಕೃತರು. ಧಾರವಾಡದ ಸಾರಸ್ವತಪುರದಲ್ಲಿ ತಾತನ ಹಳೆಯ ಮನೆಯನ್ನು ಕೆಡವಿ ಅದರ ಸ್ಥಳದಲ್ಲಿ ಕೆಳಗೆ ಅಂಗಡಿ, ಮನೆ, ಮೇಲಿನ ಅಂತಸ್ತಿನಲ್ಲಿ ಬಾಡಿಗೆಗೆ ಕೊಡಲು ಕೋಣೆಗಳನ್ನು ಕಟ್ಟಿಸಿ ಶ್ರೀಮಂತಿಕೆಯ ಕನಸು ಕಾಣುವ

ಮಧ್ಯಮ ವರ್ಗದ ಸಂಸಾರ ಆಕಸ್ಮಿಕವಾಗಿ ಅಪರಾಧಿಗಳ ಜಗತ್ತಿಗೆ ಡಿಕ್ಕಿ ಹಾಯ್ದ ವಿಷಯ ಸಾಕಷ್ಟು ಸಾಂಕೇತಿಕವಾಗಿದೆ. ನಮ್ಮಲ್ಲಿಯ ಪ್ರತಿಯೊಂದು ವರ್ಗಕ್ಕೂ ಅದರದೇ ಆದ ಭಯಗಳಿವೆ. ಆದರೆ ಮಧ್ಯಮ ವರ್ಗಕ್ಕೆ ಉಳಿದ ವರ್ಗಕ್ಕಿಂತ ಭಯಗಳು ಹೆಚ್ಚು. ಗೋಕರ್ಣಕ್ಕೆ ತಿರುಗಾಡಲು ಹೋಗಿದ್ದ ಕಥಾನಾಯಕ ಒಂದು ಹೆಣ್ಣಿನ ಮೂಲಕ ವಿಚಿತ್ರವಾದ ಸುಳಿಗೆ ಬಿದ್ದು ತನಗೆ ಅಪರಿಚಿತವಾದ ಜಗತ್ತಿನ ಅನುಭವ ಪರಂಪರೆಯನ್ನು ದಾಟಿ ತಿರುಗಿ ಬರುತ್ತಾನೆ. ಅದರೆ ಅವನಿಗಾಗುವ ಅನುಭವ ದಿಗ್ಭ್ರಮೆಯಿಂದ ಕೂಡಿರುವದರಿಂದ ಅರ್ಥಪೂರ್ಣವಾಗಿದೆ. ಸೌಂದರ್ಯಕ್ಕೂ ನಿಷ್ಪಾಪತೆಗೂ ಸಂಬಂಧವಿಲ್ಲ; ಗಂಡ–ಹೆಂಡತಿ, ತಾಯಿ–ಮಕ್ಕಳು, ತಂದೆ–ಮಗಳು ಈ ಸಂಬಂಧಗಳಿಗೆ ಅರ್ಥ ಉಳಿಯುವುದಿಲ್ಲ. ಇಂಥ ಸತ್ಯ ಮುಖಕ್ಕೆ ಹೊಡೆದಂತಾದರೂ ಇದ್ದುಬಿದ್ದ ಒಳ್ಳೆಯತನವನ್ನು ಕಥಾನಾಯಕ ಉಳಿಸಿಕೊಂಡಿದ್ದಾನೆ. ಇದು ಬಹಳ ಅಪರೂಪದ ಮೌಲ್ಯವೆಂದು ನಾನು ತಿಳಿದಿದ್ದೇನೆ.

ಪತ್ತೇದಾರಿ ಸಾಹಿತ್ಯಕ್ಕೆ ಅಪರೂಪವಾಗಿರುವ ಹೊಸಬಗೆಯ ಶೈಲಿ ಕಾದಂಬರಿಯ ಕೊನೆಯ ಪುಟದವರೆಗೂ ಉಳಿಸಿಕೊಂಡು ಬಂದಿರುವ ಕುತೂಹಲ ಹಾಗೂ ಕತೆಯಲ್ಲಿ ಬರುವ ಆಕಸ್ಮಿಕ ತಿರುವುಗಳಿಂದಾಗಿ ಸುದರ್ಶನ ದೇಸಾಯಿ ಅವರ "ವಿಷಮಂಥನ" ಕಾದಂಬರಿ ಪತ್ತೇದಾರಿ ಸಾಹಿತ್ಯಕ್ಕೆ ಒಂದು ಕೊಡುಗೆಯಾಗಿದೆ. ಸುದರ್ಶನ ದೇಸಾಯಿಯವರು ಇಂಥ ಹತ್ತಾರು ಕಾದಂಬರಿಗಳನ್ನು ಬರೆಯಲಿ ಎಂದು ಹಾರೈಸುತ್ತೇನೆ.

ಧಾರವಾಡ

21–2–1993

ಕೀರ್ತಿನಾಥ ಕುರ್ತಕೋಟಿ

# ನಮ್ಮ ನಿಮ್ಮಲ್ಲಿ

ಆತ್ಮೀಯ ಓದುಗರೆ,

ಕನ್ನಡ ಪತ್ತೇದಾರಿ ಸಾಹಿತ್ಯ ಶತಮಾನೋತ್ಸವ ವರ್ಷವನ್ನು ಧಾರವಾಡದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ವರ್ಷಪರ್ಯಂತ ಪತ್ತೇದಾರಿ ಸಾಹಿತ್ಯದ ಚಟುವಟಿಕೆಗಳು, ಚರ್ಚಾಗೋಷ್ಠಿ ಸಮ್ಮೇಳನ, ಪ್ರಬಂಧ ಮಂಡನೆ ಮುಂತಾದ ಕಾರ್ಯಗಳು ನಡೆದವು.

ಇದೊಂದು ಹೆಮ್ಮೆಯ ಸಂಗತಿ.

ಈ ಸಾಹಿತ್ಯ ಯಜ್ಞವನ್ನು ಸಾಂಗವಾಗಿ ನೆರವೇರಿಸಿದ ಸುಮೀಕ ಪ್ರಕಾಶನ, ಧಾರವಾಡ, ಇದರ ಒಡೆಯರಾದ ಶ್ರೀಮತಿ ಸುಜಾತಾ ಸುದರ್ಶನ ದೇಸಾಯಿ, ವೀಣಾ ದೇಸಾಯಿ, ರೇಖಾ ದೇಸಾಯಿ ಹಾಗೂ ಕವಿತಾ ದೇಸಾಯಿ ಅಭಿನಂದನೆಗೆ ಪಾತ್ರರು.

ಈ [illegible]ದಲ್ಲಿ ಉಪಸ್ಥಿತರಿದ್ದ ಕನ್ನಡದ ಖ್ಯಾತ ವಿದ್ವಾಂಸರೂ, ವಿಮರ್ಶಕರೂ, ಸಾಹಿತಿಗಳೂ ಆಗಿರುವ ಡಾ. ಶಂಕರಮೊಕಾಶಿ ಪುಣೇಕರ, ಕೀರ್ತಿನಾಥ ಕುರ್ತಕೋಟಿ, ಡಾ. ಗಿರಡ್ಡಿ ಗೋವಿಂದರಾಜ, ಜಿ. ಎಸ್. ಅಮೂರ [illegible] ಪ್ರೊ. ವೇಣುಗೋಪಾಲ ಅವರು ತಮ್ಮ ಮಾರ್ಗದರ್ಶನ ನೀಡಿದರು [illegible] ನೂರು ವರ್ಷದ ಇತಿಹಾಸದಲ್ಲಿ ಪ್ರಥಮ ಬಾರಿ ಇವರು ಕನ್ನ[illegible]ದಾರಿ ಸಾಹಿತ್ಯದ ಬಗ್ಗೆ ತುಟಿಬಿಚ್ಚಿದರು.

ಅವರಿಗೆ ನಮ್ಮ ಕೃತಜ್ಞತಗಳು.

ವಿದ್ವಾಂಸರೂ, ವಿಮರ್ಶಕರೂ ಆಗಿರುವ ಶ್ರೀ ಕೀರ್ತಿನಾಥ ಕುರ್ತಕೋಟಿಯವರು ಸಂತೋಷದಿಂದ ಈ ಕಾದಂಬರಿಗೆ ಮುನ್ನುಡಿ ಬರೆದು

ಕೊಟ್ಟಿದ್ದಾರೆ. ಅವರು ನನ್ನ ಮೇಲಿಟ್ಟ ಅಭಿಮಾನ, ಪ್ರೀತಿ, ವಿಶ್ವಾಸ ಗಳಿಗೆ ನಾನು ಚಿರಋಣಿಯಾಗಿರುವೆ.

ಈ ಕಾದಂಬರಿಯನ್ನು 'ತುಷಾರ' ಮಾಸಿಕದಲ್ಲಿ ಪ್ರಕಟಿಸಿದ ಆತ್ಮೀಯ ರಾದ ಚಿರಂಜೀವಿ ಅವರಿಗೆ, ಪುಸ್ತಕ ರೂಪದಲ್ಲಿ ಪ್ರಕಟಿಸಿದ ಮಿತ್ರ ಶ್ರೀ ಬಿ. ಕೆ. ನಂಜುಂಡಪ್ಪನವರಿಗೆ, ಚಿತ್ರ ಕಲಾವಿದರಿಗೆ, ಅಚ್ಚುಕೂಟ ದವರಿಗೆ ನಾನು ಆಭಾರಿ.

ತಮ್ಮ ಪ್ರೀತಿಯ ಹೊರೆಹೊತ್ತು ಅಭಿಮಾನದ ಮಾತುಗಳಿಗೆ, ಮಾರ್ಗ ದರ್ಶನ, ಪ್ರತಿಕ್ರಿಯೆಗಳಿಗೆ ನಾನು ದಾರಿಕಾಯುವೆ.

ವಂದನೆಗಳೊಂದಿಗೆ,

ತಮ್ಮವ

ಸುದರ್ಶನ ದೇಸಾಯಿ

"ಹಳದಿಚೇಳು"-
ಸಾರಸ್ವತಪುರ ಕೊನೆಹಂತ
ರೈಲುಹಳಿ ಸಮೀಪ
ಧಾರವಾಡ-580002

# ಸುದರ್ಶನ ದೇಸಾಯಿ ಅವರ ಕೃತಿಗಳು

| | |
|---|---|
| ತಿರುವು | ಅಪಹರಣ |
| ಹಳದಿಚೇಳು | ಕಪ್ಪುಗಂಟೆ |
| ಕೆಂಪುಜೇಡ | ಬೆಕ್ಕಿನ ಹೆಜ್ಜೆ |
| ಕೆರಳಿದ ಸರ್ಪ | ಕಾಡು ಗುಲಾಬಿ |
| ಹಾಲಿನ ಕಡಲು ಜೇನಿನ ಒಡಲು | ಚಿನ್ನದ ಬೆರಳು |
| ಸಂಜೆ ಮಲ್ಲಿಗೆ | ಬೆಂಕಿಯ ಮಡಿಲಲ್ಲಿ ಮೇಜರ್ ಹೇಮಂತ |
| ಅಮರದೀಪ | ಅಗ್ನಿ ಪರ್ವತ |
| ವಿಚಿತ್ರ ಅಪರಾಧಿ | ಸೂರ್ಯಚಂದ್ರ ಸಾಕ್ಷಿ |
| ನೀರ ಮೇಲಿನ ಹೆಜ್ಜೆಗಳು | ನೀಲಿ ಕಣ್ಣುಗಳು |
| ಚೋರಾಗ್ರಸೇನ | ಎಂಟೆದೆ ಬಂಟ |
| ವೈಪರ್ | ಕೆಲ್ಲಿ |
| ಬ್ರಾನ್ ಶುಗರ್ | ವಿಷಮಂಥನ |
| ಹಾವಿನ ಕಣ್ಣು | ಸೀಳು ನಾಲಿಗೆ |
| ಅಪೂರ್ವ ಕನಸುಗಾರ | ಐರಾವತ |
| ಸೇವಕ | ಆರನೇ ವ್ಯಕ್ತಿ |
| ಹೊಲಿದ ತುಟಿಗಳು | ರಿಂಗೊ |
| ಯಮದೂತರು | ಬಣ್ಣದ ಬೆಕ್ಕು |

# 1

ದಕ್ಷಿಣ ಭಾರತದ ಕಾಶಿ ಎಂದೇ ಪ್ರಖ್ಯಾತವಾಗಿರುವ ಗೋಕರ್ಣಕ್ಕೆ ಬಂದು ನಾಲ್ಕು ದಿನಗಳಾಗಿದ್ದವು. ಎರಡು ದಿನವಿದ್ದು ಮುಂದೆ ಕಾರವಾರಕ್ಕೆ ಹೋಗಬೇಕೆಂದುಕೊಂಡಿದ್ದ ನನ್ನನ್ನು ತಡೆದು ನಾಲ್ಕು ದಿನ ಅಲ್ಲೇ ತಳವೂರುವಂತೆ ಮಾಡಿದ್ದು ಸುಂದರವಾದ ಸಮುದ್ರ ದಂಡೆ, ಅದರೊಂದಿಗೆ ಜೊತೆಜೊತೆಯಾಗಿರುವ ಬೆಟ್ಟಗುಡ್ಡಗಳ ಸಾಲು. ಒಂದು ದೃಷ್ಟಿಯಿಂದ ನಾನು ಪ್ರಕೃತಿಯ ಆರಾಧಕ. ಪ್ರಕೃತಿಯ ಮಡಿಲಲ್ಲಿರುವಾಗ ನನಗೆ ಹಸಿವು ನಿದ್ದೆ ನೀರಡಿಕೆ ಯಾವೂವೂ ಬಾಧಿಸಲಾರವು. ಸೂರ್ಯೋದಯ ನೋಡುತ್ತಾ ಕುಳಿತೆನೆಂದರೆ ಸೂರ್ಯ ನಡು ನೆತ್ತಿಯ ಮೇಲೆ ಬಂದು ಬಿಸಿಲಿನ ಚುರುಕು ಮುಟ್ಟಿಸಿದಾಗಲೇ ಮೆಲೇಳುವುದು, ಸೂರ್ಯಾಸ್ತದ ಸವಿ ಸವಿಯಲು ಬಂದೆನೆಂದರೆ ನಡುರಾತ್ರಿ ಸರಿದಿದ್ದೇ ಗೊತ್ತಾಗುತ್ತಿರಲಿಲ್ಲ. ಹೀಗೆ ಕಾಲ-ಸಮಯಗಳ ಪರಿವೆಯಿಲ್ಲದೇ ಮಗ್ನನಾಗಿರುವುದಕ್ಕೆ ಇನ್ನೊಂದು ಪ್ರಬಲ ಕಾರಣ ನಾನಿನ್ನೂ ಬ್ರಹ್ಮಚಾರಿಯಾಗಿ ಉಳಿದಿರುವುದು. ನನ್ನ ಈ ಹುಚ್ಚಿನ ವಾಸನೆ ಬಡಿದಿದ್ದರಿಂದಲೊ ಏನೋ ಯಾವ ಹೆಣ್ಣೂ ನನ್ನನ್ನು ವರಿಸುವ ಧೈರ್ಯ ಇನ್ನೂ ಏಕೋ ಮಾಡಿರಲಿಲ್ಲ.

ಹಾಗೆ ನೋಡಿದರೆ ನಾನು ಮೆಚ್ಚಿದ್ದ ಹತ್ತಾರು ಹುಡುಗಿಯರಾದರೆ ನನ್ನನ್ನೇ ಮೆಚ್ಚಿದ ಹುಡುಗಿಯರು ಇದಕ್ಕೂ ಹೆಚ್ಚು. ಬಹಳಷ್ಟು ಜನ ನನ್ನ ಹೆಸರಿಗೆ ಮರುಳಾಗಿ ವರಿಸಲು ಬಂದವರೇ ಹೆಚ್ಚು. ನನ್ನನ್ನು ನೋಡಿದ ಮೇಲೆ ಸ್ವಲ್ಪ ನಿರಾಶೆಯಾಗುತ್ತಿತ್ತು. ನಂತರ ನಾನು ನನ್ನ ಹುಚ್ಚು ಹವ್ಯಾಸಗಳ ಬಗ್ಗೆ ಹೇಳಿ ಇದನ್ನೆಲ್ಲ ಸಹಿಸಿಕೊಳ್ಳಬಲ್ಲೆಯಾ? ಎಂದು ಕೇಳುತ್ತಲೂ ಅವರೆಲ್ಲ ಅಂತರ್ಧಾನರಾಗಿ ಬಿಡುತ್ತಿದ್ದರು. ಹೀಗಾಗಿ

ನಾನು ಇನ್ನೂ ವರೆಗೂ ಯಾವ ಬಂಧನಕ್ಕೂ ಒಳಗಾಗದೆ ನನ್ನ ಸ್ವಾತಂತ್ರ್ಯ ಹರಣವಾಗದಂತೆ, ಅದನ್ನೂ ಭದ್ರವಾಗಿ ಕಾಯ್ದಿಟ್ಟುಕೊಂಡು ಬಂದಿದ್ದೇನೆ.

ಫಿಲ್ಮ್ ಹೀರೋಗಳಂತೆ ನಾನು ಸುಂದರನಲ್ಲ....ಆಕರ್ಷಕ ಮೈಕಟ್ಟು ನನಗಿಲ್ಲ. ಎತ್ತರ ಸುಮಾರು ಐದೂಕಾಲು ಫೂಟು. ಐವತ್ತೆಂಟು ಕಿಲೋ ಭಾರ... ಧರಿಸುವುದು ಸುಮಾರಾಗಿರುವ ಪ್ಯಾಂಟು, ಬುಶ್‌ಶರ್ಟು, ಕಾಲಲ್ಲಿ ಯಾವಾಗಲೂ ಧರಿಸುತ್ತ ಬಂದಿದ್ದು ಕೆಂಪು ಬಣ್ಣದ ಸ್ಯಾಂಡಲ್ಸ್. ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನುವ ಆಕರ್ಷಕ ರೂಪವೂ ಸಹ ನನಗಿಲ್ಲ.....ಹಾಂ... ಹೆಣ್ಣು ಮಕ್ಕಳು ಮಾತ್ರ ತಿರುಗಿ ತಿರುಗಿ, ನನ್ನನ್ನು ನೋಡುವುದುಂಟು. ಅದಕ್ಕೆ ಕಾರಣ ನನ್ನ ರೂಪವಂತೂ ಖಂಡಿತ ಅಲ್ಲ ನಾನು ನನ್ನ ಕಣ್ಣುಗಳಿಗೆ ಹಚ್ಚುವ ಕಪ್ಪೇ ಅದಕ್ಕೆ ಕಾರಣ. ಇದರಿಂದಾಗಿಯೇ ನಾನು ನೂರು ಜನರಲ್ಲಿ ಒಂದಾಗದೇ ನೂರರಲ್ಲಿ ಒಬ್ಬನಾಗಿದ್ದೇನೆ. ಸ್ವಲ್ಪ ದೊಡ್ಡದೆನಿಸುವ ಕಣ್ಣುಗಳಿಗೆ ನಾನು ಚಿಕ್ಕಂದಿನಿಂದಲೇ ಕಪ್ಪು ಹಚ್ಚುತ್ತ ಬಂದಿರುವುದರಿಂದ ಸುಮಾರಾಗಿರುವ ನನ್ನ ಮುಖ ಸೌಂದರ್ಯಕ್ಕೆ ಮತ್ತೊಂದು ಬಗೆಯ ಆಕರ್ಷಣೆ ಒದಗಿದೆ ಎಂದರೆ ತಪ್ಪಾಗದು.

ದಯವಿಟ್ಟು ಕ್ಷಮಿಸಿ....

ನಾನು ಏನನ್ನೋ ಹೇಳುತ್ತ ಎತ್ತಲೊ ಹೊರಟಿರುವೆ.

ಈಗ ನೇರವಾಗಿ ವಿಷಯಕ್ಕೆ ಬರುತ್ತೇನೆ. ನಾನೊಬ್ಬ ಲೇಖಕ. ಕಾದಂಬರಿಕಾರ. ನನ್ನ ಕೃತಿಗಳು ಜನರ ಮೆಚ್ಚುಗೆ ಗಳಿಸಿದ್ದರಿಂದಾಗಿ ಅವುಗಳಲ್ಲಿ ಬಹಳಷ್ಟು ರಜತ ಪರದೆಯ ಮೇಲೂ ಬಂದಿರುವುದರಿಂದಾಗಿ ನನ್ನ ಬಗ್ಗೆ ಜನರಿಗೆ ಅಪಾರಪ್ರೀತಿ, ಅಭಿಮಾನ. ಹರಯದ ಹುಡುಗರು ತಮಗೂ ಚಲನಚಿತ್ರದಲ್ಲಿ ಪಾತ್ರ ಕೊಡಿಸುವಂತೆ ಕೇಳಲು ಬಂದರೆ, ಹುಡುಗಿಯರು ನನ್ನನ್ನು ನೋಡಿ ಮಾತನಾಡಿಸುವ, ನನ್ನ ಮದುವೆಯಾಗಿರದಿದ್ದರೆ ಮದುವೆಯಾಗಬೇಕೆಂಬ ಆಶೆಯಿಂದ ನನ್ನೆಡೆ ಬರುತ್ತಿರುತ್ತಾರೆ.... ಅವರಲ್ಲಿ ನಾನು ನಾಲ್ಕಾರು ಜನರನ್ನು ಮೆಚ್ಚಿದ್ದರೂ ಅವರೊಂದಿಗೆ ಮದುವೆಯಾಗುವ ಯೋಗ ಮಾತ್ರ ಕೂಡಿಬಂದಿಲ್ಲ.

ನಾಲ್ಕು ತಿಂಗಳು ಒಂದೇ ಸಮನೆ ಬರಹದಲ್ಲಿ ತೊಡಗಿದ್ದರಿಂದ ಸ್ವಲ್ಪ

ಕಾಲ ವಿಶ್ರಾಂತಿ ಪಡೆದರಾಯಿತೆಂಬ ಉದ್ದೇಶದಿಂದ ನಾನು ದಕ್ಷಿಣ ಭಾರತದ ಪ್ರವಾಸಕ್ಕೆ ಬಂದೆ. ಅದರೊಂದಿಗೆ ಮುಂದಿನ ತಿಂಗಳು ಪ್ರಸಿದ್ಧ ಪತ್ರಿಕೆಯೊಂದಕ್ಕೆ ಧಾರಾವಾಹಿಯಾಗಿ ಕಾದಂಬರಿ ಕೊಡಲು ಒಪ್ಪಿಕೊಂಡಿದ್ದರಿಂದ ಅದಕ್ಕೊಂದು 'ಪ್ಲಾಟ್' ಹುಡುಕುವ ಉದ್ದೇಶವೂ ನನ್ನದಾಗಿತ್ತು. ಗೋಕರ್ಣ, ಕೋಟಿತೀರ್ಥ, ಜಟಾಯು ತೀರ್ಥ, ರಾಮಲಿಂಗ ದೇವಸ್ಥಾನ, ಇವೆಲ್ಲ ನನಗೆ ತುಂಬಾ ಹಿಡಿಸಿದವು. ಗಂಟೆಗಟ್ಟಲೆ ಓಡಾಡಿ ಇವನ್ನೆಲ್ಲ ಪುನಃ ಪುನಃ ನೋಡಿದೆ.

ಇಂದು ಕೊನೆಯ ದಿನ ನೋಡಿಕೊಂಡು ನಾಳೆ ಇಲ್ಲಿಂದ ಹೊರಡುವುದು ಎಂದು ನಿರ್ಧರಿಸಿ ಸಂಜೆಗೆ ಮುನ್ನ ಬಂದು ಜಟಾಯು ತೀರ್ಥ ಬೆಟ್ಟವನ್ನೇರಿ ಸಮುದ್ರ ನಿರೀಕ್ಷಿಸುತ್ತ ಕುಳಿತಿರುವೆ. ಪಶ್ಚಿಮದಂಚಿನಲ್ಲಿ ಸೂರ್ಯ ತಂಗುವ ಸನ್ನಾಹದಲ್ಲಿದ್ದಾನೆ, ಬಾನೆಲ್ಲ ಕೆಂಪಾಗಿದೆ. ಅದರ ಛಾಯೆ ಸಮುದ್ರದ ಮೇಲೆಲ್ಲ ಹರಡಿ ಒಂದು ಬಗೆಯ ರುದ್ರ ಸೌಂದರ್ಯಕ್ಕೆಡೆ ಮಾಡಿ ಕೊಟ್ಟಿದೆ. ಕೆಂಬಣ್ಣದ ಛಾಯೆಯ ಮಧ್ಯೆ ತೇಲುತ್ತಿರುವ ನಾಲ್ಕಾರು ಮೀನುಗಾರರ ದೋಣಿಗಳು ವಿಚಿತ್ರ ಸೌಂದರ್ಯ ಹೊರಸೂಸುತ್ತಿವೆ. ನನ್ನ ಕಣ್ಣುಗಳು ಸೂರ್ಯಾಸ್ತದ ಸೌಂದರ್ಯ ಸವಿಯುತ್ತಿದ್ದರೂ ಮನಸ್ಸು ಮಾತ್ರ ರಾಮಾಯಣದ ಬಗ್ಗೆ ಆಲೋಚಿಸುತ್ತಿದೆ.

ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಆ ದುಷ್ಟನನ್ನು ಎದುರಿಸಿದ್ದು ಜಟಾಯು ಪಕ್ಷಿ. ರಾವಣ ಅದರ ರೆಕ್ಕೆಗಳನ್ನು ಕತ್ತರಿಸಿದಾಗ ರಕ್ತ ಕೆಳಗೆ ಧಾರಾಕಾರವಾಗಿ ಸುರಿಯಿತು. ಜಟಾಯು ಅಲ್ಲೇ ಧರಾಶಾಯಿಯಾಯಿತು. ಅಂದು ರಾವಣ ಜಟಾಯುವನ್ನು ಹೊಡೆದುರುಳಿಸಿದ್ದು ಇದೇ ಸ್ಥಾನ. ಅದರ ರಕ್ತ ಸುರಿದಿದ್ದು ಸಧ್ಯ ತಾನು ಕುಳಿತ ಬಂಡೆ ಮೇಲೆಯೋ ಎಂಬ ಪ್ರತೀತಿ. ಇದು ಸರಿ ಎನ್ನುವುದಕ್ಕೆ ನಾನು ಕುಳಿತ ಬಂಡೆಯೊಂದೇ ಕೆಂಪಾಗಿದ್ದು ಈ ಒಂದು ಬಂಡೆ ಬಿಟ್ಟು ಸುತ್ತಲೂ ದೃಷ್ಟಿ ಹರಿಸಿದರೆ ಎಲ್ಲಾ ಕಪ್ಪು ಬಂಡೆಗಳೇ. ಜಟಾಯುವಿನ ರಕ್ತ ಈ ಬಂಡೆಯ ಮೇಲೆ ಬಿದ್ದುದರಿಂದ ಬಂಡೆ ಕೆಂಪಾಯಿತು ಎಂಬುದನ್ನು ಒಂದು ದೃಷ್ಟಿಯಿಂದ ನಂಬಬೇಕಾಗುತ್ತದೆ. ಬಂಡೆಗಲ್ಲಿನ ಪಕ್ಕದಲ್ಲೇ ಕಿರುಬೆರಳಿನ ಗಾತ್ರದಲ್ಲಿ ಹರಿಯುವ ಝರಿ. ಅದೇ ರಾಮತೀರ್ಥವಂತೆ, ಜಟಾಯು ಸಾಯು

ವಾಗ ರಾಮ ಇದೇ ಝರಿಯ ನೀರನ್ನು ಅದರ ಬಾಯಿಗೆ ಹಾಕಿದನಂತೆ. ಅದಕ್ಕೆ ಅಂದಿನಿಂದ ಇದು ಜಟಾಯು ಬಂಡೆ. ಝರಿ ರಾಮತೀರ್ಥ ಎಂದು ಹೆಸರಾಗಿವೆ.

ಪ್ರಶಾಂತವಾಗಿದ್ದ ವಾತಾವರಣ ಒಮ್ಮೆಲೆ ಕಲಕಿದಂತಾಯಿತು ಹತ್ತಾರು ಕಂಠಗಳು, ಚೀರಾಟ, ನಗೆ, ಹಾಸ್ಯ, ಕೇಕೆ, ಸಂಭ್ರಮ ಎಲ್ಲಾ ಒಟ್ಟುಗೂಡಿ ಗಾಳಿಯಲ್ಲಿ ತೇಲುತ್ತ ಬಂದು ನನ್ನ ಕಿವಿಗಳಿಗೆ ತಾಕಿದಾಗ ಸೂರ್ಯನಿಂದ ಕಣ್ಣು ಕಿತ್ತು ದಂಡೆ ಕಡೆ ನೋಡಿದೆ. ಆದೇ ಬಂದು ನಿಂತ ಸೂಪರ್ ಡೀಲಕ್ಸ್ ಬಸ್ಸಿನಿಂದ ಪ್ರವಾಸಿಗರು ಇನ್ನೂ ಇಳಿಯುತ್ತಿದ್ದರು. ಈಗಾಗಲೇ ಇಳಿದಿದ್ದ ಹತ್ತಿಪ್ಪತ್ತು ಪ್ರವಾಸಿಗರು ಹರ್ಷದಿಂದ ಕೇಕೆ ಹಾಕುತ್ತ ಸಮುದ್ರದೆಡೆ ಓಡಿಬರುತ್ತಿದ್ದರು.

ನಾನು ಕುಳಿತಲ್ಲಿಂದ ಸಮುದ್ರ ದಂಡೆ ಸುಮಾರು ದೂರ. ದಂಡೆ ಮೇಲಿದ್ದವರ ಕಣ್ಣು, ಮೂಗು ನನಗೆ ಸರಿಯಾಗಿ ಕಾಣದಿದ್ದರೂ ವ್ಯಕ್ತಿಗಳು ನಿಚ್ಚಳವಾಗಿ ಕಾಣುತ್ತಿದ್ದರು. ಇಳಿದವರಲ್ಲಿ ಪುರುಷರೇ ಹೆಚ್ಚು. ಹತ್ತು ಹನ್ನೆರಡು ಜನ ಮಾತ್ರ ಸ್ತ್ರೀಯರಿರಬಹುದು.

ಅವರೆಡೆ ನೋಡುತ್ತಿದ್ದ ನಾನು ಒಮ್ಮೆಲೆ ಚಕಿತನಾದೆ. ಅಲ್ಲಿಯವರೆಗೂ ಸುಪ್ತವಾಗಿದ್ದ ನನ್ನ ಇಂದ್ರಿಯಗಳು ಜಾಗ್ರತವಾದವು. ಎಲ್ಲರಿಗಿಂತ ಮುಂದೆ ಇರುವ ತರುಣಿ ಹಿಂದೆ ಮುಂದೆ ನೋಡುತ್ತ ನಾನು ಕುಳಿತೆಡೆಗೆ ಧಾವಿಸುತ್ತಿದ್ದಳು. ಅವಳ ನಡಿಗೆಯಲ್ಲಿ ಏನೋ ಒಂದು ಬಗೆಯ ಆಕರ್ಷಣೆ. ಕೆಂಪು ಶರ್ಟ್ ತೊಟ್ಟು ಕೆಳಗಡೆ ಕಡುನೀಲಿ ಬಣ್ಣದ ಸ್ಕರ್ಟ್ ತೊಟ್ಟ ಆಕೆ ರೂಪಸಿಯಾಗಿರಲೇಬೇಕೆಂದು ನನ್ನ ಮನಸ್ಸು ಹೇಳಿತು. ನನಗರಿಯದಂತೆಯೇ ನಾನು ಮೇಲಕ್ಕೆದ್ದು ಕೆಳಗೆ ಇಳಿಯತೊಡಗಿದೆ. ಏನೋ ಒಂದು ಬಗೆಯ ಕಾತುರ. ಆ ತರುಣಿಯನ್ನು ಬೇಗ ನೋಡಬೇಕೆಂಬ ಆತುರ ಎರಡೂ ಸೇರಿ ನಾನು ವೇಗವಾಗಿ ಬಂಡೆಗಳಿಂದ ಇಳಿಯತೊಡಗಿದೆ. ಇನ್ನೊಂದು ಚಿಕ್ಕ ಬಂಡೆ ಎದುರಿಗಿದ್ದದ್ದು ಅದನ್ನು ದಾಟಿದರೆ ಆಯ್ತು, ನಾನು ಸಮುದ್ರ ದಂಡೆಯ ಕೊನೆ ತುದಿಗೆ ಪದಾರ್ಪಣ ಮಾಡುತ್ತೇನೆ. ಅಲ್ಲಿಂದ ನೇರವಾಗಿ ನಡೆಯುತ್ತಾ ಹೋದರೆ ಎರಡು ಮೂರು ನಿಮಿಷಗಳಲ್ಲಿ ನಾನವರನ್ನು ತಲುಪಬಹುದು.

ಚಿಕ್ಕ ಬಂಡೆಯ ಬಳಿ ಬಂದಾಗ ನನಗೆ ತುಂಬಾ ನಿರಾಶೆಯಾಯಿತು. ನಾನು ಯಾರಿಗಾಗಿ ಹಿಮಾಲಯ ಪರ್ವತದಿಂದ ಕೆಳಗಿಳಿದು ಬಂದಿದ್ದೇನೋ ಆ ರೂಪಸಿ ನನಗೆಲ್ಲೂ ಕಂಡು ಬರಲಿಲ್ಲ....ಸಮುದ್ರದ ನೀರಲ್ಲಿ ಎಲ್ಲಿಯಾದರೂ ಇರಬಹುದೆಂದು ಅತ್ತಿತ್ತ ಕಣ್ಣಾಡಿಸಿದೆ. ಗೋಚರಿಸಲಿಲ್ಲ...ಒಮ್ಮೆಂದೊಮ್ಮೆಲೆ ಗಾಳಿ ಬಿಟ್ಟ ಬಲೂನಿನಂತಾಯಿತು ನನ್ನ ಸ್ಥಿತಿ....ಚಿಕ್ಕ ಬಂಡೆಯಿಂದ ಇಳಿಯುತ್ತ ಉಸುಕಿನಲ್ಲಿ ಕಾಲಿಡುವುದಕ್ಕೂ ಬಂಡೆ ಎಡಭಾಗದಿಂದ ಗಾಳಿಯಂತೆ ಬಂದ ಆಕೆ ನನಗೆ ಢೀ ಕೊಟ್ಟಳು. ಆಯತಪ್ಪಿ ನಾನು ಕೆಳಗೆ ಬೀಳುತ್ತಿದ್ದಂತೆ ನನಗೆ ತೀರ ಹತ್ತಿರದಲ್ಲಿದ್ದ ಅವಳನ್ನು ಎಳೆದುಕೊಂಡೆ. ಇದರಿಂದಾಗಿ ಇಬ್ಬರು ಮರಳಿನಲ್ಲಿ ಬಿದ್ದು ಎರಡು ಮೂರು ಬಾರಿ ಉರುಳಾಡಿದೆವು. ಆಕೆ ಸಂಪೂರ್ಣವಾಗಿ ನನ್ನನ್ನು ಆವರಿಸಿದ್ದಳು. ಅವಳ ದೇಹ ನನ್ನ ದೇಹದೊಂದಿಗೆ ಬೆಸೆದುಕೊಂಡಿತ್ತು. ಅವಳೆರಡೂ ಕೈಗಳು ನನ್ನನ್ನು ಬಲವಾಗಿ ತಬ್ಬಿಕೊಂಡಿದ್ದವು. ಕ್ಷಣಕಾಲ ರೋಮಾಂಚನ ಉಂಟಾದರೂ ಮನಕ್ಕೆ ಹಿತವೆನಿಸಿದರೂ ಮರುಕ್ಷಣ ಭೀತಿಯಿಂದ ತತ್ತರಿಸಿ ಬಿಡಿಸಿಕೊಂಡು ಮೇಲೇಳಲು ಪ್ರಯತ್ನಿಸಿದೆ. ಅವಳ ಹಿಡಿತ ಬಲವಾಯಿತು. ಆಕೆ ಮತ್ತೆದ್ದು ನನಗೆ ಅಂಟಿಕೊಂಡಳು. ಅವಳ ಶರೀರದಲ್ಲಿದ್ದ ಲಘುವಾದ ಕಂಪನದ ಕಲ್ಪನೆ ನನಗೆ ಸ್ಪಷ್ಟವಾಗಿ ಆಯಿತು. ಬೆದರಿದ್ದ ಹರಿಣಿಯಂತೆ ಆಕೆ ನನ್ನನ್ನು ಆಶ್ರಯಿಸಿದ್ದಳು. ನನ್ನ ಮುಖ ಸಮುದ್ರದೆಡೆಯಿದ್ದರೆ, ಆಕೆ ಸಮುದ್ರದೆಡೆ ಬೆನ್ನು ಮಾಡಿದ್ದಳು. ನಾನು ಅವಳ ಆಲಿಂಗನದಲ್ಲಿದ್ದಂತೆಯೇ ಯಾರಾದರೂ ನಮ್ಮನ್ನು ಗಮನಿಸುತ್ತಿದ್ದಾರೆಯೇ ? ಎಂದು ಸಮುದ್ರದತ್ತ ದೃಷ್ಟಿ ಹರಿಸಿದೆ....ನೂರಡಿ ದೂರದಲ್ಲಿರುವ ನಾಲ್ಕೈದು ರೌಡಿಯಂತಿರುವವರ ಕಣ್ಣುಗಳು ನಮ್ಮ ಮೇಲೆ ನಾಟಿದ್ದು ತಿಳಿದು ನಾನು ಭೂಮಿಗಿಳಿದು ಹೋದೆ.

ಇವಳನ್ನು ಹಿಂಬಾಲಿಸಿಕೊಂಡೇ ಬಂದಿರುವ ಅವರು ಈಗೋ ಇನ್ನೊಂದು ಕ್ಷಣಕ್ಕೊ ನನ್ನ ಮೇಲೆ ಬಿದ್ದು ಹಣ್ಣುಗಾಯಿ ನೀರುಗಾಯಿ ಮಾಡುತ್ತಾರೆಂದು ಕಲ್ಪಿಸಿ ಮನದಲ್ಲೇ ನನ್ನನ್ನು ಕಾಪಾಡುವಂತೆ ದೇವರಲಿ ಮೊರೆ ಇಟ್ಟೆ.

ಆಕೆ ನನ್ನ ಕಿವಿಯಲ್ಲಿ ಪಿಸುಗುಟ್ಟಿದಳು.

"ಅವರು ಹೋದರಾ ?"

"ಯಾರು ?" ನಾನೂ ಅಷ್ಟೇ ಮೆಲುವಾಗಿ ಕೇಳಿದೆ.

"ನನ್ನ ಹಿಂದಿದ್ದಾರಲ್ಲ....ಥಾಂಡಿಗರು....ಅವರೇ"

"ಆಂ ? ಅವರು ನಿನ್ನ ಸಂಗಡಿಗರಲ್ಲವೆ ?"

"ಹಾಗಾದರೆ ?"

"ಅದೆಲ್ಲಾ ಆಮೇಲೆ....ಮೊದಲು ಹೇಳು....ಅವರು ಹೋದರಾ ?"

"ಇಲ್ಲ....ನಮ್ಮ ಕಡೆಗೇ ನೋಡುತ್ತಿದ್ದಾರೆ."

ಮತ್ತಷ್ಟು ಜೋರಾಗಿ ನನ್ನನ್ನಾಕೆ ತಬ್ಬಿಕೊಂಡಳು. ಅದರೊಂದಿಗೆ ಅವಳ ಎರಡೂ ಕೈಗಳು ನನ್ನ ದೇಹದ ಮೇಲೆಲ್ಲಾ ಓಡಾಡತೊಡಗಿ ಅವ್ಯಕ್ತ ಆನಂದ ಅನುಭವಿಸುತ್ತ ನಾನು ಕಣ್ಣು ಮುಚ್ಚಿದೆ.. ಒಂದೆರಡು ನಿಮಿಷಗಳ ನಂತರ ಕಣ್ತೆರೆದಾಗ ಅವರಿರಲಿಲ್ಲ, ಸಮಾಧಾನವಾಯಿತು.

"ಅವರಿಲ್ಲ... ಹೊರಟುಹೋದರು"

ನನ್ನನ್ನು ನಿರ್ದಾಕ್ಷಿಣ್ಯವಾಗಿ ಹಿಂದಕ್ಕೆ ತಳ್ಳಿದ ಆಕೆ ಎದ್ದು ನಿಂತು ಪಟ ಪಟ ಮರಳು ಜಾಡಿಸಿಕೊಂಡು ಸಮುದ್ರಕ್ಕೆ ಬೆನ್ನು ಮಾಡಿ ಊರಿನೆಡೆ ಓಡಿದಳು.....

ಒಂದೈದು ನಿಮಿಷ ಮಂಕಾಗಿ ನಿಂತೆ ನಾನು ಅವಳು ಹೋದ ದಿಕ್ಕಿನತ್ತಲೇ ಹೆಜ್ಜೆ ಹಾಕಿದೆ. ಅರ್ಧಗಂಟೆ ಊರೆಲ್ಲಾ ಜಾಲಾಡಿಸಿದೆ. ಆಕೆಯ ದರ್ಶನವಾಗಲೇ ಇಲ್ಲ. ತುಂಬಾ ನಿರಾಶೆಯಾಯಿತು. ದೇವಸ್ಥಾನದೊಳಗೆ ಸುತ್ತಿದೆ, ಅಲ್ಲಿಯೂ ಇಲ್ಲ. ಎಲ್ಲಿ ಹಾಳಾಗಿ ಹೋದಳೋ ಎಂದು ಶಪಿಸಿ ಭಟ್ಟರ ಮನೆಕಡೆ ನಡೆದೆ..

ವಿಶ್ವೇಶ್ವರ ಭಟ್ಟ, ಗಜಾನನ ಭಟ್ ಕಡಪಾ ಅವರ ಅತಿಥಿಯಾಗಿ ನಾನು ಉಳಿದುಕೊಂಡಿದ್ದೆ. ಊಟ ತಿಂಡಿ ಎಲ್ಲಾ ಅವರ ಮನೆಯಲ್ಲಿ. ಹಿತ್ತಲಲ್ಲಿಯ ತೆಂಗಿನತೋಟದ ಮಧ್ಯಭಾಗದಲ್ಲೊಂದು ಚಿಕ್ಕ ಕೋಣೆ. ಅದರಲ್ಲೇ ನಾನು ನಾಲ್ಕು ದಿನಗಳಿಂದ ವಾಸವಾಗಿದ್ದೆ. ಬೆಳಗ್ಗೆ ನಾನು ಊರಿಗೆ ಹೊರಡುವುದಾಗಿ ತಿಳಿಸಿ ಜೇಬಿನಿಂದ ಒಂದಿಷ್ಟು ಹಣವನ್ನು ತೆಗೆದು ಭಟ್ಟರ ಕೈಗೆ ಹಾಕಿದೆ. ಅದು ಎಷ್ಟಿದೆ-ಎಂದೂ ಸಹ ಆವರು ನೋಡದೆ ಜೇಬಿಗೆ

ಹಾಕಿಕೊಂಡು "ಮತ್ತೆ ಈ ಕಡೆ ಬಂದಾಗ ನಮ್ಮಲ್ಲಿಗೆ ಬನ್ನಿ" ಎಂದು ಆತ್ಮೀಯತೆಯಿಂದ ನುಡಿದರು. ನಾನು ತಲೆಯಾಡಿಸಿ ಮೇಲೆದ್ದ....ರೂಮಿಗೆ ಬಂದೆ.

ಒಂಭತ್ತು ಗಂಟೆ ಸುಮಾರಿಗೆ ಭಟ್ಟರ ಮೊಮ್ಮಗ ಸುನೀಲ ಊಟ ತಂದು ಇಟ್ಟ.... ಹಸಿವೆಯಾಗಿದ್ದರೂ ಊಟ ಬೇಡವೆನಿಸಿತು. ಉಂಡ ಶಾಸ್ತ್ರಮಾಡಿ ಕೈತೊಳೆದುಕೊಂಡೆ. ಹಾಸಿಗೆ ಮೇಲೆ ಉರುಳಿ ಆ ಅಪ್ಸರೆ ಬಗ್ಗೆ ಯೋಚಿಸತೊಡಗಿದೆ.

ಹೌದು, ನಿಜವಾಗಿಯೂ ಅವಳು ಅಪ್ಸರೆಯೇ.

ಇವಳಂಥ ಸುಂದರಿಯನ್ನು ನಾನು ಇನ್ನೂವರೆಗೂ ಕಂಡಿರಲಿಲ್ಲ. ಅವಳ ಮುಖ, ಭಯತುಂಬಿದ ವಿಶಾಲಾಕ್ಷಿಗಳು, ಕಂಪಿಸುವ ದೇಹ, ಆ ಬಿಸಿಯಪ್ಪುಗೆ ಎಲ್ಲಾ ನೆನಪಾಗಿ ವೇದನೆಯಿಂದ ನರಳಿದೆ. ಹಾಸಿಗೆಯಲ್ಲಿ ಹಾಗೇ ಉರುಳಾಡಿದೆ. ಅಯ್ಯೋ.... ದೇವರೇನಾದರೂ ಇದ್ದಿದ್ದು ನಿಜವೇ ಆಗಿದ್ದು ಆತ ನನ್ನೆದುರು ಪ್ರತ್ಯಕ್ಷನಾಗಿ ಏನುಬೇಕು ಕಂದಾ ? ಏಕೀ ವ್ಯಥೆ ? ಎಂದು ಕೇಳಬಾರದೆ ? ಎಂದೆಲ್ಲಾ ಹುಚ್ಚು ಹುಚ್ಚಾಗಿ ಯೋಚಿಸಿ ಜೋರಾಗಿ ನಕ್ಕ.... ಎಲ್ಲಾ ಬದಿಗೆ ತೆಗೆದಿಟ್ಟು ನಿದ್ದೆಗೆ ಶರಣಾದರೆ ಸಾಕು ಎಂದುಕೊಂಡು ಭದ್ರವಾಗಿ ಕಣ್ಣುಮುಚ್ಚಿದರೆ ಆ ರೂಪಸಿ ಮುಚ್ಚಿದ ಕಣ್ಣುಗಳ ಗೋಡೆ ಒಡೆದು ಕೊಂಡು ಮನದಾಳದ ಮನೆಗೆ ಲಗ್ಗೆ ಹಾಕುವುದೆ ? ಥೂ.... ಈ ಹೆಣ್ಣೆಂದರೆ ಎಂಥ ಮಾಯೆ.... ಎಂಥಾ ಹಿಂಸೆ ಎಂದು ಹಳಿದೆ.... ಏನೇ ಮಾಡಿದರೂ ನೆಮ್ಮದಿ ಸಿಗದಾಗಲು ಎದ್ದು ಕಿಟಕಿ ಬಳಿ ನಿಂತು ತೆಂಗಿನ ತೋಟಗಳಲ್ಲಿ ಕಣ್ಣಾಡಿಸಿದೆ. ಯಾರೋ ನಾನು ಕಿಟಕಿಗೆ ಬರುತ್ತಲೂ ಪಕ್ಕಕ್ಕೆ ಸರಿದಂತಾಯಿತು. ಒಂದೇ ಒಂದು ಕ್ಷಣವಷ್ಟೇ ಕಣ್ಣಿಗೆ ಬಿದ್ದ ದೃಶ್ಯವದು. ಯಾರಿರಬಹುದು ?.... ಅಥವಾ ನನ್ನ ಭ್ರಮೆಯೋ....

ಮರುಕ್ಷಣವೇ ದೇವರೆ ಆ ಆಕೃತಿ ಅಪ್ಸರೆಯದೇ ಆಗಿರಲಿ, ಮೆಲ್ಲನೆ ಅಡಿಯಿಡುತ್ತ ಆಕೆ ನನ್ನ ಕೋಣೆಗೆ ಬರುವಂತಾಗಲಿ ಎಂದು ಬೇಡಿಕೊಂಡು ನಕ್ಕೆ. ಮುಂದೆ ನಾಲ್ಕೈದು ನಿಮಿಷಗಳು ಕಳೆದಿರಬಹುದು. ಬಾಗಿಲ ಮೇಲೆ ಬೆರಳಿನಿಂದ ಟಿಕ್ ಟಿಕ್ ಎಂದು ಮೆಲುವಾಗಿ ಬಾರಿಸಿದ ಸದ್ದು ಕೇಳಿಸಿತ್ತು. ನಯವಾಗಿ ಬಾರಿಸಿದ್ದು ಕೇಳಿದರೆ ಖಂಡಿತ ಅದು ಮಹಿಳೆಯ

ಹಸ್ತವಿರಬೇಕು ಎಂದುಕೊಂಡೆ. ಮನದಲ್ಲಿ ಅಡಗಿದ್ದ ಜಾಡ್ಯ ಓಡಿಹೋಗಿ ಲವಲವಿಕೆ ಮೂಡಿತು. ಒಬ್ಬರನ್ನೊಬ್ಬರು ಅಪ್ಪಿಕೊಂಡು ಮರಳಲ್ಲಿ ಉರುಳಾಡಿದ್ದು ನೆನಪಾಗಿ ಮೈ ಬಿಸಿಯಾಯಿತು.

ಭರಕ್‌ನೆ ಬಾಗಿಲು ತೆರೆದೆ. ಮುಖದ ಮೇಲೊಂದು ಬಲವಾದ ಗುದ್ದು ಬಿತ್ತು. 'ಅಯ್ಯಪ್ಪೋ ಸತ್ತೆ' ಎಂದು ಕಿರುಚಿ ಹಿಂದೆಸರಿದೆ. ಎರಡೂ ಕೈ ಬಾಯಿಯನ್ನು ಒತ್ತಿ ಹಿಡಿದಿದ್ದವು. ನೋವು ತಡೆಯಲಾರದೇ ಕಣ್ಣುಮುಚ್ಚಿ ನಿಂತೆ.... ಮೈ ಥರಥರ ನಡುಗುತ್ತಿತ್ತು. ಸ್ವಲ್ಪ ಸಮಯ ಬಿಟ್ಟು ಕೈತೆಗೆದೆ. ಕಣ್ಣುಬಿಟ್ಟು ನೋಡಿದೆ.... ಕೈಎಲ್ಲಾ ರಕ್ತಮಯ.... ನನ್ನ ಅವತಾರ ಮುಗಿಯಿತು ಎಂದುಕೊಂಡು ಬಾಗಿಲತ್ತ ನೋಡಿದೆ. ತೆರೆದ ಬಾಗಿಲು. ಅಲ್ಲಿ ಯಾರೂ ಇಲ್ಲ.... ಅಂ ? ಹಾಗಾದರೆ ನನ್ನ ಮುಖಕ್ಕೆ ಗುದ್ದಿದವರಾರು ?.... ಮರುಕ್ಷಣ ನೋವು ಮಾಯವಾಗಿ ಭಯ ಮೂಡಿತು. ದೆವ್ವ.... ಭೂತವೇನಾದರೂ ಇರಬಹುದೆ ?.... ಬಾಗಿಲು ಮುಚ್ಚಲು ಧೈರ್ಯ ಸಾಲಲಿಲ್ಲ.... ಚೊಂಬಿನಲ್ಲಿದ್ದ ನೀರನ್ನು ತಲೆ ಮೇಲೆ ಸುರಿದುಕೊಂಡೆ. ಹಾಗೆ ಬಾಯಿ ಸಹ ತೊಳೆದುಕೊಂಡೆ. ಕೆಂಪು ಬಣ್ಣದ ಪನ್ನೀರು ಕೋಣೆಯ ಗೋಡೆಗಳಿಗೆ ಚಿತ್ತಾರ ಹಾಕಿತು. ಸ್ವಲ್ಪ ಹಾಯೆನಿಸಿತು. ಬಾಗಿಲೆಡೆ ಮುಖ ಮಾಡಿ ನಿಂತು "ಯಾರು ? ಯಾರು ಹೊರಗೆ ? ಎಂದು ಕೇಳಿದೆ, ಉತ್ತರವಿಲ್ಲ ಜೋರಾಗಿ "ಯಾಕೆ ಮಾತಾಡೋದಿಲ್ಲ – ಯಾರಿದ್ದೀರಿ ಹೊರಗೆ ?" ಕೂಗಿದೆ. "ನಾವು.... ನಾವು...." ಎಂಬ ನಾಲ್ಕೈದು ಜನ ಉತ್ತರದೊಂದಿಗೆ ಒಳಗೆ ನುಗ್ಗಿದರು. ಒಬ್ಬಾತ ಬಾಗಿಲುಮುಚ್ಚಿ ಬೋಲ್ಟ್ ಹಾಕಿದಾಗ....ನನ್ನ ಚಡ್ಡಿ ಒದ್ದೆಯಾಗಿತ್ತು.

ಅವರನ್ನು ಎಲ್ಲೋ ನೋಡಿರುವೆ ಎಂದುಕೊಂಡೆ. ತಟಕ್‌ನೆ ನೆನಪಾಯಿತು ಸಂಜೆ ಪ್ರವಾಸಿಗರ ಬಸ್ಸಿನಿಂದ ಕೆಳಗೆ ಇಳಿದಿದ್ದರು. ಆ ಅಪ್ಸರೆಯ ಹಿಂದೆ ಬಂದಿದ್ದರು. ಇವರನ್ನೇ ಕುರಿತು ಆಕೆ ಅವರು ಹೋದರಾ ? ಎಂದು ಕೇಳಿದ್ದು.... ಇವರೇಕೆ ನನ್ನ ಬಳಿ ಬಂದರು.... ನನಗೇಕೆ ಗುದ್ದು ಕೊಟ್ಟರು.

"ಎಲ್ಲಿ ಆಕೆ ?" ಗೊಗ್ಗರು ಕಂಠದಲ್ಲಿ ಕುರುಚಲು ಗಡ್ಡದ ವ್ಯಕ್ತಿ ಕೇಳಿದ,

"ಯಾರು ?...." ಗೊತ್ತಾಗದೆ ಸಹಜವಾಗಿ ಕೇಳಿದೆ.

ಪರಪರ ಗಡ್ಡ ಕೆರೆದುಕೊಂಡು ಕಹಿ ಮುಖ ಮಾಡಿದ ಆತ ಮಿಂಚಿನ ವೇಗದಲ್ಲಿ 'ಫಟೀರ್' ಎಂದು ನನ್ನ ಕೆನ್ನೆ ಮೇಲೆ ಬಾರಿಸಿದ. ಹರಿತವಾದ ಬ್ಲೇಡು ಸರಕ್ ಎಂದು ಕೆನ್ನೆ ಸವರಿ ಹೋದಂತಾಯಿತು. 'ಹಾ' ಎಂದು ನರಳುತ್ತ ಕೆನ್ನೆ ಹಿಡಿದುಕೊಂಡೆ. ಎಡಕ್ಕೆ ನಿಂತವ ಸರಿದು ಹೊಟ್ಟೆಗೆ ಜಾಡಿಸಿ ಒದ್ದ. ಉಸಿರು ಸಿಕ್ಕಿದಂತಾಗಿ ಬಿಕ್ಕುತ್ತ ಕೆಳಕ್ಕೆ ಬಗ್ಗಿದೆ. ಬಲಗಡೆ ಇದ್ದವ ಸರಿದಂತೆ ಕಂಡಿತು. ಮುಂದಿನ ಕ್ಷಣ ಬೆನ್ನ ಮೇಲೆ ಬೊಕ್ ಎಂದು ಸದ್ದಿನೊಂದಿಗೆ ಏಟು ಬಿದ್ದಾಗ ನೆಲಕಚ್ಚಿದ್ದೆ. ಮುಂದೆ.... ನನಗೆ ಎಚ್ಚರ ತಪ್ಪಿತ್ತು.

ವಿಪರೀತ ಚಳಿ ಎನಿಸಿತು. ಹಿಮಪರ್ವತದ ಮೇಲೆ ನಾನು ಬೆತ್ತಲೆಯಾಗಿ ಬಿದ್ದುಕೊಂಡಿರಬೇಕು ಎಂದುಕೊಂಡು ಕಣ್ತೆರೆದೆ. ಭರ್ರ್ ಎಂದು ಬೀಸಿಬಂದ ಗಾಳಿಗೆ ಕಟಕಟ ಹಲ್ಲುಕಡಿದೆ. ನನ್ನ ಮೈಮೇಲೆ ಚಡ್ಡಿಯೊಂದನ್ನು ಬಿಟ್ಟು ಬೇರೆ ಬಟ್ಟೆಗಳೇ ಇರಲಿಲ್ಲ. ಅದೂ ಪೂರ್ತಿ ಒದ್ದೆಯಾಗಿ ಹೋಗಿತ್ತು. ರೂಮಿನಲ್ಲಿದ್ದ ನನ್ನೆಲ್ಲ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಎದುರಿಗೇ ಕುಳಿತಿದ್ದರು ಆ ಯಮದೂತರು. ಗಡ್ಡದಲ್ಲಿ ಬೆರಳುಹಾಕಿ ಪರಪರ ಕೆರೆದುಕೊಂಡ ಆತ ಕೇಳಿದ....

"ಖರೆ ಹೇಳು.... ಎಲ್ಲಿ ಆ ಅಪ್ಸರೆ ?"

ಪ್ರಯಾಸದಲ್ಲಿ ಎಲ್ಲಾ ನೋವು ಹತ್ತಿಕ್ಕಿ ಕೊಂಡು ಹೇಳಿದೆ.

"ಖರೇ ಹೇಳ್ತೀನಿ, ಆಕೆ ಯಾರು ಅಂತ ಗೊತ್ತಿಲ್ಲ. ಸಂಜೆಮುಂದ ಅವಳು ಅಪ್ಪಿಕೊಂಡು ಬಿದ್ಲು.... ಅಷ್ಟೆ ನಂಗೊತ್ತು...."

ಐದೂ ಮಂದಿ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

ಕುರುಚಲು ಗಡ್ಡದವ ಎದ್ದು ಹೊರಗೆ ಹೋದ. ಅವನ ಹಿಂದೆ ಒಬ್ಬೊಬ್ಬರಾಗಿ ನಾಲ್ಕು ಜನ ಹೊರಬಿದ್ದರು. ಒಂದೆರಡು ನಿಮಿಷ ಹಾಗೇ ಬಿದ್ದುಕೊಂಡಿದ್ದು ಕಷ್ಟಪಟ್ಟು ಎದ್ದೆ.... ಕಾಲೆಳೆಯುತ್ತ ಬಂದು ಬಾಗಿಲು ಮುಚ್ಚಿ ಚಿಲಕ ಹಾಕಿ ಹಾಸಿಗೆ ಮೇಲೆ ಉರುಳಿದೆ. ಜೋರಾಗಿ ಉಸಿರು ಎಳೆದುಕೊಂಡೆ.... ಹೊಟ್ಟೆಯೊಳಗೆ ಬೆಂಕಿಯುಂಡೆ ಉರುಳಿದಂತಾಗಿ "ಯಪ್ಪಾ.... ಸತ್ತೆ.... ಅಯ್ಯೋsss...." ಎಂದು ನರಳತೊಡಗಿದೆ. ಕಿಬ್ಬೊಟ್ಟೆ ಮೇಲೆ ಸಾವಕಾಶವಾಗಿ ಕೈಯಾಡಿಸಿಕೊಂಡೆ. ಅರ್ಧಗಂಟೆ – ಒಂದು ಗಂಟೆ ನಂತರ ಎಷ್ಟೋ ಹಗುರೆನಿಸಿತು. ನಾನು ಬಂದದ್ದೇಕೆ ?

ಇದು ಆದದ್ದೇನು ? ಒಂದು ಹೆಣ್ಣಿನ ಬಗ್ಗೆ ಕೇವಲ ಕಲ್ಪನೆ ಮಾಡಿಕೊಂಡ ಮಾತ್ರಕ್ಕೇ ಈ ಗತಿಯಾದರೆ ಆ ಹೆಣ್ಣನ್ನೇ ಮದುವೆಯಾದರೆ ಏನಾಗ ಬಹುದು ? ಎಂದು ಯೋಚಿಸಿ ಇಂಥ ಸ್ಥಿತಿಯಲ್ಲೂ ನಕ್ಕೆ. ಅದರೊಂದಿಗೆ ಒಳಮನಸ್ಸು ಹೇಳಿತು. 'ಆ ಅಪ್ಸರೆ ದೊರೆಯುವದಾದರೆ ಇಂಥ ಶಿಕ್ಷೆ ದಿನವೂ.... ಮತ್ತೆ ನಕ್ಕೆ.

'ದಪ್.... ದಪ್.... ಕಟ್.... ಕಟ್' ಜೋರಾಗಿ ಬಾಗಿಲನ್ನು ಬಾರಿಸ ತೊಡಗಿದರು ಯಾರೋ. ಮತ್ತೆ ಅವರೇ ಎಲ್ಲಿ ಬಂದರೋ ಎಂದು ಅನಿಸಿ, ಹೊಡೆತ, ನೋವು, ಎಲ್ಲಾ ಮರುಕಳಿಸಿ ನನ್ನ ಮುಖ ಪೆಚ್ಚಾಯಾಯಿತು. ಬಾಗಿಲು ತೆರೆಯುವ ಧೈರ್ಯವಾಗಲಿಲ್ಲ ಹಾಗೇ ಬಿದ್ದುಕೊಂಡಿದ್ದೆ. ಮತ್ತೆ ಮತ್ತೆ ಬಾಗಿಲ ಮೇಲೆ ಏಟು. ಈ ಬಾರಿ ಇನ್ನೂ ಜೋರಾಗಿ. ನಾನು ಬಾಗಿಲು ತೆರೆಯದಿದ್ರೆ ಬಾಗಿಲು ಮುರಿದು ಒಳಗೆ ಬರುವ ಸನ್ನಾಹದಲ್ಲಿ ಇದ್ದಂತಿತ್ತು....ಹಾಗೇನಾದರೂ ಆದರೆ ನನ್ನ ಚಟ್ಟ ಕಟ್ಟಿಯೇ ತೀರುವಾಸೆ ಗ್ಯಾರಂಟಿ, ಹೆದರಿ ಮೇಲೆದ್ದೆ.... "ಹಾ.... ತಡೀರಿ.... ಬಂದೆ" ಎಂದು ಉತ್ತರಿಸಿದೆ, ಕ್ಷೀಣ ದನಿಯಲ್ಲಿ. ನನ್ನ ದನಿ ಹೊರಗೆ ಕೇಳಿತೋ ಇಲ್ಲವೋ ತಿಳಿಯದು. ಬಾಗಿಲು ಬಾರಿಸುವುದು ಮಾತ್ರ ನಿಂತಿತು. ನಾನು ಬಾಗಿಲು ತೆರೆದೆ. ಸರಕ್ ಎಂದು ನುಗ್ಗಿದ ವ್ಯಕ್ತಿ ನನಗೆ ಢೀಕೊಟ್ಟಿತು. ಮರುಕ್ಷಣ ನಾನು ಆ ವ್ಯಕ್ತಿಯನ್ನು ತಬ್ಬಿಕೊಂಡು ನೆಲಕ್ಕೆ ಬಿದ್ದೆ. ನೆಗ್ಗಿ ನುಗ್ಗಿಕಾಯಿ ಯಂತಾಗಿದ್ದ ಮೈ ನೋವಿನಿಂದ ನರಳಿದೆ.... ಆರೆ.... ಆರೆ.... ನೋವು ಮಾಯವಾದಂತಾಗಿ.... ಕಾತುರ.... ಭಯಗಳಿಂದ ನನ್ನಪ್ಪಿಕೊಂಡ ವ್ಯಕ್ತಿಕಡೆ ನೋಡಿದೆ... ಅವಳು.... ಅವಳು....

ಅಪ್ಸರಾ....

ಮೇಲೇಳಲು ಹೋದೆ.... ಬೇಡವೆನ್ನುವಂತೆ ತಡೆದ ಆಕೆ ತಾನೇ ಎದ್ದು ಬಾಗಿಲು ಮುಚ್ಚಿ ನನ್ನ ಬಳಿ ಬಂದು ಮುಂಚಿನಂತೆ ಹಾಗೇ ತಬ್ಬಿಕೊಂಡು ಮಲಗಿದಳು. ಈಗ ಹಿತವೆಲ್ಲ ಮಾಯವಾಗಿತ್ತು. ಅದರೊಂದಿಗೆ ನೋವು ಕೂಡ. ಅದರ ಜಾಗೆಯಲ್ಲಿ ರೋಷ ಮನೆಮಾಡಿತ್ತು.... ಎಲ್ಲಾ ಆದದ್ದು ಅಪ್ಸರೆಯಿಂದಲೇ ಅಲ್ಲವೆ ? ಈಕೆ ಯಾರು ? ಎಲ್ಲಿದ್ದಾಳೆ ಎಂಬುದೇ ತಿಳಿಯದು ಎಂದು ಹೇಳಿದ್ದೆ. ಈಗ ನೋಡಿದರೆ ನನ್ನ ತೆಕ್ಕೆಯಲ್ಲಿದ್ದಾಳೆ.

ಪುನಃ ಅವರೇನಾದರೂ ಬಂದು ನೋಡಿದರೆ ನನ್ನ "ಕೀಮಾ" ರೆಡಿ. ಜೋರಾಗಿ ಬಿಡಿಸಿಕೊಂಡು ಮೇಲೇಳಲು ಯತ್ನಿಸಿದೆ. ಅವಳ ಹಿಡಿತ... ಅಪ್ಪುಗೆ ಅಷ್ಟೇ ಬಲವಾಯಿತು. ಯೌವನ ಹೊರ ಸೂಸುವ ಅವಳ ಅಂಗಾಂಗಗಳು ನನ್ನ ದೇಹದಲ್ಲಿ ಇಳಿದು ಅಲ್ಲೇ ಇಂಗಿಹೋದವು. ಥೂ.... ಈ ದೇವರು ಹೆಣ್ಣನ್ನು ಯಾಕಾದರೂ ಸೃಷ್ಟಿಸಿದನೋ.... ಅವಳ ಮೇಲಿದ್ದ ಕೋಪ-ತಾಪ-ರೋಷ ಎಲ್ಲಾ ಅವಳ ಬಿಸಿಯಪ್ಪುಗೆಯಿಂದಾಗಿ ಕರಗುತ್ತ ಬಂದು ನಾನು ಸಾಮಾನ್ಯ ಮನುಷ್ಯನಂತೆ ಹಿತ ಅನುಭವಿಸ ತೊಡಗಿದೆ. ಆಕೆ ನನ್ನ ಕ್ರಾಪಿನಲ್ಲಿ ಬೆರಳಾಡಿಸುತ್ತ ನುಡಿದಳು ಸವಿಜೇನಿನ ಕಂಠದಲ್ಲಿ.... "ದಯವಿಟ್ಟು ನನ್ನ ಕ್ಷಮಿಸಿ.... ಇದರಲ್ಲಿ ನನ್ನದೇನೂ ತಪ್ಪಿಲ್ಲ. ಈಗ ಸದ್ಯ ವಿಶ್ರಾಂತಿ ತೆಗೆದು ಕೊಳ್ಳಿ.... ಆಮೇಲೆ ನಾನೇ ಎಲ್ಲವನ್ನು ಹೇಳ್ತೇನೆ....

ಸುಕೋಮಲ ಹಸ್ತಗಳು ನನ್ನ ಮೈ ತೀಡುತ್ತಿದ್ದಂತೆ ನಾನು ನಿದ್ದೆ ಹೋಗಿದ್ದೆ.

ಮುಂಜಾನೆ ಎದ್ದಾಗ ಅರ್ಧಕ್ಕರ್ಧ ನೋವು ಕಡಿಮೆಯಾಗಿತ್ತು. ಅಪ್ಸರೆ ಎಲ್ಲಿ ಎಂದು ಕಣ್ಣಾಡಿಸಿದೆ. ಆಕೆ ಇರಲಿಲ್ಲ. ಆಕೆಯ ನೀಲಿಸ್ಕರ್ಟ್ ಕೆಂಪು ಬುಶ್‌ಶರ್ಟ್ ಹಾಸಿಗೆ ಮೇಲೆ ಮುದ್ದೆಯಾಗಿ ಬಿದ್ದಿದ್ದವು. ಬಾತ್ ರೂಮಿನಲ್ಲಿ ನೀರಿನ ಸಪ್ಪಳ. ಆಕೆ ಸ್ನಾನ ಮಾಡುತ್ತಿದ್ದಾಳೆನಿಸಿತು. ಒಂದೆರಡು ನಿಮಿಷಗಳ ನಂತರ 'ಕಿರ್ರ್‌ರ್ರ್' ಎಂಬ ಸಪ್ಪಳದೊಂದಿಗೆ ಬಾತ್ ರೂಮಿನ ಬಾಗಿಲು ತೆರೆಯಿತು. ಪೂರ್ತಿ ನಗ್ನಳಾಗೇ ಇದ್ದ ಆಕೆ ಹೊರಗೆ ಬಂದವಳು, ನಾನು ಎದ್ದುದನ್ನು, ಅವಳತ್ತಲೇ ನೋಡುತ್ತಿರುವುದನ್ನೂ ಗಮನಿಸಿ ಒಂದು ಕ್ಷಣ ವಿಚಲಿತಳಾದಂತೆ ಕಂಡರೂ ಮರು ಕ್ಷಣ "ಓ.... ಎದ್ದಿರಾ ?" ಎಂದು ಕೋಗಿಲೆಯಂತೆ ಉಲಿದು ನನ್ನೆದುರೇ ಬಟ್ಟೆ ತೊಟ್ಟು ಕೊಂಡಳು. ನನ್ನ ಸಂಪೂರ್ಣ ದೇಹಕ್ಕೆ ಪಾರ್ಶ್ವವಾಯು ಹೊಡೆದಂತಾ

ಗಿತ್ತು. ನನ್ನ ಕಣ್ಣುಗುಡ್ಡೆಗಳಷ್ಟೇ ಅತ್ತಿತ್ತ ಚಲಿಸುತ್ತಿದ್ದವು. ವಿಕ್ರಮಾವಳಿಯಲ್ಲಿ ಓದಿದ ಊರ್ವಶಿ ನನ್ನೆದುರು ಬಂದು ನಿಂತಿದ್ದಳು ಸಜೀವವಾಗಿ. ಓ ದೇವರೆ.... ಇವಳೆಷ್ಟು ಸುಂದರಿ ?.... ನಿಜವಾಗಿಯೂ ಅಪ್ಸರೆ ಎಂದು ಉದ್ಗರಿಸಿದೆ ಮನದ ಅಂತರಾಳದಲ್ಲಿ. ತಾನು ಸಂಪೂರ್ಣ ಬೆತ್ತಲೆಯಾಗಿದ್ದರೂ ಕಿಂಚಿತ್ತೂ ಅದರ ಬಗ್ಗೆ ವ್ಯಥೆಪಡದೆ ಸಾಮಾನ್ಯ ರೀತಿಯಲ್ಲಿ ಬಟ್ಟೆತೊಟ್ಟುಕೊಂಡ ಅವಳ ರೀತಿ ನನಗೆ ಬಹಳ ಹಿಡಿಸಿತು.... ಅವಳ ಮುಖದ ಮೇಲೆ ಯಾವ ಭಾವನೆಯೂ ಮೂಡಿರಲಿಲ್ಲ. ಒಂದು ಬಗೆಯ ನಿರ್ಲಿಪ್ತತೆ....ಮತ್ತೊಂದು ಅರ್ಥದಲ್ಲಿ ಹೇಳ ಬೇಕೆಂದರೆ ತನ್ನೆದುರು ಯಾರೂ ಇಲ್ಲ. ತಾನು ಒಂಟಿಯಾಗಿದ್ದೇನೆ ಎಂಬ ಭಾವನೆ ಅವಳಲ್ಲಿ ಮೂಡಿತ್ತು.

"ಏಳಿ ಮುಖ ತೊಳೆದುಕೊಳ್ಳಿ"

ಕೈಹಿಡಿದು ಮೇಲೆಬ್ಬಿಸಿ ಪ್ರೀತಿಯಿಂದ ತಳ್ಳಿಕೊಂಡು ಬಾತ್‌ರೂಮಿಗೆ ದಬ್ಬಿದಳು. ತಾನು ಬಾಗಿಲು ಕೊಂಡಿ ತೆಗೆದು ಬಾಗಿಲಿಗೆ ನಿಂತಳು. ನಾನು ಹಲ್ಲುಜ್ಜಿ ಪ್ರಾತಃವಿಧಿ ತೀರಿಸಿಕೊಂಡು ಹೊರಗೆಬಂದೆ. ಬಾಗಿಲು ಮುಂದೆ ಮಾಡಿಕೊಂಡು ಅವಳೂ ನನ್ನ ಹಿಂದೆ ಬಂದಳು. ನಾನು ಮಂಚದ ಮೇಲೆ ಕುಳಿತೆ. ನನ್ನ ಮುಂದೆ ಅವಳು ಕುಳಿತಳು. ನನಗಿಂತ ಮುಂಚೆಯೇ ಮಾತಾಡಿದಳು.

"ನನಗೆ ಗೊತ್ತು.... ನೀವೇನು ಯೋಚಿಸುತ್ತಿದ್ದೀರಿ.... ಏನು ಕೇಳುತ್ತೀರಿ ಅಂತ"

"ಹಾಗಿದ್ದರೆ ಎಲ್ಲಾ ನೀನೇ ಹೇಳಿಬಿಡಿ.

"ಸದ್ಯ ನಾನು ಏನೂ ಹೇಳುವ ಸ್ಥಿತಿಯಲ್ಲಿಲ್ಲ. ನಾನು ಭಯಂಕರ ಆಪತ್ತಿನಲ್ಲಿ ಸಿಲುಕಿಕೊಂಡಿದ್ದೇನೆ. ನನ್ನ ಜೀವ ಗಂಡಾಂತರದಲ್ಲಿದೆ."

"ಪೊಲೀಸರ ಸಹಾಯ ಪಡೆಯಬಾರದೇಕೆ ?"

"ಅದೂ ಸಾಧ್ಯವಿಲ್ಲ."

"ಏಕೆ....?" "ಅವರಿಂದಲೂ ನಾನು ಸಹಾಯ ಬಯಸಲಾರೆ" ಆಕೆ ಉತ್ತರಿಸಿದಳು.

"ನನಗಾದರೂ ಹೇಳು ವಿಷಯ ಏನೆಂದು...."

"ಹೇಳ್ತೀನೆ ಈಗಲ್ಲ."

"ಮತ್ತೆ ಯಾವಾಗ?"

"ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸ ಉಂಟಾದಾಗ...."

ಜೋರಾಗಿ ಕೆನ್ನೆ ಮೇಲೆ ಬಾರಿಸಿದಂತಾಯಿತು. ಇದೆಂಥ ಅವಮಾನ.... ಅದರೊಂದಿಗೆ ಅವಳ ಸ್ಪಷ್ಟ ಮಾತಿಗೆ ಸಂತೋಷವೆನಿಸಿತು.

"ನನಗೆ ನಿನ್ನ ಮೇಲೆ ಸಂಪೂರ್ಣ ವಿಶ್ವಾಸವಿದೆ."

"ಥ್ಯಾಂಕ್ಸ್."

ಐದಾರು ನಿಮಿಷ ಇಬ್ಬರಲ್ಲಿ ಯಾರೊಬ್ಬರೂ ಮಾತನಾಡಲಿಲ್ಲ. ಆಕೆ ನನ್ನನ್ನು ನೋಡುತ್ತಿದ್ದಳು. ನಾನು ಆಕೆಯನ್ನು. ಆಕೆಯ ಕೈ ಬೆರಳುಗಳು ನನ್ನ ಕೈಬೆರಳುಗಳೊಂದಿಗೆ ಆಟವಾಡುತ್ತಿದ್ದವು. ಒಂದು ಬಗೆಯ ರೋಮಾಂಚನ. ಒಂದು ಬಗೆಯ ಹಿತ.... ನನಗುಂಟಾಗುತ್ತಿತ್ತು.

"ಮಾಮಾ-ಟಿಫಿನ್ ರೆಡಿ...." ಕೂಗುತ್ತ ಬಾಗಿಲು ತೆರೆದುಕೊಂಡು ಒಳಗೆ ಬಂದ ಸವಿತಾ ಅಪ್ಸರೆಯನ್ನು ನೋಡಿ ಅಚ್ಚರಿಯಿಂದ ನಿಂತು ಬಿಟ್ಟಳು. ಸವಿತಾ ಭಟ್ಟರ ಮೊಮ್ಮಗಳು, ಸುನೀಲನ ತಂಗಿ. ಅವಳ ಕೈಯಲ್ಲಿ ಅವಲಕ್ಕಿ ತುಂಬಿದ ಪ್ಲೇಟು ಹಾಗೂ ಕಾಫಿ ಇದ್ದುವು. "ಬಾ ಸವಿತಾ....ಇಲ್ಲಿಡು."ಅಂದೆ. ಆಕೆ ಟೀಪಾಯ್ ಮೇಲೆ ಟಿಫಿನ್ ಇಟ್ಟು ಕೇಳಿದಳು.

"ಮಾಮಾ....ಇವರು ಯಾರು ?.... ಯಾವಾಗ ಬಂದಾರ ?"

"ಇವ್ರು.... ಇವ್ರು...." ನಾನು ತೊದಲತೊಡಗಿದೆ. ಸವಿತಾನೇ ನುಡಿದಳು.

"ಗೊತ್ತಾತ ಬಿಡು.... ಈಕಿ.... ಮಾಮಿ.... ಹೌದಲ್ಲೋ."

ನಾನು ಬೆವರಿ ಅಪ್ಸರೆಯತ್ತ ನೋಡಿದೆ. ಅವಳ ಮುಖ ಸಪಾಟಾಗಿತ್ತು. ಯಾವ ಭಾವನೆಯೂ ಇರಲಿಲ್ಲ. ಸಾಮಾನ್ಯವಾಗಿ ಹೆಣ್ಣು ಗಂಡಿನ ಸಂಬಂಧದ ಬಗ್ಗೆ ಮಾತು ಬಂದಾಗ ಹೆಣ್ಣು ಲಜ್ಜೆಯಿಂದ ನಾಚುತ್ತದೆ. ಮುಖ ಕೆಂದಾವರೆಯಾಗುತ್ತದೆ ಎಂಬ ಸಾಮಾನ್ಯ ವಾದ. ಇದನ್ನೇ ನಾನು ನನ್ನ ಹಲವಾರು ಕಾದಂಬರಿಗಳಲ್ಲಿ ಬರೆದದ್ದೂ ಇದೆ. ಆದರೆ....ಇಲ್ಲಿ ?.... ಅಪ್ಸರೆ....ನಿರ್ವಿಕಾರ,....ನಿರ್ಲಿಪ್ತಳಾಗಿ ನಿಂತಾಗ ಆಕೆ ಹೆಣ್ಣಾದರೂ ಹೌದೋ

ಅಲ್ಲವೋ ಎಂದು ಯೋಚಿಸಿ, ಒಮ್ಮೆಲೆ ನನ್ನ ಕಣ್ಣೆದುರು ಆಕೆ ಸ್ನಾನ ಮಾಡಿ ಬಂದಾಗಿನ ದೃಶ್ಯ ಮೂಡಿ ಬಂದು ನನ್ನ ವಿಚಾರವನ್ನು ಬದಲಿಸಬೇಕಾಯಿತು.

"ಮಾಮಾ....ಇನ್ನೊಂದು ಪ್ಲೇಟ್ ಟಿಫಿನ್ ತರತೀನಿ."

ಸವಿತಾಳನ್ನು ತಡೆದ ನಾನು ಬೇಡವೆಂದು ಹೇಳಿದೆ. ಅಪ್ಸರೆಯ ವಿಷಯ ಬಹಿರಂಗವಾಗುವುದು ನನಗೆ ಬೇಡವಾಗಿತ್ತು.

"ಇಬ್ರೂ ಒಂದ್ಸಾರ್ಗ ತಿಂತೀರೇನು ?"

ಅವಳ ಪ್ರಶ್ನೆಗೆ ನಾನು ಹುಚ್ಚು ಹುಚ್ಚಾಗಿ ನಕ್ಕೆ. ಉತ್ತರಿಸಲಿಲ್ಲ.

"ಹಾಂ, ಗೊತ್ತಾತ ಬಿಡು" ಚಪ್ಪಾಳೆ ತಟ್ಟಿ ಹೇಳಿದಳು ಸವಿತಾ.

"ಏನು ?"

"ನಿಮ್ದು ಹೊಸದಾಗಿ ಮದಿವಿ ಆಗೇದ....ನೀವು ಹನಿಮೂನಿಗೆ ಬಂದೀರಿ....ಮತ್ತ...." ನಾನು ಸವಿತಾಳ ಬಾಯಿ ಮೇಲೆ ಕೈ ಇಟ್ಟು ಅಲ್ಲಿಗೇ ತಡೆದೆ. ಮೇಲೆದ್ದು ಪಾಕೆಟ್‌ನಿಂದ ಹತ್ತು ರೂಪಾಯಿ ತೆಗೆದು ಅವಳತ್ತ ಚಾಚಿ ಹೇಳಿದೆ.

"ತಗೋ ಈ ಹತ್ತು ರೂಪಾಯಿ....ಇಲ್ಲಿ ವಿಷಯ ಯಾರ ಮುಂದೂ ಹೇಳಬ್ಯಾಡ."

"ನಂಗೆ ಲಂಚಾ ಕೊಡತೀರೇನು ?....ನಾ ಒಲ್ಲೆ" ಆಕೆ ಮುಖ ಸಿಂಡರಿಸಿದಳು.

"ಇಲ್ಲಮ್ಮಾ....ಇವತ್ತ ನಾ ಹೋಗ್ತೀನಿ. ಅದ್ಕ ಈ ರೂಪಾಯಿ ನಿನ್ನ ಬಳೀಗೆ."

"ಹಂಗಾರ ತಗೋತೀನಿ."

ರೂಪಾಯಿ ಇಸಿದುಕೊಂಡ ಆಕೆ ಬಾಗಿಲವರೆಗೂ ಹೋಗಿ ಹೊರಳಿ ನಿಂತಳು.

"ಮಾಮಾ.... ಎಂಥ ಕೆಟ್ಟ ಇದೀಯಲ್ಲ ನೀನು.. ನಂಗ ಮಾಮೀ ಹೆಸರೇ ಹೇಳಲಿಲ್ಲ."

ನಾನು ಅಪ್ಸರಾನ ಕಡೆಗೆ ನೋಡಿದೆ. ಆಕೆ ಉಗುರು ಕಡಿಯುತ್ತ ಮೌನವಾಗಿದ್ದಳು.

"ಅಪ್ಸರಾ" ನಾನೆಂದೆ.

"ಹೋಗೇಹೋಗು...ಇಕೀ ಹೆಸರು ಅಪ್ಸರಾ ಅಲ್ಲ,.. ಬ್ಯಾರೆ ಅದ"

ಅರೇ ? ನಿಂಗ ಹೆಂಗ ಗೊತ್ತು?

ಹೆಂಗಅಂದ್ರ ಇಕೀ ಕರೇ ಹೆಸರು ಏನು ಅಂತ ನಂಗ ಗೊತ್ತದ"

ಅಪ್ಸರಾ ಬೆಚ್ಚಿಬಿದ್ದಳು. ಇಷ್ಟು ಸಮಯದಲ್ಲಿ ಮೊದಲಬಾರಿ ಆಕೆ ಸ್ಪಂದಿಸಿದ್ದನ್ನು ಅಥವಾ ಪ್ರತಿಕ್ರಿಯಿಸಿದ್ದನ್ನು ನಾನು ಗುರುತಿಸಿದೆ. ಅಪ್ಸರಾ ಎದ್ದು ಸವಿತಾಳ ಬಳಿ ಸಾರುತ್ತಿದ್ದಂತೆ ಅವಳೆಡೆ ತನ್ನ ಹೆಬ್ಬೆಟ್ಟು ತೋರಿಸಿದ ಆಕೆ "ಡೇಂಗಾ" ಎಂದು ಕೂಗುತ್ತಾ ಓಡಿಹೋದಳು.

"ನಾನಿನ್ನು ಹೋಗ್ತೇನೆ" ಆಕೆ ಅವಸರ ಮಾಡಿದಳು.

"ಏಕೆ ತಿಂಡಿ ತಿನ್ನೋದಿಲ್ವೆ..."

ಒಂದಿಷ್ಟು ಅವಲಕ್ಕಿ ಬಾಯಿಗೆ ಹಾಕಿಕೊಂಡು, ಕಪ್ಪಿನ ಕಾಫಿ ಬಗ್ಗಿಸಿಕೊಂಡ ಆಕೆ ಎರಡೇ ನಿಮಿಷದಲ್ಲಿ ಕೈಜಾಡಿಸಿಕೊಂಡು ಮೇಲೆದ್ದಳು.

"ಮತ್ತೆ ಯಾವಾಗ ಸಿಗುತ್ತಿ ?" ನಾ ಕೇಳಿವೆ.

"ಜೀವಂತ ಇದ್ರ ಎಂದಾದ್ರೊಮ್ಮೆ ಖಂಡಿತ ಭೆಟ್ಟಿ ಆಗತೀನಿ."

ಒಗಟಿನಲ್ಲಿ ಉತ್ತರಿಸಿದ ಆಕೆ ಸರಸರನೇ ಹೊರಟುಹೋದಳು. ಅವಳು ಹೋಗುತ್ತಲೇ ನನ್ನಲ್ಲಿರುವ ಚೇತನವೇ ಹೊರಟುಹೋದಂತಾಗಿ ನಾನು ಹಾಗೇ ಕುಸಿದೆ ಮಂಚದ ಮೇಲೆ.

ರಾವಣನಿಗೆ ಉಪ್ಪು ನೀರು ಕುಡಿಸಿದ ಗೋಕರ್ಣದ ಸಹವಾಸ ಸಾಕೆಸಿತು. ವಜ್ರದೇಹಿಯಾದ ರಾವಣ ಚೇತರಿಸಿಕೊಂಡ. ಕುಬ್ಜನಾಗಿರುವ ನಾನೆಂತು ಸಹಿಸಿಕೊಂಡೇನು? ಅಪ್ಸರೆ ಹೋದ ಅರ್ಧಗಂಟೆಗೇ ನಾನೂ ನನ್ನ ಸಲಕರಣೆಗಳೊಂದಿಗೆ ಹೊರಬಂದು ರೂಮಿನ ಬಿಲುಕ ಹಾಕಿದೆ. ಹೆಗಲಿಗೊಂದು ಕೈಚೀಲ, ಬಲಗೈಲಿ ಚಿಕ್ಕ ಸೂಟುಕೇಸು, ಇವಿಷ್ಟು ನನ್ನ ಲಗೇಜು. ಸವಿತಾ ಮನೆಗೆ ಹೋಗಿ ನನ್ನ ಹಾಗೂ ಅಪ್ಸರೆ ಬಗ್ಗೆ ಏನು ಹೇಳಿದ್ದಾಳೋ ಎಂಬ ಭಯ, ದುಗುಡ, ಹೆದರುತ್ತಾ ಒಳಗೆ ಹೋದೆ. ಭಟ್ಟರು ಸ್ವಾಗತಿಸಿದರು.

"ಬರ್ರಿ....ಬರ್ರಿ....ಎಲ್ಲಾ ತಯಾರಾಗೇ ಬಂದಿರೇನು?"

ಹೌದೆನ್ನುವಂತೆ ತಲೆಯಾಡಿಸಿದೆ. ಕೃತಜ್ಞತೆಯ ನಾಲ್ಕು ಮಾತು ಹೇಳಿ ಹೊರಗೆ ಬರುವುದರೊಳಗೆ ಬೆವರು ಇಳಿದಿತ್ತು."ಮಾಮಾ", ರಸ್ತೆಗಿಳಿದಿದ್ದ ನನ್ನನ್ನು ಕರೆ ತಡೆಯಿತು. ಹಲಸಿನ ಮರದ ಪಕ್ಕದಲ್ಲಿ ಗೋಡೆಗೊರಗಿ ನಿಂತಿದ್ದ ಸವಿತಾ ಕುಚೇಷ್ಟೆಯಿಂದ ಹೇಳಿದಳು, "ಗಾಬರಿ ಆಗಬ್ಯಾಡ....ಮನ್ಯಾಗ ನಾ ಏನೂ ಹೇಳಿಲ್ಲ."

ಮಹಾಘಾಟಿ ಈ ಹುಡುಗಿ ಎನಿಸದಿರಲಿಲ್ಲ. ಮರುಕ್ಷಣ ಇವರಿಗೆ ಅಪ್ಸರೆ ಬಗ್ಗೆ ಅವಳ ನಿಜ ಹೆಸರು ಬಗ್ಗೆ ತಿಳಿದಿದೆ, ಕೇಳಬಾರದೇಕೆ.

"ಸವಿತಾ_ಬಾ ಇಲ್ಲಿ" ಕರೆದೆ.

"ಇಲ್ಲೇ ಇರತೀನಿ ಹೇಳು" ಅವಳ ಕೆನ್ನೆ ಮೇಲೆ ಬಾರಿಸಬೇಕು ಅನ್ನೊ ಅಷ್ಟು ಕೋಪ.

"ಅಪ್ಸರೆಯ ನಿಜವಾದ ಹೆಸರೇನು?"

"ಯಾರದು?,.." ಕೋಪ ಉಕ್ಕಿ ಬಂದರೂ ತಡೆದುಕೊಂಡೆ.

"ಅದೇ....ಅಪ್ಸರೆಯದು ನೀನು ಟಿಫಿನ್ ತಂದಾಗ."

"ಹಾಂ,. ನಿಂಜೊತಿ ರಾತ್ರಿ ಎಲ್ಲಾ ಇದ್ದಳಲ್ಲ.. ಅವಳದssss.,"

"ಹಾ.. ಹಾ.. ಅವರೇ "

"ನಂಗೊತ್ತಿಲ್ಲ.." ಚಿಗರಿಮರಿಯಂತೆ ಹಾರಿ ಅವಳು ಕಣ್ಮರೆಯಾದಾಗ "ಓ ದೇವರೆ ಇವಳನ್ನು ಮದುವೆಯಾಗುವ ಪುಣ್ಯಾತ್ಮನ ಮೇಲೆ ನಿನ್ನ ಕರುಣೆ ಇರಲಿ" ಎಂದು ಪ್ರಾರ್ಥಿಸಿ ಬಸ್ ಸ್ಟಾಂಡಿಗೆ ಬಂದೆ, ಅದೃಷ್ಟ ಬಸ್ಸು ನನಗಾಗಿ ಕಾಯುತ್ತಿತ್ತು ಅಂತ ಕಾಣಿಸುತ್ತದೆ. ನಾನು ಕೂಡುತ್ತಲೇ ಕೀರಲು ಕಂಠದಲ್ಲಿ ಕಂಡಕ್ಟರ್ ಕಿರುಚಿದ "ರೈಟ್" ಬಸ್ಸು ಹೊರಟಿತು. ಬಸ್ ಸ್ಟಾಂಡಿನಿಂದ ಹೊರಗೆ ಬರುತ್ತಿದ್ದಂತೆ ಅನಾಯಾಸವಾಗಿ ನನ್ನ ದೃಷ್ಟಿ ವೆಂಕಟೇಶ್ವರ ದೇವಸ್ಥಾನದ ಕಡೆ ಹೊರಳಿತು. ನಮಸ್ಕಾರ ಮಾಡಲು ಕೈ ಎತ್ತಿದ ನಾನು ಅಲ್ಲೇ ಪಕ್ಕದಲ್ಲಿ ನಿಂತಿದ್ದ ಕುರುಚಲು ಗಡ್ಡದ ವ್ಯಕ್ತಿ ಹಾಗೂ ಅವನ ಸಂಗಡಿಗರನ್ನು ಕಂಡು ಕೈಗಳಿಗೆ ಮೊಳೆ ಹೊಡೆದಂತಾಗಿ ಗಪ್‌ನೆ ಕುಳಿತೆ.

ಇದರರ್ಥ ತಿಳಿಯದಷ್ಟು ನಾನು ಮೂರ್ಖನಾಗಿರಲಿಲ್ಲ.

ಅವರು ನನ್ನ ಹಿಂದೆ ಬಿದ್ದಿದ್ದರು. ನನ್ನ ಚಲನವಲನದ ಮೇಲೆ ಕಣ್ಣಿಟ್ಟಿದ್ದರು. ಊರಿಗೆ ನಾನೊಬ್ಬನೇ ಹೋಗುತ್ತೇನೋ ಅಥವಾ ನನ್ನೊಂದಿಗೆ ಅಪ್ಸರೆಯೂ ಬರುತ್ತಾಳೋ ಎಂಬುದನ್ನವರು ನಿರೀಕ್ಷಿಸುತ್ತಿದ್ದರು....ಅಂತೂ ಅವರಿಂದ...ಅಪ್ಸರೆಯ ರೇಶಿಮೆ ಬಲೆಯಿಂದ ಪಾರಾಗಿದ್ದೆ. ಮನೆ ಸೇರಿದಾಗ ಪುನರ್ಜನ್ಮ ಪಡೆದ ಅನುಭವವಾಯಿತು.

"ಯಾಕೋ ಎಷ್ಟು ಲಗೂ ಬಂದೆಲ್ಲ....ಹದಿನೈದು ದಿವಸ ಬರೂದಿಲ್ಲ ಅಂದಿದ್ದಿ" ತಾಯಿಯ ಮಾತಿಗೆ ನನಗೆ ಸಿಟ್ಟು ಬರಲಿಲ್ಲ, ಮೋಜೆನಿಸಿತು. ಒಂದು ಸಾರಿ ನಾನು ಮನೆಬಿಟ್ಟು ನಾಲ್ಕು ದಿನಕ್ಕೆ ಬರುತ್ತೇನೆಂದು ಹೇಳಿದ್ದರೆ ಮರಳುವುದು ಹದಿನಾಲ್ಕು ದಿನಕ್ಕೆ. ಈ ಬಾರಿ ಹದಿನೈದು ಎಂದು ಹೇಳಿದ್ದೆ. ಅದರರ್ಥ ಕನಿಷ್ಠ ತಿಂಗಳು.... ಆದರೆ ನಾನು ಮರಳಿದ್ದು ಕೇವಲ ಒಂಭತ್ತನೇ ದಿನಕ್ಕೆ. ಊರಿಗೆ ಮರಳುತ್ತಿರುವಾಗ ಬಸ್ಸಿನಲ್ಲಿ ನಾನೊಂದು ನಿರ್ಧಾರಕ್ಕೆ ಬಂದೆ. ಗೋಕರ್ಣದಲ್ಲಿ ನಡೆದಂತಾ ಘಟನೆ ಮುಂದೆ ಎಂದಾದರೂ ಪುನಃ ಘಟಿಸಿದರೆ ನಾನು ಬೊಂಬೆಯಂತೆ ಎಲ್ಲವನ್ನೂ ಸಹಿಸಿಕೊಂಡಿರ ಕೂಡದು ಎಂದು. ಸ್ವಲ್ಪಾದರೂ ನನ್ನ ಪ್ರತಿರೋಧ ಬೇಡವೆ? ಅದಕ್ಕಾಗಿ ಊರಿಗೆ ಮರಳುತ್ತಲೆ ಬ್ಲಾಕ್‌ಬೆಲ್ಟ್ ಖತೀಬ ಅವರನ್ನು ಕಂಡು ಅವರಿಂದ ತರಬೇತಿ ಪಡೆಯುವದು.

ಖತೀಬ ನನಗೆ ತೀರ ಪರಿಚಿತರು. ಸರಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದುಕೊಂಡೇ ತಾವು ಕರಾಟೆ ಕಲಿತು ಬ್ಲಾಕ್ ಬೆಲ್ಟ್ ಪಡೆದು ಉಚಿತವಾಗಿ ಕರಾಟೆ ವರ್ಗ ನಡೆಸುತ್ತಿದ್ದರು. ಈಗಾಗಲೇ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ ಸ್ವರಕ್ಷಣೆ ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಬೋಧಿಸಿದ್ದರು. ನಾನೂ ಅವರ ವಿದ್ಯಾರ್ಥಿಯಾಗಲು ನಿರ್ಧರಿಸಿದೆ.

ನನ್ನನ್ನು ವಿಶ್ವಾಸದಿಂದ ಸ್ವಾಗತಿಸಿದ ಖತೀಬ ಸಂತೋಷದಿಂದ ಕಲಿಸಿಕೊಡಲು ಮುಂದಾದರು. ನಾನು ಗೋಕರ್ಣದಲ್ಲಿ ನಡೆದ ಘಟನೆ ಅವರಿಗೆ ಮುಚ್ಚುಮರೆ ಇಲ್ಲದೆ ತಿಳಿಸಿ, ಅಂಥ ಸಂದರ್ಭದಲ್ಲಿ ನಾನು ನನ್ನನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ಕಲಿಸಿಕೊಡಿ ಎಂದೆ. ಅದಕ್ಕವರು ನಗುತ್ತಾ ಸರಿ, ನಾನು ನಿಮಗೆ ಶಾಸ್ತ್ರೋಕ್ತವಾಗಿ ಕರಾಟೆ ಕಲಿಸುವದರ ಜೊತೆ ಜೊತೆಗೆ

ಕೆಲವೊಂದು ಟ್ರಿಕ್ಸ್ ಹೇಳಿಕೊಡುತ್ತಾ ಹೋಗುತ್ತೇನೆ. ನೀವು ಚೆನ್ನಾಗಿ ರೂಢಿ ಮಾಡಿ....ಪ್ರಸಂಗ ಕುತ್ತಿಗೆಗೆ ಬಂದಾಗ ಅವು ನಿಮ್ಮ ಸಹಾಯಕ್ಕೆ ಬರುತ್ತವೆ. ಅದರೊಂದಿಗೆ ನೀವು ಇನ್ನೂ ಒಂದು ಕೆಲಸ ಮಾಡಬೇಕು. ದಿನನಿತ್ಯ ಮುಂಜಾನೆ ಕನಿಷ್ಠ ನಾಲ್ಕಾರು ಕಿಲೋಮೀಟರ್ ಓಡುವ ರೂಢಿ ಇಟ್ಟುಕೊಳ್ಳಬೇಕು. ಗುಡ್ಡ ಏರುವ, ಇಳಿಯುವ, ಜಿಗಿಯುವ ಮುಂತಾದ ಕಷ್ಟದ ರೂಢಿ ಸಹ ಮಾಡಿದರೆ ತುಂಬಾ ಅನ ಕೂಲ.

ನಾನು ಅವರ ಮಾತನ್ನು ಪೂರ್ತಿಯಾಗಿ ಪಾಲಿಸಿದೆ. ಬೆಳಗ್ಗೆ ಐದಕ್ಕೆ ಮನೆಯಿಂದ ಹೊರಬಿದ್ದು ಕಲಘಟಗಿ ರೋಡ್ ಹಿಡಿದು ನುಗ್ಗಿಕೆರೆ ಕಡೆ ವಾಕ್ ಹೊರಡುತ್ತಿದ್ದೆ. ನುಗ್ಗಿಕೆರೆವರೆಗೆ ಬಂದು ಅಲ್ಲಿಂದಲೇ ಕಾಣುವ ಪ್ರಾಣ ದೇವರಿಗೆ ವಂದಿಸಿ ಇಲ್ಲಿಂದ ಮನೆಗೆ ಹೊರಡುತ್ತಿದ್ದೆ. ಬರುವಾಗ ವೇಗವಾಗಿ ಓಡುತ್ತಾ ಸೋಮೇಶ್ವರದವರೆಗೂ ಬರುತ್ತಿದ್ದೆ. ಅಲ್ಲಿಂದ ಮುಖ್ಯ ರಸ್ತೆಗೆ ಬಂದು ಎಡಬದಿಗೆ ತಿರುಗಿ ಎದುರಿದ್ದ ಚಿಕ್ಕ ಚಿಕ್ಕ ಗುಡ್ಡಗಳನ್ನು ಹತ್ತಿ ಇಳಿದು, ಜಿಗಿಯುತ್ತ ತೇಜಸ್ವಿನಗರ ಸೇರುತ್ತಿದ್ದೆ. ಅಲ್ಲಿಂದ ಗುಡ್ಡ ಇಳಿದು ರೈಲುಹಳಿಗೆ ಕೂಡುತ್ತಿದ್ದೆ. ಸುಮಾರು ಎರಡು ಫರ್ಲಾಂಗ್ ದೂರವನ್ನು ರೈಲು ಕಂಬಿಯ ಮೇಲೆ ನಡೆಯುತ್ತ ಕ್ರಮಿಸಿ, ಬಲಕ್ಕೆ ಚಿಕ್ಕ ದಿನ್ನೆ ಮೇಲಿರುವ ನನ್ನ ಮನೆ ಸೇರುತ್ತಿದ್ದೆ. ಆಗ ಸುಮಾರು ಸರಿಯಾಗಿ ಏಳೂಕಾಲು. ಸ್ನಾನ ಮಾಡಿ ತಿಂಡಿ ತಿಂದು ಕರಾಟೆ ಕ್ಲಾಸಿಗೆ ಹೋಗುತ್ತಿದ್ದೆ. ಹನ್ನೆರಡು ಗಂಟೆಗೆ ಮನೆಗೆ ಬಂದು ಊಟ ಮಾಡಿ ಸ್ವಲ್ಪ ಹೊತ್ತು ಓದುತ್ತಿದ್ದು, ಎರಡು ಗಂಟೆಗೆ ಮಲಗಿದವನು ನಾಲ್ಕುವರೆಗೆ ಎದ್ದು ಚಹ ಕುಡಿದು ಐದು ಗಂಟೆಯಿಂದ ಬರಹದ ಕೆಲಸದಲ್ಲಿ ತೊಡಗುತ್ತಿದ್ದೆ. ಎಂಟು ಗಂಟೆಗೆ ಟಿ. ವಿ. ವಾರ್ತೆ, ಒಂಬತ್ತುವರೆಗೆ ಊಟ ಮಾಡಿ ಮನಸ್ಸು ಬಂದರೆ ಓದುತ್ತಿದ್ದೆ. ಇಲ್ಲವೆ ವಿ.ಸಿ.ಪಿ.ಯಲ್ಲಿ ಕ್ಯಾಸೆಟ್ ಹಾಕಿ ಇಂಗ್ಲಿಷ್ ಚಿತ್ರ ನೋಡುತ್ತಿದ್ದೆ. ಮಲಗುವಾಗ ಹನ್ನೆರಡು ಗಂಟೆ ರಾತ್ರಿ.

ನನ್ನ ದೈನಂದಿನ ಕೆಲಸ ಎಂದೂ ತಪ್ಪದೆ ಇಪ್ಪತ್ತು ಇಪ್ಪತ್ತೈದು ದಿನ ನಡೆದಾಗ ನನ್ನಲ್ಲಿ ಎಷ್ಟೋ ಬದಲಾವಣೆ ಆಗಿತ್ತು. ನಿರ್ಬಲ, ನಿಃಶಕ್ತ ವ್ಯಕ್ತಿಯಾಗಿದ್ದ ನಾನು ಸಹಜವಾಗಿ ಇಬ್ಬರು ಮೂವರನ್ನು ಸತತವಾಗಿ ಎದುರಿಸುವ ಮಾನಸಿಕ ಧೈರ್ಯ ಸಂಪಾದಿಸಿದ್ದೆ....ನನ್ನ ಈ ಶಿಕ್ಷಣ ಪ್ರಗತಿ

ಕಂಡ ಖತೀಬ ಬೆನ್ನು ಚಪ್ಪರಿಸಿ ಪ್ರೋತ್ಸಾಹ ನೀಡಿದರು. ಕೇವಲ ಒಂದು ತಿಂಗಳಲ್ಲಿ ನಾನು ಆರು ತಿಂಗಳಲ್ಲಿ ಕಲಿಯಬಹುದಾದ ವಿದ್ಯೆ ಅವರಿಂದ ಪಡೆದಿದ್ದೆ....

ಅವ್ಯಾಹತವಾಗಿ ಒಂದು ತಿಂಗಳು ಸಾಗಿದ ನನ್ನ ಅಭ್ಯಾಸಕ್ಕೆ ದೃಷ್ಟಿ ತಾಗಿತು ಎಂದು ಕಾಣುತ್ತದೆ. ಬಿಜಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದು ಸರಿಯಾದ ಕೆಲಸ ಸಿಗದ್ದರಿಂದ ನಿರುದ್ಯೋಗಿಯಾಗಿ ಕೂಡದೇ ಮನೆಯ ಮುಂದೆಯೇ ಕಿರಾಣಿ ಅಂಗಡಿ ಮಾಡಿಕೊಂಡು ಭರ್ಜರಿ ವ್ಯಾಪಾರ ಮಾಡುತ್ತ ಬಂದಿದ್ದ ನನ್ನ ತಮ್ಮ ಅತುಲನಿಗೆ ಮುಂಬಯಿಯಿಂದ ಸಂದರ್ಶನಕ್ಕೆ ಕರೆಬರಬೇಕೆ ? ಮುಂಬೈ ಎಂದರೆ ಒಂದು ಆಕರ್ಷಣೆ....ತಾಜಮಹಲ ಹೊಟೇಲ್ ಅಂದರಂತೂ ಮುಗಿದೇ ಹೋಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಪಂಚತಾರಾ ಹೊಟೇಲುಗಳಲ್ಲಿ ಅದೊಂದು. ಅಲ್ಲಿಂದಲೇ ಅಸಿಸ್ಟೆಂಟ್ ಮ್ಯಾನೇಜರ ಜಾಗೆಗೆ ಸಂದರ್ಶನ. ಅತುಲನಂತೂ ತುದಿಗಾಲ ಮೇಲೆ ಕುಣಿಯತೊಡಗಿದ. ಆತ ಹೋಗಿ ಬರಲು ಕನಿಷ್ಠ ನಾಲ್ಕಾರು ದಿನಗಳಾದರೂ ಬೇಕು. ಅಪರೂಪಕ್ಕೆ ಹೊರಬಿದ್ದ ಆತ ಮತ್ತೂ ನಾಲ್ಕು ದಿನ ಅಲ್ಲಲ್ಲಿ ಸುತ್ತಾಡಿ ಬರುತ್ತೇನೆ ಅಂದ. ಒಟ್ಟಾರೆ ಹದಿನೈದು ದಿನ. ಅಷ್ಟು ದೀರ್ಘಾವಧಿವರೆಗೆ ಅಂಗಡಿ ಬಾಗಿಲು ಮುಚ್ಚುವಂತಿಲ್ಲ. ಮುಚ್ಚಿದರೆ ವ್ಯಾಪಾರ ಸತ್ಯನಾಶ. ಹತ್ತಾರು ಸಾವಿರ ರೂಪಾಯಿ ಉದ್ರಿ ಬೇರೆ. ಹೀಗಾಗಿ ಬೇಡಬೇಡವೆಂದರೂ ಕಿರಾಣಿ ಅಂಗಡಿ ವ್ಯವಹಾರ ನನ್ನ ತಲೆಗೇ ಬಂದಿತು. ಇದರ ಬಗ್ಗೆ ನನಗೇನೂ ತಿಳಿಯದು ಎಂದು ವಾದಿಸಿದ್ದು ಉಪಯೋಗವಾಗಲಿಲ್ಲ. "ನಾನೆಲ್ಲಾ ವ್ಯವಹಾರ ನೋಡಿಕೊಳ್ತೇನೆ. ನೀನು ಕೇವಲ ಕ್ಯಾಶ್ ಸಂಭಾಳಿಸು" ಎಂದರು ತಂದೆ. ಮುಂದೆ ನಾನು ಮಾತೇ ಆಡಲಿಲ್ಲ. ತಾಯಿ ಮುಂದೆ ಗೊಣಗಿದೆ. "ದಿನದ ಮುಕ್ಕಾಲು ಭಾಗ ಓದುತ್ತ ಬರೆಯುತ್ತ ಕಳೆಯುತ್ತಿ. ಹೀಗೆ ಆದರೆ ಹುಚ್ಚು ಹಿಡಿದೀತು. ಸ್ವಲ್ಪ ಕಾಲ ಬೇರೆಡೆ ತಲೆಹಾಕು" ಎಂದು ಅವರು ಬುದ್ಧಿ ಹೇಳಿದಾಗ ಅವರ ಮಾತೂ ಸರಿ ಎನಿಸಿತು. ಲೈಫಿನಲ್ಲಿ ಸ್ವಲ್ಪಾದರೂ ಚೇಂಜ್ ಬೇಡವೆ ? ಒಪ್ಪಿಕೊಂಡೆ. ಒಂದು ಶರ್ತಿನ ಮೇಲೆ. ಕೈಯಲ್ಲೊಬ್ಬ ಆಳು ಬೇಕು ಎಂದು. ತಾಯಿ ಮುಸಿಮುಸಿ ನಗುತ್ತ, "ಒಂದು ಕೆಲಸ ಮಾಡು....ಕಾಯಂ

ಆಗಿರುವ ಹಾಗೆ ಒಂದು ಹೆಣ್ಣಾಳನ್ನೇ ತೆಗೆದುಕೊಂಡು ಬಾ....ನನ್ನ ಸೇವೆಯೂ ಆಗುತ್ತದೆ. ನಿನ್ನ ಸೇವೆಯೂ ನಡೆಯುತ್ತದೆ. ಅಂಗಡಿ ಕೆಲಸವೂ ಸಾಗುತ್ತದೆ...." ಅವರ ಮಾತಿನ ಅರ್ಥ ಅರಿತ ನಾನು ಹೆಣ್ಣಿನಂತೆ ನಾಚಿ ಮುದ್ದೆ ಆದೆ. ತಾನು ನಾಚಿದ್ದು ಕಂಡು ಅವರು ಪ್ರೀತಿಯಿಂದ ಗದರಿದರು. "ಹಿಂಗ್ಯಾಕ ನಾಚಿಕಿ... ಥೂ....ನಿನ್ನ ಮುಖಕ್ಕೆ ಮೀಸೆ ಕೇಡು...."

ಮರುದಿನ ಅತುಲ ಮುಂಬಯಿಗೆ ಪ್ರಯಾಣ ಬೆಳೆಸಿದ. ರೈಲು ಹತ್ತಿಸಿ, ಅದು ಹೊರಡುತ್ತಿರಲು ನಾನು ಕೇಳಿದೆ,

"ಆದಷ್ಟು ಬೇಗನೇ ಬಂದುಬಿಡು....ಹೆಚ್ಚು ದಿನ ನಿಂತರೆ ಇಲ್ಲಿ ವ್ಯಾಪಾರ ಲಾಸ್ ಆಗುತ್ತದೆ."

"ಆದರೆ ಆಗಲಿಬಿಡು. ಅದರ ಚಿಂತೆ ನನಗಿಲ್ಲ....ಅಪ್ಪ ಇದಾನೆ.... ನೀನಿದಿಯಾ....ನನಗೇನು ?"

ಥೂ. ಕರ್ಪೂರದಂಥ ಬಾಯಿ ಕತ್ತೆಗೆ ತೆಗೆದಂಥಾಯ್ತು ಎಂದು ನನ್ನ ನಾನು ಶಪಿಸಿಕೊಂಡು ಮನೆ ಕಡೆ ಬಂದೆ... ನನ್ನ ನೋಡುತ್ತಲೂ ಅಂಗಡಿ ಯಿಂದಲೇ ತಂದೆ ಕೂಗಿದರು.

"ಎಷ್ಟು ಹೊತ್ತೋ ಅದು....ಬೇಗ ಬಾ....ನನಗೊಬ್ಬನಿಗೆ ಆಗಾ ಇಲ್ಲ !" ಹಾಗೇ ಅಂಗಡಿಯೊಳಗೆ ಕಾಲಿಟ್ಟೆ. ಸರಿ, ಶುರುವಾಯಿತು ವ್ಯವ ಹಾರ. ಸಾಮಾನುಗಳನ್ನು ತೂಕ ಮಾಡಿ ಪ್ಯಾಕ್ ಮಾಡಿ ಇಡಲಾಗಿತ್ತು. ತಂದೆಯವರು ಗಿರಾಕಿಗೆ ಕೊಟ್ಟು ದುಡ್ಡು ಹೇಳುತ್ತಿದ್ದರು. ನಾನು ದುಡ್ಡು ಪಡೆದು ಗಲ್ಲೆಗೆ ಸೇರಿಸುತ್ತಿದ್ದೆ....ಸುಮಾರು ಎರಡು ಗಂಟೆ ಕಾಲ ಸರಿದದ್ದೇ ನಂಗೆ ತಿಳಿಯಲಿಲ್ಲ....ಮಧ್ಯೆ ಮಧ್ಯೆ ತಂದೆಯವರು ತೋರಿಸಿದ ವಸ್ತುಗಳನ್ನು ಎತ್ತಿ ಕೊಡುತ್ತಿದ್ದೆ. ಇಷ್ಟಕ್ಕೆ ಸಾಕು ಸಾಕಾಯ್ತು...

ಮಧ್ಯಾಹ್ನದ ಊಟ ಮುಗಿಸಿ ಕೈತೊಳೆಯುತ್ತಾ ಚಿಕ್ಕ ಮಕ್ಕಳು ಚಂಡಿ ಹಿಡಿಯುವಂತೆ ಅಮ್ಮನಿಗೆ ಹೇಳಿದೆ. "ನನಗೆ ಈ ಕೆಲಸ ಆಗೋದಿಲ್ಲ. ಬೇಗನೇ ಒಂದು ಆಳಿನ ವ್ಯವಸ್ಥೆ ಮಾಡು. ನೀ ಮಾಡದಿದ್ರೆ ನಾನೇ ನೋಡಿ ಕೊಳ್ಳಬೇಕಾಗುತ್ತದೆ...." ಅವಳ ಉತ್ತರಕ್ಕೂ ಕಾಯದೇ ಮಹಡಿ ಮೇಲಿದ್ದ ನನ್ನ ರೂಮು ಸೇರಿದೆ.

ಹಾಂ—ಅಂದ ಹಾಗೆ ಒಂದು ವಿಷಯ ಹೇಳುವುದನ್ನು ಮರೆತೆ. ಅದೇ ನಮ್ಮ ಮನೆಯ ವಿಷಯ. ಕಟ್ಟಡ–ಕಟ್ಟಡದ ವಿನ್ಯಾಸದ ಬಗ್ಗೆ. ಸಧ್ಯ, ನಾವು ಇರುವ ಮನೆ ನಮ್ಮ ತಾತನದು. ಹಳೆಯ ಮನೆಯನ್ನೇ ಒಡೆಸಿ ಅದಕ್ಕೆ ಆಧುನಿಕ ರೂಪ ಕೊಟ್ಟವರು ನಮ್ಮ ತಂದೆ. ನಮ್ಮ ತಂದೆ ವಾಣಿಜ್ಯ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮೀಶನರ ಆಗಿ ನಿವೃತ್ತರಾದವರು. ಹೀಗಾಗಿ ತಮ್ಮ ಸೇವಾ ಅವಧಿಯಲ್ಲಿ ಸಾಕಷ್ಟು ಗಳಿಸಿದ್ದರು ಎಂದು ಹೇಳಲು ನನಗೇನೂ ಸಂಕೋಚವಾಗುವದಿಲ್ಲ....ಮನೆಯ ಎದುರಿಗಿರುವ ಖಾಲಿ ಜಾಗೆಯಲ್ಲಿ ಕಟ್ಟಡಗಳ ಸಂಕೀರ್ಣ ಕಟ್ಟಿಸಿ ಮೇಲೆ ಎಂಟು ಹತ್ತು ಕೊಠಡಿ ಮಾಡಿ ಕಾಲೇಜು ಹುಡುಗರಿಗೆ, ನೌಕರದಾರರಿಗೆ ಬಾಡಿಗೆ ನೀಡಿದ್ದಾರೆ. ಕಟ್ಟಡದ ಬಾಡಿಗೆಯೊಂದೇ ತಿಂಗಳಿಗೆ ಮೂವತ್ತು ಮೂವತ್ತೈದು ಸಾವಿರ ರೂಪಾಯಿ ಬರುತ್ತಿರುವದರಿಂದ ನನಗೆ ನೌಕರಿ ಮಾಡಿ ಅನ್ನಕ್ಕೆ ಮಾರ್ಗ ಹುಡುಕಿಕೊಳ್ಳುವ ಅವಶ್ಯಕತೆ ಬೀಳಲಿಲ್ಲ. ಹಿರಿಯ ಮಗನಾದ ನನ್ನ ಮೇಲೆ ತಂದೆ ತಾಯಿಗಳ ವಿಶೇಷ ಮಮತೆ ಬೇರೆ ಇದ್ದುದರಿಂದ ನನ್ನನ್ನು ದೂರ ನೌಕರಿ ಮೇಲೆ ಕಳಿಸಲು ಅವರು ಒಪ್ಪಲಿಲ್ಲ. ಹೀಗಾಗಿ ನನ್ನ ಒಲವು ಸಾಹಿತ್ಯದ ಕಡೆಗೆ ಹರಿದು ಮೊದಲು ಹವ್ಯಾಸವಾಗಿದ್ದ ಅದು ಈಗ ವ್ಯಾಪಾರ ವೃತ್ತಿಯಾಗಿದೆ. ನನ್ನ ತಮ್ಮ ಅತುಲ ಸಹ ನೌಕರಿ ಮಾಡುವುದು ಅವರಿಗೆ ಹಿಡಿಸದು. ಅದಕ್ಕಾಗಿ ಕಿರಾಣಿ ಅಂಗಡಿ ನಡೆಸುವಂತೆ ಅವನನ್ನು ಪ್ರೇರೇಪಿಸಿದ್ದರು. ವಿಧಿ ಇಲ್ಲದೇ ಆತ ಒಪ್ಪಿಕೊಂಡು ಒಂದು ವರ್ಷದಿಂದ ನಡೆಸಿಕೊಂಡು ಬಂದಿದ್ದ.

ನಮ್ಮ ಮನೆಯ ಮಹಡಿ ಮೇಲೆ ಪ್ರತ್ಯೇಕವಾಗಿ ಮೂರು ಕೋಣೆಗಳಿವೆ. ಎರಡರಲ್ಲಿ ನಾನು ಮತ್ತು ಅತುಲ ಇದ್ದರೆ ಇನ್ನೊಂದರಲ್ಲಿ ಜಯಚಂದ್ರ ಬಾಡಿಗೆಯಿಂದಿದ್ದಾನೆ. ಜಯಚಂದ್ರ ನಗರದ ಬ್ಯಾಂಕೊಂದರಲ್ಲಿ ಉದ್ಯೋಗಿ....

ನಾವಿರುವ ಮನೆಯನ್ನು ನಮ್ಮ ತಂದೆ ತಾಯಿಯವರ ಹೆಸರಿಗೆ ಮಾಡಿದ್ದು ಎದುರಿಗಿರುವ ಕಟ್ಟಡಗಳ ಸಂಕೀರ್ಣವನ್ನು ನನ್ನ ಹಾಗೂ ಅತುಲ ಹೆಸರಿಗೆ ಮಾಡಿದ್ದಾರೆ. ನಮ್ಮಿಬ್ಬರ ಬೇರೆ ಬೇರೆ ಖಾತೆಗಳೂ ಸಹ ಬ್ಯಾಂಕಿನಲ್ಲಿ ಇದ್ದು ಪ್ರತಿ ತಿಂಗಳು ಹತ್ತನೇ ತಾರೀಖಿಗೆ ತಲಾ ಹದಿನೈದು,

ಹದಿನಾರು ಸಾವಿರ ರೂಪಾಯಿಗಳು ನಮ್ಮ ನಮ್ಮ ಖಾತೆಗೆ ಜಮೆ ಆಗುತ್ತವೆ. ಇದರಿಂದಾಗಿ ಆರ್ಥಿಕ ಸ್ಥಿತಿಯಲ್ಲಿ ನಾನು ಗಟ್ಟಿಮುಟ್ಟಾಗಿದ್ದೆ....

ಕಟಕಟ ಬಾರಿಸಿದ ಸದ್ದಿಗೆ ಸುಖಕರವಾಗಿ ನಿದ್ರಿಸುತ್ತಿದ್ದ ನನಗೆ ಎಚ್ಚರವಾಯಿತು. ವಾಚು ನೋಡಿದೆ ಮೂರು ಮುಕ್ಕಾಲು, ನಾಲ್ಕು ಗಂಟೆಗೆ ಅಂಗಡಿ ತೆರೆಯಬೇಕು ಅದಕ್ಕಾಗಿ ತಾಯಿ ಎಬ್ಬಿಸಲು ಬಂದಿರಬೇಕೆಂದುಕೊಂಡೆ. ಏಳಲು ಬೇಜಾರು ಆದರೂ ಎದ್ದು ಬಾಗಿಲು ತೆರೆದೆ. ಮುಗುಳುನಗೆ ನಗುತ್ತಾ ನಿಂತಿದ್ದಳು ತಾಯಿ.

"ಎಂಥಾ ಬೆರಿಕಿ ಇದ್ದೀಯಪ್ಪಾ ನೀನು ...ಇಷ್ಟು ಬೇಗ ಆಳು ಗೊತ್ತ ಮಾಡಿಬಿಟ್ಟೆಯಲ್ಲ...." ನನಗೊಂದೂ ಅರ್ಥವಾಗಲಿಲ್ಲ.

"ಆಳ ? ಎಲ್ಲಿದ ? ನನಗೊಂದೂ ಗೊತ್ತಿಲ್ಲ."

"ನನ್ನ ಮುಂದ ನಾಟಕ ಮಾಡಬ್ಯಾಡ. ನಿನ್ನ ಕೇಳಿಕೊಂಡು, ನೀ ಹೇಳಿ ಕಳಿಸೀದಿ ಅಂತ ಬಂದಾರ....ತಗೋ ನಿನ್ನ ಅಡ್ರೆಸ್ಸಿನ ಕಾರ್ಡು."

ಹೌದು—ಅದು ನನ್ನದೇ....ಅದನ್ನು ಕೊಟ್ಟು ಭೇಟಿಯಾಗಿ ಎಂದು ಹೇಳಿದ್ದ ನೆನಪು ನನಗಿರಲಿಲ್ಲ. ನಾನು ಪೆಚಾಗಿದ್ದನ್ನು ಕಂಡು ಅಮ್ಮನೇ ಹೇಳಿದಳು.

"ನೀ ಗಾಬರಿ ಆಗಬ್ಯಾಡ....ಆಳು ನನಗೆ ಪಸಂದ ಅದ....ಖಾಯಂ ಆಗಿ ಇಟ್ಕೊ." ಎಲ್ಲಾ ಒಗಟಿನಂಥ ಮಾತು.

"ಅವ್ವಾ....ಹಿಂಗ್ಯಾಕ ಮಾತಾಡ್ಲಿಕ್ಕೆ ಹತ್ತಿ."

"ಹುಚ್ಚಪ್ಪಾ....ನಿನ್ನ ಹುಡಿಕ್ಕೊಂಡು ಬಂದೇತಿ ಹುಡುಗಿ. ಭಾಳ ಛಂದ ಇದ್ದಾಳ. ನನಗಂತೂ ಪಸಂದಾಗೇದ. ನೀ ಒಪ್ಪಿದೇ ತಡಾ ಮದ್ವಿ ಮಾಡಿಬಿಡ್ತೇನಿ."

"ಅವ್ವ, ನೀ ಯಾರ ಬಗ್ಗೆ ಹೇಳ್ಲಿಕ್ಕೆ ಹತ್ತಿ....ಯಾರಾಕೆ ? ಆಕೀ ಹೆಸರು ಏನಂತ ?"

"ನನಗೊಂದೂ ಗೊತ್ತಿಲ್ಲ....ಆದ್ರ ಅಪ್ಸರಾ ಇದ್ದ್ಹಂಗ ಇದ್ದಾಳಪಾ."

"ಅಂ ? ಅಪ್ಸರನ ?....ಎಲ್ಲಿದಾಳ ?" ನಾನು ಹೌಹಾರಿ ಕೇಳಿದಾಗ ಕಿಲಿಕಿಲಿ ನಕ್ಕಳು ಅವ್ವ.

"ತುಡುಗು ಸಿಕ್ತಿಲ್ಲ....ಬೋಡೀ....ಹಳೀ ಬೋಡಿ....ನಿನ್ನ ಅವ್ವನ ಹತ್ರಾನೂ ಮುಚ್ಚಿಡೋದೆ....ಇರು ಮ್ಯಾಲೇ ಕಳಸ್ತೀನಿ."

ಅವ್ವ ಹೊರಟುಹೋದಳು. ಬೃಹದಾಕಾರದ ಸಮಸ್ಯೆ ನನ್ನೆದುರಿಗೆ ಇತ್ತು. ಈ ಕಾರ್ಡು ತಂದವಳು ಯಾರು ? ಅಪ್ಸರೆಯಂತೆ....ನಾನಂತೂ ಅಪ್ಸರೆಗೆ ಕಾರ್ಡು ಕೊಟ್ಟ ನೆನಪಿಲ್ಲ....ಹಾಗಾದರೆ....

ಬಾಗಿಲ ಬಳಿ ಸದ್ದಾಯಿತು. ತಲೆಯೆತ್ತಿ ನೋಡಿದೆ....ವಿದ್ಯುತ್ ತಂತಿ ಸ್ಪರ್ಶಿಸಿದಂತಾಯಿತು.

ಬಾಗಿಲಿಗೆ ಅಪ್ಸರಾ ನಗುತ್ತ ನಿಂತಿದ್ದಳು.

"ಬಾಗಿಲು ಮುಚ್ಚಲೋ ಹಾಗೆ ಇರಲೋ...." ತುಂಟ ನಗೆ ಹೊರ ಚೆಲ್ಲಿ ಕೇಳಿದಳಾಕೆ....ಮೈ ಎಲ್ಲಾ ಉರಿಯಿತು. ಬಾಗಿಲು ಮುಚ್ಚಿ ಆಕೆ ಗೋಕರ್ಣದಲ್ಲಿ ಅಪ್ಪಿಕೊಂಡು ಉರುಳಾಡಿದಂತೆ ಉರುಳಾಡಿ, ತಂದೆತಾಯಿ ನೆರೆಹೊರೆಯ ಮುಂದೆ ಮೈಹಣ್ಣಾಗುವಂತೆ ಹೊಡೆಸುವ ಸನ್ನಾಹದಲ್ಲಿ ಬಂದಿರುವಳೋ ಏನೋ ಎಂಬ ಸಂಶಯವೂ ಕಾಡದಿರಲಿಲ್ಲ.

"ಬೇಡ, ಬೇಡ" ಎಂದು ಕೂಗಿಕೊಂಡೆ.

"ಓಹ್, ಭಯವಾ ?... ಅದೂ ಸರಿ....ತಾಯಿ ಇದ್ದಾರಲ್ಲ ?"

ಹಂಸದ ನಡಿಗೆಯಲ್ಲಿ ನನ್ನನ್ನು ಸಮೀಪಿಸಿ ಹತ್ತಿರದಲ್ಲೇ ಮಂಚದ ಮೇಲೆ ಕುಳಿತಾಗ ನಾನು ಆಕ್ಷೇಪಿಸಿದೆ.

"ಇಲ್ಲಿ ಬೇಡ....ಅಲ್ಲಿ ಕೂಡು ಕುರ್ಚಿ ಮೇಲೆ."

"ಯಾಕೆ ? ಮಂಚದ ಮೇಲೆ ನಾನು ಕೂಡಬಾರದಾ ?" ನಾನು ಉತ್ತರಿಸುವದಕ್ಕಿಂತ ಮೊದಲು ಚಹದೊಂದಿಗೆ ಬಂದ ತಾಯಿ ಉತ್ತರಿಸಿದಳು.

"ಧಾರಾಳವಾಗಿ ಕೂಡಮ್ಮ....ನಿನ್ನ ತಡೆಯುವವರಾರು ?"

ಹೆಮ್ಮೆಯಿಂದ ಬೀಗುತ್ತ ನನಗೆ ತೀರ ಹತ್ತಿರದಲ್ಲೇ ಕುಳಿತ ಆಕೆ ತಾಯಿಯಿಂದ ಚಹಾದ ಕಪ್ ಕಸಿದುಕೊಂಡು ಮೊದಲು ನನಗೊಂದು ಕಪ್

ಕೊಟ್ಟು ಆಮೇಲೆ ತಾನು ತೆಗೆದುಕೊಂಡಾಗ ಅಮ್ಮನಿಗೆ ಖುಶಿಯಾದಂತೆ ಕಂಡಿತು. ಚಹ ಕುಡಿಯುತ್ತ ಅಪ್ಸರೆ ನನ್ನನ್ನೇ ನೋಡುತ್ತಿದ್ದರೆ ಅಮ್ಮ ಅವಳನ್ನು ನೋಡುತ್ತಿದ್ದಳು.

ಖಾಲಿಯಾಗಿಟ್ಟ ಕಪ್ ಎಲ್ಲಾ ಟ್ರೇಯಲ್ಲಿಟ್ಟ ಅಪ್ಸರಾ ನೇರವಾಗಿ ತಾಯಿಯನ್ನು ಕೇಳಿದಳು....ಅವಳ ದನಿಯಲ್ಲಿ ವಿಧೇಯತೆ ಜೊತೆ ಆತ್ಮೀಯತೆಯೂ ಬೆರೆತಿತ್ತು.

"ಅಮ್ಮಾ....ನಾನೊಂದು ಮಾತು ಕೇಳಲಾ ?"

"ಕೇಳು ತಾಯಿ....ಅದಕ್ಕೇನು ?"

"ನನ್ನ ಕಾಲೇಜಿಗೆ ರಜೆ ಇದೆ. ಮನೆಯಲ್ಲಿದ್ದು ಬೇಸರ. ನಾಲ್ಕಾರು ದಿನ ನಿಮ್ಮಲ್ಲಿರಬೇಕೆಂದು ಬಂದೆ....ಇಟ್ಟುಕೊಳ್ತೀರಾ...."

"ಧಾರಾಳವಾಗಿ ಇರಮ್ಮ....ಇವನಿಗೂ ಒಂದು ಆಳು ಬೇಕಾಗಿತ್ತು.... ಬಂದೇಬಿಟ್ಟೆಯಲ್ಲ."

"ಅಂ ?....ಏನೆಂದಿರಿ ?....ಆಳಾ ?" ಅಪ್ಸರೆ ಗಾಬರಿಯಾದಳು.

ಅಮ್ಮ ಹೊಟ್ಟೆ ಹುಣ್ಣಾಗುವಂತೆ ನಕ್ಕು, ಎರಡು ದಿನಗಳ ಹಿಂದೆ ನಡೆದ ಮಾತು, ಇಂದು ಮಧ್ಯಾಹ್ನ ಆತ ಮಾಡಿದ ಮೊಂಡುತನ ಎಲ್ಲ ಬಣ್ಣಿಸಿ ಹೇಳಿದರು.

"ಇನ್ನು ಚಿಂತೆ ಇಲ್ಲ. ಇಬ್ಬರೂ ಕೂಡಿ ಅಂಗಡಿ ನೋಡಿಕೊಳ್ಳಿ...."

ಅಮ್ಮ ಮೇಲೇಳುತ್ತಾ ಟ್ರೇ ಕೈಗೆತ್ತಿಕೊಂಡು ಸೂಚನೆ ನೀಡಿದರು. "ಇವಳಿಗೆ ಕೆಳಗಡೆ ರೂಮು ಕೊಡ್ತೇನೆ....ಸ್ವಲ್ಪ ಹೊತ್ತು ಬಿಟ್ಟು ಇಬ್ಬರೂ ಕೆಳಗೆ ಬನ್ನಿ."

ಚಿಕ್ಕದರಲ್ಲೇ ಏನು ಹೇಳಬೇಕೋ ಎಲ್ಲವನ್ನೂ ಅವರು ಹೇಳಿದ್ದರು. ಈಕೆಗೆ ನಿನ್ನ ಕೋಣೆ ಬೇಡ....ನನ್ನ ಜೊತೆಯೇ ಇರಲಿ. ಈಗ ಬಹಳ ಸಮಯ ಕೊಡಬೇಡ....ಕೂಡಿ ಇದ್ದರೆ ಅನಾಹುತವಾದೀತು....ಬೆಂಕಿ.... ಬೆಣ್ಣೆ ಒಂದೇ ಸ್ಥಾನದಲ್ಲಿರುವುದು ಸೂಕ್ತವೇ ? ಎಷ್ಟೆಂದರೂ ಅನುಭವದಲ್ಲೇ ಮುಪ್ಪಾದವರು....

"ಇಲ್ಲಿಗೇಕೆ ಬಂದೆ ? ಇಲ್ಲೇನು ಕೆಲಸ ?"

"ಅರೆರೆ....ಇದೇನು ಸಭ್ಯತೆ ? ಈ ರೀತಿ ಪೊಲೀಸ್ ಭಾಷೆಯೇ ?"

"ತಮಾಷೆ ಬೇಡ....ಏಕೆ ಎಂದು ಹೇಳು. ಗೋಕರ್ಣದಲ್ಲಾದ ಘಟನೆ ಇಲ್ಲಿ ಮರುಕಳಿಸಬಾರದು" ಅದ್ಕೇ....

"ಭಯ ಬೇಡ....ಆ ಶಂಕೆಯೂ ಬೇಡ....ಕೆಲವು ದಿವಸ ನಾನು ತಲೆ ಮರೆಸಿಕೊಂಡು ಇರಬೇಕಾಗಿತ್ತು. ಅದಕ್ಕಾಗಿ ಬಂದೆ. ಕೆಲವೇ ದಿವಸ ಅಷ್ಟೇ."

"ನನ್ನ ವಿಳಾಸ ನಿನಗೆಲ್ಲಿ ಸಿಕ್ಕಿತು ?"

"ಉತ್ತರ ತೀರಾ ಸುಲಭ....ಗೋಕರ್ಣದಲ್ಲಿ ಇದ್ದಾಗ ನಿನ್ನ ರೂಮಿನಲ್ಲಿದ್ದುದನ್ನು ತೆಗೆದೆ. ಅದರೊಂದಿಗೆ ಇನ್ನೂ ಒಂದು ವಿಷಯ."

"ನಿನ್ನ ಬಳಿಯೂ ನನ್ನದೊಂದು ವಸ್ತುವನ್ನಿಟ್ಟದ್ದೇನೆ."

"ನಿನ್ನ ವಸ್ತುವೆ ?"

"ಹೌದು."

"ಏನದು ? ಎಲ್ಲಿದೆ ?"

"ಅದೂ ಸಸ್ಪೆನ್ಸ್. ಸಮಯ ಬಂದಾಗ ಹೇಳುವೆ."

"ಈಗಲಾದರೂ ನೀನು ಯಾರು ? ನಿನ್ನ ಹೆಸರೇನು ? ನೀನೇಕೆ ರಹಸ್ಯಮಯ ರಮಣಿಯಾಗಿ ಅಲೆಯುತ್ತಿರುವೆ ಎಂಬುದನ್ನು ಹೇಳು...."

"ಸಾರಿ....ಸಮಯವಿನ್ನೂ ಬಂದಿಲ್ಲ."

"ಅದು ಯಾವಾಗ....?"

ಬಾಯಿಗೆ ಅವಳ ತುಟಿಗಳು ಬೇಗ ಜಡಿದಿದ್ದವು....ಅದೆಂಥ ರೋಮಾಂಚನ....ಚುಂಬನ ನೀಡಿ ಹಿಂದೆ ಸರಿದಳು ಆಕೆ.

"ಇನ್ನು ಏನೂ ಕೇಳಬೇಡ....ನಡೆ ಹೋಗೋಣ....ತಾಯಿ ಕಾಯ್ತಿವಾರೆ....ನಾವು ಕೆಳಗೆ ಹೋಗುವುದು ತಡವಾದರೆ 'ಏನೋ' ನಡೆದಿದೆ ಎಂದು ಶಂಕೆ ಪಟ್ಟಾರು...." ಆಕೆ ಮುಸಿ ಮುಸಿ ನಕ್ಕಳು.

ಎಂಥ ಬದಲಾವಣೆ !

ಗೋಕರ್ಣದಲ್ಲಾಕೆ ಸಂಪೂರ್ಣ ಗಂಭೀರವಾಗಿದ್ದಳು.

ಇಲ್ಲಿ ಎಷ್ಟು ಚೆಲ್ಲುಚೆಲ್ಲಾಗಿದ್ದಾಳೆ.

ಏನು ಕಾರಣವಿರಬಹುದು ?

ಲುಂಗಿಯ ಮೇಲೆ ಷರ್ಟು ಧರಿಸಿ ಹೊರಬಂದೆ....ಆಕೆ ನನ್ನನ್ನು ಅನುಸರಿಸಿದಳು. ಅಪ್ಪನಿಗೆ ಎಲ್ಲಾ ವಿಷಯ ಅಮ್ಮ ತಿಳಿಸಿದ್ದರಿಂದಾಗಿ ನಮ್ಮಿಬ್ಬರನ್ನು ಅವರು ತುಂಟ ನಗೆಯಿಂದ ಸ್ವಾಗತಿಸಿದರು.

"ಬಾರಮ್ಮ ನನಗೂ ಹಗುರಾಯಿತು....ಇಂದಿನಿಂದ ಈ ಅಂಗಡಿಯಷ್ಟೇ ಅಲ್ಲ, ಈ ಮನೆಯ ಜವಾಬ್ದಾರಿ ಎಲ್ಲಾ ನಿನ್ನದೇ." ಅಪ್ಸರೆ ನಾಚಿ ತಲೆ ತಗ್ಗಿಸಿದಳು.

ನಾಲ್ಕಾರು ದಿನಗಳು ಹೇಗೆ ಕಳೆದವೋ ಗೊತ್ತಾಗಲೇ ಇಲ್ಲ....ಅಪ್ಸರೆ ಈಗ ನಮ್ಮ ಮನೆಯ ಮುದ್ದಿನ ಸೊಸೆ. ನನಗಂತೂ ಆಕೆ ಒಪ್ಪಿಗೆಯಾಗಿದ್ದಳು....ಆದರೆ ಅವಳು ?....ಎಷ್ಟು ದಿನ ನಮ್ಮ ಮನೆಯಲ್ಲಿರುತ್ತಾಳೋ-ಯಾವಾಗ ಅಪ್ಪ ಅಮ್ಮನ ಹೃದಯ ಒಡೆದು ಅವರ ಕನಸುಗಳನ್ನು ಛಿದ್ರಛಿದ್ರ ಮಾಡಿ ಗಾಳಿಗೆ ತೂರಿ ಮಾಯವಾಗುತ್ತಾಳೋ ಅರಿಯೆ....ಆಗ ಅವರ ಮನಸ್ಸಿನ ಮೇಲೆ ಯಾವ ಪರಿಣಾಮವಾಗಬಹುದು ಎಂಬುದನ್ನು ಯೋಚಿಸಿ ಧರೆಗಿಳಿದು ಹೋಗುತ್ತಿದ್ದೆ....ದೇವರೇ ಅಂಥ ದಿನ ಬರದಿರಲಿ ಎಂದು ಬೇಡಿಕೊಳ್ಳುತ್ತಿದ್ದೆ.

ನಿನ್ನೆಯಿಂದ ಅಪ್ಪನಿಗೆ ಮೈ ಹುಷಾರಿಲ್ಲ....ಮನೆಯೊಳಗೇ ಮಲಗಿದ್ದಾರೆ. ನಾನು ಮತ್ತು ಅಪ್ಸರೆ ಇಬ್ಬರೇ ಅಂಗಡಿ ನೋಡಿಕೊಳ್ಳುತ್ತಿದ್ದೇವೆ. ಯಾವ ತೊಂದರೆಯೂ ಅನಿಸುತ್ತಿಲ್ಲ. ಅಪ್ಸರೆ ಬಂದ ಮೇಲೆ ವ್ಯಾಪಾರ ಹೆಚ್ಚಿದೆ ಎಂದು ಅನಿಸುತ್ತಾ ಇದೆ. ಅದು ನಿಜವಾಗದಿದ್ದರೂ ಅಂಗಡಿಗೆ ಬರುವ ಗಿರಾಕಿಗಳು ಹೆಚ್ಚಾಗುತ್ತಿವೆ ಎಂಬುದನ್ನು ಒಪ್ಪಬಹುದು. ಅವರು ಬರುವಾಗ ಒಂದೇ ಸಿಗರೇಟಿಗೋ ಅಥವಾ ಒಂದು ಬೆಂಕಿಪೊಟ್ಟಣಕ್ಕೋ ಅಲ್ಲ....ಕ್ಷೌರ ಮಾಡಿಕೊಳ್ಳುವ ಬ್ಲೇಡಿಗೋ....ಯಾವುದಕ್ಕೋ ಒಂದು ಬರುವಾಗ ವ್ಯಾಪಾರಕ್ಕಾದರೂ ಮುಖ್ಯ ಉದ್ದೇಶ ನನಗೆ ಗೊತ್ತು ಅಪ್ಸರೆಯ ದರ್ಶನ ಪಡೆಯಲು.

ನನಗೂ ಸ್ವಲ್ಪ ಸುಸ್ತು ಅನಿಸಿದ್ದರಿಂದ ಅರ್ಧ ಗಂಟೆ ಮೊದಲೇ ಅಂಗಡಿ ಬಂದು ಮಾಡಿದೆ. ಅಪ್ಸರೆ ಅಮ್ಮನ ಗೂಡು ಸೇರಿದಳು, ನಾನು ರೂಮಿಗೆ ಬಂದೆ. ಜಯಚಂದ್ರನ ಕೋಣೆ ಬಾಗಿಲು ತೆರೆದಿತ್ತು....ಏಕೋ

ಇಂದಾತ ಬ್ಯಾಂಕಿಗೆ ಹೋಗಿರಲಿಲ್ಲ. ಒಳಗೆ ಇಣುಕಿದೆ. ಪುಸ್ತಕ ಓದುತ್ತಿದ್ದ ಆತ ನನ್ನೆಡೆ ನೋಡಿ "ಓಹ್ ನೀವಾ ಬನ್ನಿ" ಎಂದ

"ಇಂದು ಬ್ಯಾಂಕಿಗೆ ರಜವೇ ?"

"ಇಲ್ಲ....ಸ್ಟ್ರೈಕ್"....

"ಸರಿ....ನೀವು ಓದಿಕೊಳ್ಳಿ....ಏಕೋ ಸುಸ್ತಾಗಿದೆ....ಬರುತ್ತೇನೆ.

"ಇದೇನು ಸುಂದರ ಹಕ್ಕಿಯನ್ನು ಪಕ್ಕದಲ್ಲಿಟ್ಟುಕೊಂಡು ಸುಸ್ತಾಗುವುದೆ ?"

"ಅಂದ್ರೆ ?....ಏನು ನಿಮ್ಮ ಮಾತಿನ ಅರ್ಥ ?...."

"ಅಯ್ಯೋ ಕೋಪವೇಕೆ ? ನಿಮ್ಮ ಕೆಲಸ ಮಾಡುತ್ತಿರುವ ಹುಡುಗಿ ಬಗ್ಗೆ ನಾ ಹೇಳಿದ್ದು."

"ಮಿತ್ರ ಜಯಚಂದ್ರ ಬೇರೆ ಒಂದು ಹೆಣ್ಣಿನ ಬಗ್ಗೆ ಈ ರೀತಿ ಮಾತಾಡೋದು ಅಂದ್ರೆ...."

"ನಿಮಗೆ ಇಂಥವರ ಬಗ್ಗೆ ಗೊತ್ತಿಲ್ಲ. ಅದ್ಕೆ ಈ ರೀತಿ ಹೇಳ್ತಾ ಇದೀರಿ. ಬೆಂಗಳೂರಲ್ಲಿ ನಾನು ಇಂಥವರನ್ನು ನೂರಾರು ನೋಡಿದ್ದೇನೆ. ಮೇಲೆ ತೋರಿಸೋಕೆ ತುಂಬಾ ಸ್ಟ್ರಿಕ್ಟ್. ಸಾಯಂಕಾಲ ಆಯ್ತು ಅಂದ್ರೆ-ಸ್ಕೂಟರ ನಿಲ್ಲಿಸಿ ನೂರರ ನೋಟು ತೋರ್‍ಸಿ....ಸಾಕು, ಬಂದು ಹಿಂದೆ ಕೂತು ಬಿಡ್ತಾರೆ. ನಿಮ್ಮ ಹುಡುಗಿಯೂ ಅಷ್ಟೆ."

"ಜಯಚಂದ್ರ...." ಸಿಟ್ಟಿನ ಭರದಲ್ಲಿ ನಾನು ಕಿರುಚಿದೆ. "ಅಪ್ಸರೆ ಬಗ್ಗೆ ನೀನು ಈ ರೀತಿ ಮಾತಾಡಿದ್ರೆ ನಾನು ಸಹಿಸೋದಿಲ್ಲ."

"ಅಪ್ಸರೆ...ಅಪ್ಸರೆನಾ ?...." ಹೋಹೋ ಎಂದು ನಕ್ಕ ಆತ. "ಇಲ್ಲೇ ನೀವು ಮೋಸ ಹೋದದ್ದು. ಅವಳ ಹೆಸರು ಅಪ್ಸರೆ ಅಲ್ಲವೇ ಅಲ್ಲ."

ಒಂದು ಕ್ಷಣ ನಾನು ಚಕಿತನಾದೆ. ಇದೇ ಮಾತನ್ನು ಗೋಕರ್ಣದಲ್ಲಿ ಆ ಪುಟ್ಟ ಬಾಲೆ ಸವಿತಾ ಸಹ ಹೇಳಿದ್ದಳು....ಈಗ ಜಯಚಂದ್ರ.

"ಹಾಗಾದರೆ ಅವಳ ನಿಜ ಹೆಸರೇನು ?"

"ಹೆಸರಾ ?...." ಹೇಳಲು ಹೋದವನೆ ತಕ್ಷಣವೆ ನಿಲ್ಲಿಸಿ ಕೇಳಿದ "ನಿಮಗ್ಯಾಕೆ ಹೇಳಿಲ್ವಾ ?"

"ನಾ ನಿಮಗೆ ಕೇಳ್ತಾ ಇರೋದು....ನೀವು ಹೇಳಿ."

"ಅದು ಮರೆತು ಹೋಗಿದೆ....ನೆನಪಾದಾಗ ಹೇಳ್ತೇನೆ...."

ಅವನ ಮೇಲೆ ಬಿದ್ದು ಚೆನ್ನಾಗಿ ಒದೆಯ ಬೇಕೆನಿಸಿತು. ಪ್ರಯಾಸ ಪಟ್ಟು ತಡೆದುಕೊಂಡು ರೂಮಿಗೆ ಬಂದೆ....

ಸಾಯಂಕಾಲ ಅಂಗಡೀಲಿ ನಾನು ಅಪ್ಪರಿಗೆ ಎಲ್ಲಾ ವಿಷಯ ತಿಳಿಸಿ "ಆ ಜಯಚಂದ್ರ ನನಗಿಂತ ವಾಸಿ. ನಿನ್ನ ಬಗ್ಗೆ ಎಷ್ಟೋ ತಿಳಿದುಕೊಂಡಿದಾನೆ" ಎಂದೆ.

ಅಪ್ಪರಿ ಚಿಂತಿತಳಾಗುವದರೊಂದಿಗೆ ಗಂಭೀರಳಾದದ್ದು ನನ್ನ ಗಮನಕ್ಕೆ ಬಾರದಿರಲಿಲ್ಲ.

ಮರುದಿನ ಮುಂಜಾನೆ ಅತುಲ ಫೋನು ಮಾಡಿದ. ಸಂದರ್ಶನ ಬಹಳ ಚೆನ್ನಾಗಿ ಆಗಿದೆ. ಜಾಬ್ ಸಿಗೋದು ಗ್ಯಾರಂಟಿ ಎಂದ. ಮುಂಬೈಯಿಂದ ಅಜಂತಾ ನೋಡಿಕೊಂಡು ಸಾಧ್ಯವಾದರೆ ಡಿಲ್ಲಿಯವರೆಗೆ ಹೋಗಿ ಬರತೇನೆ ಎಂದ. ಇದರಿಂದಾಗಿ ಈ ಅಂಗಡಿ ಕಾಯಂ ಆಗಿ ನನ್ನ ಕೊರಳಿಗೆ ಎಲ್ಲಿ ಬೀಳುತ್ತದೋ ಎಂದು ಹೆದರಿದೆ. ನನ್ನ ಭಯ ಅಪ್ಪಾಜಿಗೂ ಅರ್ಥವಾಗಿರಬೇಕು. ಧೈರ್ಯ ಹೇಳಿದರು.

"ನೀ ಏನೂ ಹೆದರುವ ಅವಶ್ಯಕತೆ ಇಲ್ಲಪ್ಪಾ....ಮುಂದಿನ ವಾರ ಇಬ್ಬರು ಹುಡುಗರನ್ನು ಇಟ್ಟುಕೊಂಡು ಅಂಗಡಿ ನಾನೇ ನೋಡಿಕೊಳ್ತೇನೆ. ನೀನು ನಿನ್ನ ಕೆಲಸದಲ್ಲಿ ತೊಡಗಬಹುದು....ತಿಳೀತಾ...."

ಸರಿ ಎಂದು ಗೋಣು ಹಾಕಿ ಅಂಗಡಿಗೆ ಬಂದೆ....ಅಪ್ಸರೆಯೊಂದಿಗೆ ಮಾತನಾಡುವ ಮನಸ್ಸಾಗಲಿಲ್ಲ....ಮೋಸಗಾತಿ, ಸುಳ್ಳುಗಾತಿ....ಅವಳೊಂದಿಗೇನು ಮಾತು....ಇಂದೋ ನಾಳೆಯೋ ಅಮ್ಮನಿಗೆ ಎಲ್ಲಾ ವಿಷಯ ತಿಳಿಸಿ ಇವಳಿಗೆ ಟಿಕೆಟ್ ಕೊಡಿಸಬೇಕು ಎಂದು ಮನದಲ್ಲಿ ಯೋಚಿಸಿದೆ.

"ಏನು ಸಾಹೇಬರು....ಭಯಂಕರ ಗಂಭೀರವಾಗಿದೀರಿ...." ಅಪ್ಸರೆ ಚೇಷ್ಟೆ ಮಾಡಿದಳು.

"ನನ್ನ ವಿಷಯ ನಿನಗ್ಯಾಕೆ ?....ನಿನ್ನ ಕೆಲಸ ನೋಡಿಕೊ" ನಾನು ಸಿಡುಕಿದೆ.

"ಅಬ್ಬಾ....ಬ್ಯಾಡಗಿ ಮೆಣಸಿನ ಕಾಯಿಯಂತೆ ನಿಮ್ಮ ಕೋಪವೂ ಶಾರ್ಪೇ...."

ಸಿಟ್ಟಿನಿಂದಾಗಿ ನನ್ನ ಬಾಯಿಯಿಂದ ಯಾವ ಮಾತು ಸಿಡಿಯುತ್ತಿತ್ತೊ ಏನೋ ಅಂಗಡಿ ಮುಂದೆ ಬಂದು ನಿಂತ ಆಟೋರಿಕ್ಷಾದಿಂದಾಗಿ ಬ್ರೇಕ್ ಬಿತ್ತು. ಸುಮಾರು ಇಪ್ಪತ್ತೆಂಟು ಮೂವತ್ತು ವರ್ಷಗಳ ಗಟ್ಟಿ ಶರೀರದ ವ್ಯಕ್ತಿಯೊಂದು ಸೂಟ್‌ಕೇಸಿನೊಂದಿಗೆ ಕೆಳಗಿಳಿಯಿತು. ಬಾಡಿಗೆ ಕೊಟ್ಟು ಜೇಬಿನಿಂದ ಚೀಟಿಯೊಂದನ್ನು ತೆಗೆದು ನೋಡಿ ನನ್ನ ಕಡೆ ಹೆಜ್ಜೆ ಹಾಕಿತು.

ಅವನೊಬ್ಬ ಆಕರ್ಷಕ ತರುಣ.

"ಸರ್....ಈ ವಿಳಾಸ ನಿಮ್ಮದೇ ತಾನೇ "

ನಾನು ಚೀಟಿ ಇಸಿದುಕೊಂಡೆ. ನಮ್ಮದೇ ವಿಳಾಸ. ಜಯಚಂದ್ರನ ಹೆಸರು.

"ಹೌದು....ಒಳಗೆ ಹೋಗಿ ಮಹಡಿ ಮೇಲಿದೆ ಕೋಣೆ."

"ಥ್ಯಾಂಕ್ಸ್...." ಆತ ಚೀಟಿ ಜೇಬಿಗಿಡುತ್ತಿದ್ದಂತೆ ಅವನ ದೃಷ್ಟಿ ಅಪ್ಸರೆಯತ್ತ ಹರಿಯಿತು. ಆತ ಬೆಚ್ಚಿಬಿದ್ದ....ಅವರ ನಡತೆ ನನ್ನ ಗಮನಕ್ಕೆ ಬಂದಿದ್ದರಿಂದ ನಾನು ಕೂಡಲೇ ಅಪ್ಸರೆಯತ್ತ ನೋಡಿದೆ. ಆಕೆ ಮುಖ ಬಿಳಿಚಿಕೊಂಡಿತ್ತು. ಯಾವ ಮಾತೂ ಆಡದೆ ಆ ತರುಣ ಅಲ್ಲಿಂದ ಸರಿದು ಹೋದ....

ನನಗೆ ಅಪ್ಸರೆ ಬಗ್ಗೆ ಚಿಂತೆಯುಂಟಾಯಿತು.

ಯಾರೀಕೆ ?

ನನ್ನ ಬಿಟ್ಟು ಉಳಿದೆಲ್ಲರಿಗೂ ಇವಳ ಬಗ್ಗೆ ತಿಳಿದಿದೆ.

ಆದರೆ ಯಾರೂ ಬಹಿರಂಗ ಪಡಿಸುತ್ತಿಲ್ಲ.

ಈಕೆಯೋ....ನನ್ನ ನೆರಳಲ್ಲೇ ಇದ್ದು ನನ್ನ ಆಶ್ರಯವನ್ನೇ ಬಯಸಿ ಬಂದು....ನನಗೆ ಚಳ್ಳೇ ಹಣ್ಣು ತಿನ್ನಿಸುತ್ತಿದ್ದಾಳೆ....

ಸುಮಾರು ಒಂದು ಒಂದೂವರೆ ಗಂಟೆ ನಂತರ ಜಯಚಂದ್ರ ತನ್ನ ಹೊಸ ಸ್ನೇಹಿತನೊಂದಿಗೆ ಕೆಳಗೆ ಬಂದ. ರಿಕ್ಷಾ ಒಂದನ್ನು ನಿಲ್ಲಿಸಿದ. ಊರಿನಿಂದ ಬಂದಾತ ನನ್ನ ಬಳಿ ಬಂದು ವಿನಂತಿಸಿಕೊಂಡ.

"ನಾನು ಸಂಜೆ ಟ್ರೈನಿಗೆ ಹೋಗ್ತಾ ಇದ್ದೇನೆ. ಜಯಚಂದ್ರ ಇರೋದಿಲ್ಲ....ಅದಕ್ಕಾಗಿ ದಯವಿಟ್ಟು ಈ ಸೂಟಕೇಸು ಇಲ್ಲಿಯೇ ಇಟ್ಟುಕೊಂಡರೆ ನಾನು ಆಮೇಲೆ ಬಂದು ಒಯ್ಯುತ್ತೇನೆ."

"ಸರಿ ಆಗಬಹುದು ಕೊಡಿ" ಎಂದೆ. ಆತ ಸೂಟುಕೇಸು ಇಟ್ಟು ಥ್ಯಾಂಕ್ಸ್ ಹೇಳಿ ಜಯಚಂದ್ರನೊಂದಿಗೆ ಆಟೋ ಹತ್ತಿದ....ನಾನು ಸೂಟಕೇಸನ್ನು ಮೇಲೆ ಇಟ್ಟು ಅಪ್ಸರೆ ಕಡೆ ನೋಡಿದೆ. ಆಶ್ಚರ್ಯ ಅಪ್ಸರೆ ಮಾಯವಾಗಿದ್ದಳು....ಹತ್ತು ನಿಮಿಷ ಬಿಟ್ಟು ಅಮ್ಮ ಒಳಗೆ ಬಂದಳು. ನಾನವರತ್ತ ನೋಡಿದೆ.

"ಅಪ್ಸರೆಗೆ ಮೈ ಹುಷಾರಿಲ್ಲ....ವಾಂತಿ ಮಾಡಿಕೊಳ್ತಾ ಇದ್ದಳು.... ಮಲಗಿಕೊಮ್ಮ ಸ್ವಲ್ಪ ವಿಶ್ರಾಂತಿ ತಗೋ ಎಂದು ಹೇಳಿ ಮಲಗಿಸಿ ನಾನು ಬಂದೆ."

ನಾನು ಏನು ಕೇಳಬೇಕೆಂದಿದ್ದೆನೋ ಅದನ್ನು ಕೇಳುವುದಕ್ಕೆ ಮೊದಲೇ ಅದಕ್ಕೆ ಉತ್ತರ ನೀಡಿ ನನ್ನತ್ತ ತೀಕ್ಷ್ಣವಾಗಿ ನೋಡುತ್ತಾ ಕೇಳಿದಳು, "ನಿಜ ಹೇಳು... ನನ್ನ ಮೇಲೆ ಆಣೆ....ಏನೂ ಹೆಚ್ಚೂ ಕಡಿಮೆ ಆಗಿಲ್ಲವಷ್ಟೇ"

"ಯಾವುದಮ್ಮಾ."

"ಮಳ್ಳನಂತೆ ಆಡಬೇಡ, ಅಪ್ಸರೆ ವಾಂತಿ ಮಾಡಿಕೊಳ್ತಿದಾಳೆ...."

ಅಮ್ಮನ ಮನದಲ್ಲಿದ್ದ ಶಂಕೆ ಅರ್ಥವಾಯಿತು. ಜೋರಾಗಿ ನಕ್ಕೆ.

"ಅಮ್ಮ....ನೀನೊಂದು ಪೊದ್ದು....ಏನೇನೋ ಯೋಚಿಸ್ತೀಯಾ.... ನೀನು ತಿಳಿದಂತೆ ಏನೂ ಆಗಿಲ್ಲ. ಅಪ್ಸರೆಯ ಪರಿಚಯ ಇತ್ತೀಚೆಗೆ ಆಗಿದೆ. ನಾನವಳ ಮೈ ಸಹ ಮುಟ್ಟಿಲ್ಲ....ಆಯ್ತಾ."

ಅಮ್ಮನಿಗೆ ಧೈರ್ಯ ಬಂತು. ನಿಟ್ಟುಸಿರು ಬಿಟ್ಟಳು.

"ಈಗ ನನಗೆ ಸಮಾಧಾನವಾಯಿತಪ್ಪಾ. ಇನ್ನು ನಿನ್ನ ಮದುವೆಗೆ ತಡ ಮಾಡುವುದಿಲ್ಲ...." ನಾನು ಮಾತು ಬೆಳೆಸಲಿಲ್ಲ....

ಸರಿಯಾಗಿ ಒಂದೂವರೇಗೆ ಅಂಗಡಿ ಬಂದು ಮಾಡಿ ಅಮ್ಮನಿಗೆ ಹೇಳಿದೆ "ಅಮ್ಮ ಊಟ ಮೇಲೆ ತಂದ್ಬಿಡು...."

ಕೈಕಾಲು ತೊಳೆದು ಅಡ್ಡಾದೆ. ಎಂಟು ದಿನಗಳಿಂದ ವಾಕಿಂಗ್ ತಪ್ಪಿತ್ತು. ಕರಾಟೆ ತಪ್ಪಿತ್ತು. ಹೀಗಾಗಿ ಜಾಡ್ಯವುಂಟಾಗಿತ್ತು. ಮೈ ಎಲ್ಲಾ ಭಾರ, ಸುಸ್ತು.

ಊಟ ಮಾಡಿ ಹಾಸಿಗೆ ಮೇಲೆ ಉರುಳಿದಾಗ ನೆನಪಾಯ್ತು.... ಅಪ್ಸರೆ ಬಗ್ಗೆ ಅಮ್ಮನನ್ನು ಕೇಳಲಿಲ್ಲವಲ್ಲ ಎಂದು....ಹಾಗೇ ನಿದ್ದೆ ಹೋದೆ. ಎಚ್ಚರ ಆದಾಗ ಗಪ್ ಎಂಬ ಕತ್ತಲೆ ಕಣ್ಣಿಗೆ ರಾಚಿತು. ಎದ್ದು ದೀಪ ಉರಿಸಿ, ವೇಳೆ ನೋಡಿದೆ.... ಏಳೂಮುಕ್ಕಾಲು....ನಾನು ಐದುಗಂಟೆ ಕಾಲ ನಿದ್ರಿಸಿದ್ದೆ....ನನ್ನನ್ನು ಅಮ್ಮ ಸಹ ಎಚ್ಚರಿಸಿರಲಿಲ್ಲ.

ಬಾತ್‌ರೂಮಿಗೆ ನುಗ್ಗಿ ಸರಸರ ಮುಖ ತೊಳೆದು ಬಟ್ಟೆ ಧರಿಸಿ ಕೆಳಗಿಳಿದೆ. ಮನೆಯಲ್ಲಿ ಅಪ್ಪ ಟಿ.ವಿ. ನೋಡುತ್ತಾ ಕುಳಿತಿದ್ದರು. ಇಂದು ಸ್ವಲ್ಪ ಅವರಿಗೆ ಗುಣವಾಗಿತ್ತು. ಫ್ಲಾಸ್ಕಿನಿಂದ ಟೀ ಕಪ್ಪಿಗೆ ಹಾಕಿಕೊಂಡು ಅಪ್ಪನ ಬಳಿ ಬಂದೆ. ಅವರಿಗೆ ಅರ್ಧಕಪ್ ಕೊಟ್ಟು ನಾನು ಫುಲ್ ಡೋಜ್ ಕುಡಿದು ಅಂಗಡಿಗೆ ಬಂದೆ. ಅಮ್ಮ....ಅಪ್ಸರೆ ಇಬ್ಬರೂ ಕೆಲಸದಲ್ಲಿದ್ದರು. ನಾನು ಅಪ್ಸರೆಗೆ ಕೇಳಿದೆ "ಈಗ ಹೇಗಿದೆ ?"

"ಪರವಾಯಿಲ್ಲ."

ಅಮ್ಮ ತನ್ನ ಜಾಗ ನನಗೆ ಬಿಟ್ಟು ಕೊಟ್ಟಳು.

ಸಮಯ ಕಳೆಯುತೊಡಗಿತು ಒಂಬತ್ತು ಗಂಟೆ ಸಮೀಪಿಸಿತು. ಇನ್ನೇನು ಅಂಗಡಿ ಬಾಗಿಲು ಮುಚ್ಚಬೇಕು, ಪೊಲೀಸ್ ಜೀಪು ಬಂದು ಅಂಗಡಿ ಮುಂದೆ ನಿಂತಾಗ ಎದೆಗುಂಡಿಗೆ ಮೆಲುವಾಗಿ ನಡುಗಿತು. ಅಪ್ಸರೆ ಕಡೆ ನೋಡಿದೆ ಆಕೆ ಮೆಲ್ಲನೆ ಹಿಂದೆ ಸರಿದು ಬಾಗಿಲು ದಾಟಿ ಮರೆಯಾದಳು.

"ಬನ್ನಿ" ಡವಗುಡುತ್ತಿರುವ ಮನಸ್ಸನ್ನು ನಿಯಂತ್ರಣಕ್ಕೆ ತಂದುಕೊಳ್ಳುತ್ತ ನಾನು ಪೊಲೀಸ್ ಆಫೀಸರರನ್ನು ಸ್ವಾಗತಿಸಿದೆ. ಅವರೂ ಸಭ್ಯರೆಂದೆನಿಸಿತು.

"ದಯವಿಟ್ಟು ಕ್ಷಮಿಸಿ....ನಿಮಗೆ ತೊಂದ್ರೆ ಕೊಡ್ತಾ ಇದೇವೆ."

"ತೊಂದ್ರೆ ಏನು ಸಾರ್....ಹೇಳಿ ಏನಾಗಬೇಕು,"

ಜೇಬಿನಿಂದ ಕೆಬಿನೆಟ್ ಸೈಜಿನ ಫೋಟೋ ಹೊರ ತೆಗೆದು ನನ್ಮುಂದೆ ಹಿಡಿದರು.

"ಇವರು ನಿಮಗೆ ಗೊತ್ತಾ ?"

ಫೋಟೋ ನೋಡಿದೆ. ಬೆಚ್ಚಿದೆ. ಬೆಳಿಗ್ಗೆ ಜಯಚಂದ್ರನ ರೂಮಿಗೆ ಬಂದವ.

"ಇವರು ನಿಮ್ಮಲ್ಲಿಗೆ ಬರುವವರಿದ್ದರೆಂದು ನಮಗೆ ತಿಳಿದು ಬಂದಿದೆ."

"ಹೌದು....ಇಂದು ಬೆಳಿಗ್ಗೆ ಬಂದಿದ್ದರು. ಮೇಲ್ಗಡೆ ಜಯಚಂದ್ರ ಅಂತ ಬಾಡಿಗೆಗಿದ್ದಾರೆ. ಅವರ ಜೊತೆ ಹೊರಗೆ ಹೋದರು. ಅರೆ ಇಂದು ಸಂಜೆ ಅವರು ಊರಿಗೆ ಹೋಗುವವರಿದ್ದರು"

"ಎಲ್ಲಿಗೆ ? ಯಾವ ಊರಿಗೆ ?...." ಹೌಹಾರಿದರು ಅವರು. "ನಂಗೊತ್ತಿಲ್ಲ" ನನ್ನ ದೃಷ್ಟಿ ಸೂಟಕೇಸ್ ಕಡೆ ಹರಿಯಿತು. ಸೂಟ್‌ಕೇಸ್ ಅಲ್ಲೆ ಇತ್ತು.

"ಇಲ್ಲ....ಅವರಿನ್ನೂ ಹೋದಂತಿಲ್ಲ. ಸೂಟಕೇಸ್ ಇನ್ನೂ ಇಲ್ಲೆ ಇದೆ "

"ಹೌದಾ....ಗುಡ್....ನಮಗೆ ಜಯಚಂದ್ರರ ರೂಮು ತೋರಿಸಿ...."

ಅಂಗಡಿ ಮುಂದೆ ಆಗಲೇ ಜನ ನೆರೆದಿದ್ದರು. ವಿಷಯ ತಿಳಿದು ಅಪ್ಪ.... ಅಮ್ಮ ಇಬ್ಬರೂ ಓಡಿ ಬಂದಿದ್ದರು. ಅಪ್ಸರೆಯ ಸುಳಿವಿಲ್ಲ. ಬಹುಶಃ ಆಕೆ ಒಳಗೆ ಅವಿತುಕೊಂಡಿರಬೇಕು.

"ಏನೋ ಇದೆಲ್ಲ....ಪೊಲೀಸರೇಕೆ ಬಂದಿದಾರೆ" ಅಪ್ಪ ಹೆದರಿಕೆಯಿಂದ ಕೇಳಿದರು.

"ಅಪ್ಪಾ ನೀವೇನೂ ಹೆದರಬೇಡಿ....ಜಯಚಂದ್ರನ ಸ್ನೇಹಿತರ ಬಗ್ಗೆ ಕೇಳಲು ಬಂದಿದಾರೆ....ನೀವಿಲ್ಲೇ ಇರಿ, ಬಂದೆ...."

ಮೆಟ್ಟಿಲು ಹತ್ತಿ ಜಯಚಂದ್ರನ ರೂಮಿಗೆ ಬಂದೆವು. ಬೀಗ ಹಾಕಿತ್ತು. "ಅವರು ರಾತ್ರಿ ಬರೋದಿಲ್ಲ....ಊರಿಗೆ ಹೋಗಬೇಕು ಅಂದಿದ್ರು .. ಅವರ ಸ್ನೇಹಿತರು ನನ್ನ ಬಳಿ ಸೂಟಕೇಸು ಬಿಟ್ಟು ಸಂಜೆ ಬರ ತೇನೆ ಅಂತ ಹೇಳಿ ಹೋದವರು ಇನ್ನೂ ಬಂದಿಲ್ಲ. ಸೂಟಕೇಸ್ ಇಲ್ಲೇ ಇದೆ."

ಪುನಃ ಕೆಳಗೆ ಬಂದೆವು.

"ಸ್ವಲ್ಪ ಸೂಟ್‌ಕೇಸ್ ಇಲ್ಲಿ ಕೊಡಿ" ಪೊಲೀಸ್ ಆಫೀಸರ ಆಜ್ಞೆ.... ಅವಮಾನ್ಯ ಮಾಡಲಾದೀತೆ ?

ಮೇಲಿಟ್ಟ ಸೂಟ್‌ಕೇಸ್‌ಗೆ ಕೈ ಹಾಕಿದೆ. ಓಡಿ ಹಿಡಿದು ಮುಂದೆ ಎಳೆದುಕೊಂಡು ಕೊಕ್ಕೆ ಜಗ್ಗಿದೆ....ಬೀಗ ಹಾಕಿರಲಿಲ್ಲ ಎಂದು ಕಾಣುತ್ತದೆ. ಒಮ್ಮೆಲೆ ಬಾಯಿ ತೆರೆದು ಸೂಟ್‌ಕೇಸು ಕೈಯಿಂದ ಜಾರಿ ಕೆಳಗೆ ಬಿತ್ತು. ನಾನು ಚೀರಿಕೊಂಡು ಸೂಟಕೇಸಿನತ್ತ ನೋಡಿದೆ.

ಎದೆಯೊಡೆಯಿತು.

ಅಪ್ಪ "ಅಯ್ಯೊ ಇದೇನು" ಅಂದರು.

ಅಮ್ಮ ಲಬೋ ಲಬೋ ಎಂದು ಬಡಿದು ಕೊಂಡು ಒಳಗಡೆ ಓಡಿದರು. ಪೊಲೀಸ್ ಅಧಿಕಾರಿ ಒಳಗೆ ಧಾವಿಸಿದ.

ಕೈಕಾಲು ಕತ್ತರಿಸಿ, ರುಂಡ-ಮುಂಡ ಬೇರ್ಪಡಿಸಿ ಹೊಂದಿಸಿಟ್ಟ ಜಯಚಂದ್ರನ ಶವ ಎಲ್ಲರನ್ನೂ ಸ್ವಾಗತಿಸಿತು....

ನಂಬಲಾಗದ ಸತ್ಯ.

ಯಾವ ಮನುಷ್ಯ ಬಂದು ನನ್ನ ಕೈಗೆ ಸೂಟ್‌ಕೇಸು ನೀಡಿ ಸಂಜೆ ಬಂದು ಒಯ್ಯುತ್ತೇನೆ ಎಂದು ಹೇಳಿದ್ದನೋ....ಅವನದೇ ತುಂಡು ತುಂಡಾದ ಶವ, ಅವನೇ ಕೊಟ್ಟ ಅವನದೇ ಸೂಟಕೇಸಿನಲ್ಲಿ....

ಅದೆಂತು ಸಾಧ್ಯ ?

ತಾನು ಜೀವಂತವಾಗಿರುವಾಗಲೇ ತನ್ನ ಶರೀರ ತಾನೇ ಕತ್ತರಿಸಿ ಸೂಟಕೇಸಿನಲ್ಲಿ ತುಂಬಿಕೊಟ್ಟು ಹೋಗಲು ಸಾಧ್ಯವೇ ?....

ತಲೆ ಗಿರ್ರ ಎಂದಿತು....

ಯಾವದು ಅಸಾಧ್ಯವೋ ಅದು ಸಾಧ್ಯವಾಗಿ ಪರಿಣಮಿಸಿತ್ತು.

ನಾನು ಪೊಲೀಸರ ಬಂದಿಯಾದೆ....

ಅಪ್ಪ ವಕೀಲರ ಬಳಿ ಓಡಿದರು. ಅಮ್ಮ ಹಾಸಿಗೆ ಹಿಡಿದಳು.

ಅಪ್ಸರೆ ಮಾಯವಾಗಿದ್ದಳು....ಜಯಚಂದ್ರನ ಸುಳಿವಿರಲಿಲ್ಲ....

ಅಂಗಡಿ ಎದುರು ನೂರಾರು ಜನ ಸೇರಿ ತಮಾಷೆ ನೋಡುತ್ತಿದ್ದರು. ಇಬ್ಬರು ಮೂವರು ಪೊಲೀಸರು ಜನರನ್ನು ಚದುರಿಸುವ ವ್ಯರ್ಥಪ್ರಯತ್ನದಲ್ಲಿ ತೊಡಗಿದ್ದರು. ಇನ್‌ಸ್ಪೆಕ್ಟರ್ ಕೇಳಿದರು.

"ನಾನು ಕೊನೆಯ ಬಾರಿ ಕೇಳುತ್ತೇನೆ...."

"ನೀವೆಷ್ಟು ಬಾರಿ ಕೇಳಿದರೂ ಉತ್ತರ ಒಂದೇ ಆಫೀಸರ್, ಸತ್ಯವಾಗಿ ನನಗೆ ಏನೂ ತಿಳಿಯದು. ಆತ ಸೂಟಕೇಸು ಕೊಟ್ಟು ಜಯಚಂದ್ರನ ಜೊತೆ ಹೊರಟು ಹೋದ. ಆಗ ಸೂಟಕೇಸು ಎತ್ತಿ ಮೇಲಿಟ್ಟಿದ್ದೆ. ಈಗಲೇ ಅದು ನೀವು ಕೇಳಿದಾಗಲೇ ನಾನು ತೆಗೆದುಕೊಟ್ಟದ್ದು."

"ನಾನ್ಸೆನ್ಸ್....ತನ್ನ ಹೆಣ ಪ್ಯಾಕ್ ಮಾಡಿ ತಾನೇ ಕೊಟ್ಟು ಹೋಗತ್ತಾನೆಯೆ ?"

"ವಾದ ಮಾಡಲಾರೆ....ನಿಜವಾದ ವಿಷಯ ತಿಳಿಸಿರುವೆ."

"ಮಿಸ್ಟರ್ ಸುಳ್ಳು ಹೇಳುವುದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ."

"ನಾನು ಹೇಳಿದ್ದು ಸತ್ಯ....ಒಂದು ವೇಳೆ ನಿಮ್ಮ ವಾದ ಸತ್ಯ ಎಂದೇ ಇಟ್ಟುಕೊಳ್ಳಿ. ನಾ ಸೂಟಕೇಸಿನಲ್ಲಿ ಶವ ಇದ್ದ ವಿಷಯ ನನಗೆ ಮೊದಲೇ ಗೊತ್ತಿದ್ದಿದ್ದರೆ....ನಾನೇಕೆ ಸೂಟಕೇಸಿದೆ ಎಂದು ಹೇಳುತ್ತಿದ್ದೆ. ನಾನೇ ಏಕೆ ಎತ್ತಿ ಕೊಡಲು ಹೋಗುತ್ತಿದ್ದೆ ?....ಅದಕ್ಕೆ ಬೀಗ ಹಾಕದೇ ತಾನೇ ಏಕೆ ಇಡುತ್ತಿದ್ದೆ....ಹೇಳಿ."

ನನ್ನ ಮಾತಿನಲ್ಲಿ ಸತ್ಯಾಂಶವಿತ್ತು. ಆತ ಯೋಚನಾ ಮಗ್ನನಾದ. ಒಂದೆರಡು ನಿಮಿಷ ಬಿಟ್ಟು "ಸ್ವಲ್ಪ ಜಯಚಂದ್ರನ ರೂಮು ಚೆಕ್ ಮಾಡಬೇಕು" ಎಂದ. "ನನ್ನ ಬಳಿ ಬೀಗದಕೈ ಇಲ್ಲ" ಎಂದೆ. "ನೋ ಪ್ರಾಬ್ಲಂ.... ನೀವು ಒಪ್ಪಿಗೆ ಕೊಟ್ಟರೆ ಬೀಗ ಮುರಿಯುತ್ತೇನೆ." "ನಿಮಗೆ ಸರಿ ಕಂಡಂತೆ ಮಾಡಿ."

ನಾಲ್ಕಾರು ಜನ ಪಂಚರೊಂದಿಗೆ ನಾನು ಪುನಃ ಜಯಚಂದ್ರನ ರೂಮಿಗೆ ಬಂದೆ. ಎರಡೇ ನಿಮಿಷಗಳಲ್ಲಿ ಬೀಗ ಮುರಿದು ಕೆಳಗೆ ಬಿತ್ತು.

ಮೊದಲು ಇನ್‌ಸ್ಪೆಕ್ಟರ ಒಳಗೆ ಹೋಗಿ ದೀಪ ಹುಡುಕಿ ಹೊತ್ತಿಸಿದ. ಆ ಮೇಲೆ ನಾನು ಒಳಗೆ ಕಾಲಿಟ್ಟೆ.... ತಬ್ಬಿಬ್ಬಾಗಿ ನಿಂತೆ.

ರೂಮಿನ ಮಧ್ಯಭಾಗದಲ್ಲಿ ರಕ್ತದ ಕಲೆಗಳು.... ಮೂರು ನಾಲ್ಕು ಪ್ಲಾಸ್ಟಿಕ್ ಚೀಲಗಳು ಅವೂ ಸಹ ರಕ್ತರಂಜಿತವಾಗಿದ್ದವು....

"ಈಗ ಹೇಳಿ.... ಏನಿದರ ಅರ್ಥ ?" ಸಿಟ್ಟಿನಿಂದ ಕೇಳಿದ ಇನ್‌ಸ್ಪೆಕ್ಟರ್.... ಉತ್ತರಿಸಲು ನನಗೆ ಸಮಯ ಹಿಡಿಯಿತು.

"ನನಗೂ ಅರ್ಥವಾಗ್ತಾ ಇಲ್ಲ" ಉಗುಳು ನುಂಗುತ್ತ ನುಡಿದೆ.

"ಅಷ್ಟು ಮೂರ್ಖರು ಅಂತ ನನಗನಿಸೋದಿಲ್ಲ ಮಿಸ್ಟರ್.... ಎಲ್ಲಾ ಚಿತ್ರ ಸ್ಪಷ್ಟವಾಗಿದೆ....ಇಲ್ಲೇ ಕೊಲೆಮಾಡಿ ಸೂಟಕೇಸ್‌ನಲ್ಲಿ ತುಂಬಿ ಕೆಳಗಡೆ ತಂದಿದ್ದೀರಿ."

"ಸುಳ್ಳು.... ಸುಳ್ಳು.... ಹಾಗಿದ್ದರೆ ಸೂಟಕೇಸು ಅಲ್ಲೆ ಇಡಲು ಏನು ಹುಚ್ಚು ?"

"ಹುಚ್ಚಲ್ಲ.... ನಿಶ್ಚಿಂತೆ.... ಯಾರಿಗೂ ಸಂಶಯವಿಲ್ಲ.... ಯಾರೂ ಬರಲಾರರು, ರಾತ್ರಿ ಎಲ್ಲಾದರೂ ಸಾಗಿಸಿದರಾಯ್ತೆಂದು ಅಲ್ಲೇ ಇಟ್ಟಿದ್ದೀರಿ.... ಇನ್ನು ನಾನು ಮೂರ್ಖನಾಗಲಾರೆ.... ನಾಗರಾಜನ ಕೊಲೆ ಮಾಡಿದ ಆಪಾದನೆ ಮೇಲೆ ನಾನು ನಿಮ್ಮನ್ನು ಬಂಧಿಸುತ್ತೇನೆ"

"ನಾಗರಾಜ.... ಯಾರು ಈತ ?"

ಬೆಂಗಳೂರಿನಲ್ಲಿರುವ ಪೊಲೀಸ್ ಕಾನ್‌ಸ್ಟೇಬಲ್ ಈತ. ನಾಲ್ಕು ದಿನಗಳಿಂದ ಕಾಣೆಯಾಗಿದ್ದ. ಇವನ ಮನೆ ಶೋಧಿಸಿದಾಗ ನಮಗೆ ನಿಮ್ಮ ವಿಳಾಸ ದೊರೆಯಿತು. ಹುಡುಕುತ್ತಾ ಬಂದೆವು. ಈಗಾದರೂ ಅರ್ಥ ಆಯ್ತಾ ?"

ಮುಂದೆ ನನ್ನಿಂದ ಮಾತು ಹೊರಡಲಿಲ್ಲ.

ನಯವಾದ ರೇಶಿಮೆ ಬಲೆಯಲ್ಲಿ ನಾನು ಬಂಧಿತನಾಗಿದ್ದೆ.

ಬಲೆ ಹೆಣೆದವರಾರು ?

ಅಪ್ಸರೆಯೆ ?.... ಜಯಚಂದ್ರನೆ ?....

ಅವರಿಗೂ ನನಗೂ ಏನು ಸಂಬಂಧ ?

ಅವ್ವರೇಕೆ ನನ್ನನ್ನೂ ಕೊಲೆಯ ಬಲೆಯಲ್ಲಿ ಸಿಕ್ಕಿಸಿದರು ?

ಅವರಿಗೆ ನಾನೇನು ಅನ್ಯಾಯ ಮಾಡಿರುವೆ ?....

ಉತ್ತರ.... ಒಂದು ಪ್ರಶ್ನೆಗೂ ಹೊಳೆಯಲಿಲ್ಲ.

ಮುಂದೆ ಅರ್ಧಗಂಟೆಯಲ್ಲಿ ಎಲ್ಲಾ ಕೆಲಸಗಳೂ ಮುಗಿದವು. ಜಯಚಂದ್ರನ ಕೋಣೆ, ಅಂಗಡಿ ಎಲ್ಲಾ ಸೀಲ್ ಮಾಡಿದರು. ಅದಕ್ಕೂ ಪೂರ್ವದಲ್ಲಿ ಐದು ಜನ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸಹಿ ಪಡೆದರು ಫೋಟೋಗ್ರಾಫರ್ ಹತ್ತಾರು ಫೋಟೋ ತೆಗೆದ. ಬೆರಳು ಅಚ್ಚಿನ ತಜ್ಞರು ಪೌಡರ ಉದುರಿಸಿ ಸಾಕಷ್ಟು ಫೋಟೋ ಮುದ್ರಿಸಿ ಕೊಂಡರು.

ಅನಂತರ ಪೊಲೀಸ್ ಜೀಪಿನಲ್ಲಿ ನನ್ನ ಮೆರವಣಿಗೆ ಹೊರಟಿತು.

ಹತ್ತು ನಿಮಿಷಗಳಲ್ಲಿ ನಾನು ಸರಳುಗಳ ಹಿಂದೆ ಇದ್ದೆ.

ನಿರಪರಾಧಿಯನ್ನು ಪೊಲೀಸರು ಬಂಧಿಸಿ ಬಂದೀಖಾನೆಗೆ ನೂಕಿ ಅವನಿಗೆ ಚಿತ್ರಹಿಂಸೆ ಕೊಟ್ಟಿದ್ದು, ಹಿಂಸೆ ತಾಳಲಾರದೆ ಅಪರಾಧ ಮಾಡಿರ ದಿದ್ದರೂ ಮಾಡಿದ್ದೇನೆಂದು ಒಪ್ಪಿಕೊಂಡ ಅಮಾಯಕ ಜನರ ಬಗ್ಗೆ ನಾನು ಹಲವಾರು ಕಾದಂಬರಿಗಳನ್ನು ಬರೆದಿದ್ದೆ. ಅವೆಲ್ಲ ಓದುಗರ ಮೆಚ್ಚುಗೆ ಪಡೆದವು ಅಷ್ಟೆ ಅಲ್ಲ, ಎರಡು ಮೂರು ಕಾದಂಬರಿಗಳು ಚಲನಚಿತ್ರಗಳಾಗಿ ಪ್ರದರ್ಶನಗೊಂಡು ಲಕ್ಷಾವದಿ ಜನರಿಂದ ಪ್ರಶಂಸಿಸಲ್ಪಟ್ಟವು..

ಎಂಥ ವಿಚಿತ್ರ....

ಯಾವುದನ್ನು ಕಲ್ಪನೆ ಮಾಡಿಕೊಂಡು ಸತ್ಯದ ತಲೆ ಮೇಲೆ ಹೊಡೆದಂತೆ ಬರೆದಿದ್ದೆನೊ ಅದೇ ಸತ್ಯದ ಮುಂದೆ ನಾನು ನಿಂತಿದ್ದೇನೆ....

ಒಂದು ಮಾತು ಮಾತ್ರ ಸತ್ಯ.

ದೈಹಿಕವಾಗಿ ನನ್ನನ್ನು ಯಾರೂ ಹಿಂಸಿಸಲಿಲ್ಲ. ಮಾನಸಿಕವಾಗಿ ವಿಚಿತ್ರ ರೀತಿಯಲ್ಲಿ ಹಿಂಸಿಸಿದರು. ಅವರ ಹಿಂಸೆಯನ್ನು ನಾನು ಕಲ್ಪನೆ ಮಾಡಲೂ ಸಹ ಸಾಧ್ಯವಿರಲಿಲ್ಲ. ಮೊದಲು ಒಬ್ಬ ಪ್ರಶ್ನಿಸಿದ. ನಿಜ ಹೇಳಲು ಒತ್ತಾಯ ಮಾಡಿದ. ಶಿಕ್ಷೆ ಕಡಿಮೆಯಾಗುವಂತೆ ನೋಡಿ ಕೊಳ್ಳುವ ಹಾಗೆ ಭರವಸೆ ನೀಡಿದ.... ನಾನೆಲ್ಲ ನಿರಾಕರಿಸಿದೆ. ಆಮೇಲೆ ಕೋಣೆಯಲ್ಲಿ ಕೂಡಿಸಿ ಪ್ರಕಾಶಮಾನವಾದ ದೀಪ ಬಿಟ್ಟು ಪ್ರಕಾಶಕಿರಣಗಳಿಂದ ಘಾಸಿ ಗೊಳಿಸಿ ಅಪರಾಧ ಒಪ್ಪಿಕೊಳ್ಳುವಂತೆ ಒತ್ತಾಯಮಾಡಿದರು. ನಾನು ಒಪ್ಪ

ಕೊಳ್ಳಲಿಲ್ಲ.... ಊಟದಲ್ಲಿ.... ಉಪಹಾರದಲ್ಲಿ ಉಪ್ಪು.... ಖಾರ ಪ್ರಮಾಣ ಮೀರಿ ಬೆರೆಸಿ ನಾನು ಬಾಧೆಯಿಂದ ನರಳುತ್ತ ಕಣ್ಣು ಮೂಗುಗಳಿಂದ ನೀರು ಸುರಿಸುತ್ತಿರಲು. "ನೀರು.... ನೀರು" ಎಂದು ಅರಚಿಕೊಂಡಾಗ ನಿಜ ಹೇಳು ನೀರು ಕೊಡುತ್ತೇವೆ.. ಬೀರೂ ಕೊಡುತ್ತೇವೆ.... ಇಲ್ಲದಿದ್ದರೆ ಹಾಗೇ ಸಾಯಲು ಬಿಡುತ್ತೇವೆ ಎಂದು ಹೆದರಿಸಿ ಆಯಿತು. ಅದಕ್ಕೂ ನಾನು ಜಗ್ಗಲಿಲ್ಲ.... ಸ್ನಾನದ ನೀರಿನಲ್ಲಿ ಏನೋ ಸೇರಿಸಿದ್ದರಿಂದ ಮೈಮೇಲೆ ನಾಲ್ಕು ಚೊಂಬು ನೀರು ಹಾಕಿಕೊಳ್ಳುತ್ತಲೇ ಮೈಗೆಲ್ಲ ಬೆಂಕಿ ಇಟ್ಟಂತಾಗಿ ನಾನು ವಿಲಿವಿಲಿ ಒದ್ದಾಡಿದಾಗ.... ಹೇಳು.... ನಡೆದದ್ದೇನು ?.... ಏಕೆ ಕೊಲೆ ಮಾಡಿದೆ ?.... ನಿನಗೆ ಸಹಾಯಕರಾರು ?.... ಕೊಲೆಗೆ ಕಾರಣವೇನು? ಎಂದು ಮುಂತಾಗಿ ಪ್ರಶ್ನಿಸಿದರು.

ಎಲ್ಲವೂ ವ್ಯರ್ಥವಾಯಿತು.

ನನಗೆ ಗೊತ್ತಿದ್ದರೆ ತಾನೇ ನಾನು ಹೇಳುವದು ?

ಅವರು ಎಷ್ಟು ಬಗೆಯಿಂದ ನನ್ನನ್ನು ಹಿಂಸಿಸುತ್ತಾರೋ ಅಷ್ಟು ಬಗೆಯಿಂದ ನಾನು ಮಾನಸಿಕವಾಗಿ ಗಟ್ಟಿಯಾದೆ. ನನ್ನ ಕಾದಂಬರಿಯ ಪಾತ್ರವಾಗದಿರಲು ನಿರ್ಧರಿಸಿದೆ.

ಪರಿಣಾಮವಾಗಿ ಹೆಜ್ಜೆ ಹೆಜ್ಜೆಗೂ ಅವರಿಗೆ ಸೋಲಾಯಿತು.

ಆರನೇದಿನ ನನ್ನನ್ನು ವಿಚಾರಿಸುತ್ತಿದ್ದ ಅಧಿಕಾರಿ ಬದಲಾದ–ಅವನ ಜಾಗೆಗೆ ಬೆಂಗಳೂರಿನಿಂದ ಹೊಸ ಅಧಿಕಾರಿಯನ್ನು ಕಳಿಸಿಕೊಟ್ಟರು. ಆತ ತುಂಬಾ ಅಪಾಯಕಾರಿ.... ಕಟುಕ.... ನಿಷ್ಕರುಣಿ ಮುಂತಾದವು ನನ್ನ ಕಿವಿಗೆ ಬಿದ್ದವು.... ಮತ್ತೆ ನನಗೇನು ಕಾದಿದೆಯೋ ಎಂದು ಭಯಪಟ್ಟೆ.... ಅದರ ಜೊತೆಗೆ ಬಂದದ್ದೆಲ್ಲ ಬರಲಿ ಎಂದು ಗಟ್ಟಿಯಾದೆ.

ನಿರೀಕ್ಷಿಸಿದ ಸಮಯ ಬಂದೇಬಿಟ್ಟಿತು. ಹೊಸ ಪೊಲೀಸ್ ಅಧಿಕಾರಿಯಿಂದ ಬುಲಾವ್. ಮಾನಸಿಕವಾಗಿ ಗಟ್ಟಿಯಾಗಿದ್ದ ನಾನು ಯಾವದೇ ರೀತಿಯ ಭಯಕ್ಕಾಗಲೀ ದುಗುಡಕ್ಕಾಗಲೀ ಬಲಿಯಾಗದೇ ನಿರ್ಲಿಪ್ತನಾಗಿ ಕರೆಯಲು ಬಂದ ಕಾನ್‌ಸ್ಟೇಬಲ್ ಜೊತೆ ನಡೆದೆ. ಮತ್ತೆ ಅದೇ ಕೋಣೆ. ವಿಚಾರಣಾ ಕೋಣೆ ಕಮ್ ಮಂತ್ರಣಾ ವಿಭಾಗ ಅಥವಾ ಆಧುನಿಕ ಯಮಾಗಾರ.

"ಕಥೆ, ಕಾದಂಬರಿ ಬರಿಯುತ್ತಾನಂತೆ.... ಒಂದಿಷ್ಟು ಸಿನೇಮಾಕ್ಕೂ ಸಹ ಕಥೆ ಬರೆದಿದ್ದಾನೆ ಅಂತ ಹೇಳ್ತಾರೆ. ಇದನ್ನೆಲ್ಲ ನೋಡಿದರೆ ಈತ ಪಕ್ಕಾ ಇದ್ದು ಸುಲಭವಾಗಿ ಒಪ್ಪೋ ಜೀವ ಅಲ್ಲ ಅಂತ ಅನಿಸುತ್ತೆ. ಒಂದು ವೇಳೆ ಸೂಟುಕೇಸು ಬಾಯಿಬಿಚ್ಚದಿದ್ದರೆ ಈ ಅಪರಾಧ ಎಂದೂ ಪತ್ತೆಯೇ ಆಗುತ್ತಿರಲಿಲ್ಲ. ಇಷ್ಟು ಫುಲ್‌ಫ್ರೂಫ್ ಪ್ಲಾನ್ ಓರ್ವ ಬರಹಗಾರ ಅಥವಾ ಯಶಸ್ವಿ ಕತೆಗಾರ ಮಾತ್ರ ಮಾಡಲು ಸಾಧ್ಯ."

"ಶಟಪ್.... ಬರಹಗಾರನಿಂದ ಏನೂ ಮಾಡಲು ಸಾಧ್ಯವಿಲ್ಲ. ಆತ ಕೇವಲ ಲೇಖನಿಯಿಂದ ಕಾಗದದಲ್ಲಿ ಅದ್ಭುತವಾಗಿ, ರೋಮಾಂಚನ ಕಾರಿಯಾಗಿ ಇಳಿಸಬಲ್ಲ ತಿಳೀತಾ...."

ನಾನು ಹೊರಗಡೆ ಇರುವಾಗಲೇ ಈ ಎರಡೂ ಮಾತುಗಳು ನನ್ನ ಕಿವಿಗೆ ಬಿದ್ದವು. ಮೊದಲನೆಯುವ ಕಿರಿಯ ಅಧಿಕಾರಿ ಇರಬೇಕು. ಎರಡನೇ ಕಂಠವೇ ಹೊಸದಾಗಿ ಬಂದಿರುವ ಅಧಿಕಾರಿಯದಾಗಿರಬೇಕು. ಪಳಗಿದಾನೆ, ಸಾಕಷ್ಟು ಅನುಭವವಿದೆ. ಬರಹಗಾರರ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದಾನೆ.... ಪರವಾಗಿಲ್ಲ ಪೊಲೀಸ್ ವಿಭಾಗದಲ್ಲಿ ಇಂಥವರೊಬ್ಬರಿದ್ದಾರೆ. ನನ್ನ ಮೊರೆ ಕೇಳುವ ವ್ಯಕ್ತಿ ಯಾರಾದರೂ ಇದ್ದರೆ ಇವನೊಬ್ಬನೇ.... ಇವರು ಮುಂದೆ ಎಲ್ಲವನ್ನೂ ಅಂದರೆ ಅಪ್ಸರೆಯ ವಿಷಯವನ್ನೂ ಹೇಳಬಹುದು ಎಂದು ನಿರ್ಧರಿಸಿದೆ....

ಒಳಗೆ ಬರಲು ಕರೆಬಂತು.

ಬಾಗಿಲು ದೂಡಿ ಕಾಲಿಟ್ಟೆ.

ಎದುರಿಗೇ ಕುಳಿತಿದ್ದ ಹೊಸ ಅಧಿಕಾರಿ.... ಗೌರವರ್ಣ.... ಅಗಲವಾದ ಹಣೆ.... ಉದ್ದ ಮೂಗು.... ಹೊಳೆಯುವ ಕಣ್ಣುಗಳು. ದಪ್ಪನಾದ ಮೀಸೆ.... ದಷ್ಟಪುಷ್ಟ ದೇಹ....

ಗಕ್ ಎಂದು ನಿಂತೆ. ಅವರತ್ತ ಮತ್ತೊಂದು ಬಾರಿ ನೋಡಿದೆ.

ಆಶ್ಚರ್ಯ ಅಧಿಕಾರಿಯೂ ಎದ್ದು ನಿಂತ.

ಅವನ ಮುಖದ ಮೇಲೆ ಗಾಬರಿ.... ಕಣ್ಣಲ್ಲಿ ಅವಿಶ್ವಾಸ.... "ನೀನು.... ನೀನು...."

ನಾನು ಮುಗುಳ್ನಕ್ಕೆ.... ಅವನ ಪರಿಚಯ ಸಿಕ್ಕಿತ್ತು.

ಆತ ನನ್ನ ಬಾಲ್ಯಸ್ನೇಹಿತ ಸುಧೀರ ಜಾಧವ. ನಮ್ಮ ಮನೆ ಪಕ್ಕದಲ್ಲೇ ಬಾಡಿಗೆ ಇದ್ದರು ಅವನ ತಂದೆತಾಯಿ. ಪ್ರಾಥಮಿಕ ಶಿಕ್ಷಣ ನಾವೆಲ್ಲರೂ ಕೂಡೇ ಮುಗಿಸಿದ್ದೆವು. ಮುಂದೆ ಅವರ ತಂದೆಗೆ ವರ್ಗ ವಾಯಿತು. ಬೆಳಗಾವಿ ಸೇರಿದರು. ಮುಂದೆ ಎಂಟೋ ಹತ್ತೊ ವರ್ಷಗಳ ನಂತರ ಎಲ್ಲೋ ಒಂದೆಡೆ ಸೇರಿದ್ದೆವು. ಆತನೂ ಪದವಿ ಪಡೆದಿದ್ದ.... ನಾನೂ ಸಹ. ನೌಕರಿ ಬೇಟೆ ಅವನ ನಿತ್ಯದ ಕಾಯಕವಾಗಿತ್ತು....

ಆನಂತರ ಭೆಟ್ಟಿಯಾದದ್ದು ಇಂದೇ....

ಆತ ಪೊಲೀಸ್ ಅಧಿಕಾರಿ.... ನಾನು ಕೊಲೆ ಅಪವಾದ ಹೊತ್ತ ಅಪರಾಧಿಯಾಗಿ. ಓಡಿಬಂದವನೇ ಬಲವಾಗಿ ಅಪ್ಪಿಕೊಂಡ. ಅವನ ಜೊತೆಗಿದ್ದ ಮೂರು ನಾಲ್ಕು ಜನ ಕಿರಿಯ ಅಧಿಕಾರಿಗಳು ಕಕ್ಕಾವಿಕ್ಕಿ ಯಾದರು....

ಕೆಲಸಮಯದ ನಂತರ ಕಣ್ಣೀರು ಒರೆಸಿಕೊಂಡು ನನ್ನನ್ನು ಕುರ್ಚಿ ಮೇಲೆ ಕೂಡಿಸಿ ತಾನು ತನ್ನ ಸ್ಥಾನದಲ್ಲಿ ಕುಳಿತ.... ಚಹಾ ತರಲು ತಿಳಿಸಿದ. ಚಹ ಕುಡಿದಾದ ಮೇಲೆ ಕೇಳಿದ ಆತ್ಮೀಯತೆಯಿಂದ ಹೇಳಿದ.

"ಹೇಳು.... ನಡೆದದ್ದೇನು ?"

ನಾನು ಸುತ್ತಲಿದ್ದವರನ್ನು ನೋಡಿದೆ. ಆದರರ್ಥ ತಿಳಿದುಕೊಂಡ ಕಿರಿಯ ಅಧಿಕಾರಿಗಳು ಹೊರಡಲು ಉದ್ಯುಕ್ತರಾದರು. ಸುಧೀರ ಅವರನ್ನು ತಡೆದ. "ಇವರೆಲ್ಲ ನನ್ನ ಆತ್ಮೀಯರು.... ನಂಬಿಗಸ್ತರು.... ಯಾವ ಅಶಂಕೆಯೂ ಬೇಡ.... ಒಂದೂ ವಿಷಯ ಬಿಡದೇ ಎಲ್ಲಾ ಹೇಳು."

ನಾನು ಹೇಳಲಾರಂಭಿಸಿದೆ.... ಒಂದೂ ಮುಚ್ಚಿಡಲಿಲ್ಲ.... ಗೋಕರ್ಣ ದಿಂದ ಆರಂಭಿಸಿ, ಈಗಿನವರೆಗೂ ಸುಧೀರನ ಮುಂದೆ ಕೂತಿರುವವರೆಗೂ ಹೇಳಿ ಮುಗಿಸಿದೆ.

"ಅದ್ಭುತ.... ರೋಮಾಂಚಕಾರಿ.... ನಿನ್ನ ಕಾದಂಬರಿ ಮಹಾತ್ಮೆ."

ಆತ ನಕ್ಕು ಪ್ರಶಂಶಿಸಿದ.... ನಾನೂ ನಕ್ಕೆ.

ಮತ್ತೊಂದು ಬಾರಿ ಚಹ ಬಂದಿತು.... ನಂತರ ಚರ್ಚೆ ಆರಂಭ ವಾಯಿತು. ಸುಧೀರ ತನ್ನ ಸಂಗಡಿಗರತ್ತ ತಿರುಗಿ ಕೇಳಿದ.

"ನಿಮ್ಮ ಅಭಿಪ್ರಾಯವೇನು ?"

ಅವರು ಮಿಕಮಿಕ ಮುಖನೋಡಿದರು. ಮಾತನಾಡುವ ಧೈರ್ಯ ವಾಗಲಿಲ್ಲ. "ಒಂದು ಮಾತು ಸ್ಪಷ್ಟಪಡಿಸುತ್ತೇನೆ. ಈತ ನನ್ನ ಬಾಲ್ಯ ಸ್ನೇಹಿತ. ಎಂದೂ ಸುಳ್ಳುಹೇಳಿಲ್ಲ. ಇಂದೂ ಸಹ.... ನನಗೆ ಇವನ ಮೇಲೆ ಸಂಪೂರ್ಣ ವಿಶ್ವಾಸವಿದೆ. ಇವನಿಗಾಗಿ ನಾನು ಏನು ಮಾಡಲೂ ಸಿದ್ಧ...."

ಸುಧೀರ ಸ್ಪಷ್ಟಪಡಿಸಿದಾಗ ನನ್ನ ಕಣ್ಣಾಲಿಗಳು ತುಂಬಿಬಂದವು. ಇದ್ದರೆ ಇರಬೇಕು ಇವನಂಥ ಗೆಳೆಯ ಎಂದುಕೊಂಡೆ. ಸುಧೀರನ ಬಿಚ್ಚು ನುಡಿಯ ನಂತರ ಅವನ ಸಂಗಡಿಗರು ಬಾಯಿ ಬಿಟ್ಟರು.

"ಸರ್.... ಇಲ್ಲಿಯವರೆಗೂ ನಾವು ಅಪರಾಧಿ ಇವರೇ ಎಂದು ತಿಳಿದು ನಿಶ್ಚಿಂತರಾಗಿದ್ದೆವು. ಈಗ ಬೇರೆ ದಿಕ್ಕಿನಿಂದ ಯೋಚಿಸಬೇಕಾಗಿದೆ."

"ಯೋಚನೆ.... ಅದಕ್ಕೂ ಮೊದಲು ಒಂದು ಮಾತು ನೆನಪಿಡಿ. ಸದ್ಯ ಅಪರಾಧೀ ಸ್ಥಾನದಲ್ಲಿರುವ ಈತ ನಿರಪರಾಧಿ. ಇವನನ್ನು ಸಿಕ್ಕಿಸಲ್ಕ ಸುಂದರವಾದ ಬಲೆ ಹೆಣೆದಿದ್ದಾರೆ.... ಅವರು ಯಾರಿರಬಹುದು ಎಂಬುದನ್ನು ಊಹಿಸಿ. ಅವರು ಯಾರು ಎಂಬ ಬಗ್ಗೆ ಸ್ವಲ್ಪಾದರೂ ಸುಳಿವುದೊರೆತರೆ ಅದರ ಜೊತೆಗೇ ಅವರ ಉದ್ದೇಶ, ಅವರ ಸಹಾಯಕರು ಮುಂತಾದವು ಗಳೆಲ್ಲ ತಾನೇ ತಾನಾಗಿ ಹೊಬೀಳುತ್ತವೆ.

"ನನ್ನ ದೃಷ್ಟಿಯಲ್ಲಿ ಅಪ್ಸರೆ ಇರಬೇಕು ಅನಿಸುತ್ತಿದೆ.

"ಸರಿ-ಅವಳ ಉದ್ದೇಶವೇನು ? ತಾನು ಕೊಲೆ ಮಾಡಿ ಪಾರಾಗಿ ಇವ ರನ್ನು ಸಿಕ್ಕಿಸಬೇಕಾದರೆ ಅದಕ್ಕೇನಾದರೂ ಕಾರಣವಿರಬೇಕಲ್ಲ ?"....ಎಲ್ಲೆಡೆ ಮೌನ. "ಜಯಚಂದ್ರ ಏಕಿರಬಾರದು ?-ಆತನ ಕಣ್ಣು ಅಪ್ಸರೆ ಮೇಲೆ.... ಮಧ್ಯೆ ಇರುವವರೇ ತೊಡಕು ದರ್ಶನ್ ಅವರದು. ಅದಕ್ಕಾಗಿ ತನ್ನ ಸ್ನೇಹಿ ತರ ಕೊಲೆ ಮಾಡಿ ಅದು ಅವರ ಮೇಲೆ ಬರುವಂತೆ ಮಾಡಿ ಪಾರಾದ. ಇವರು ಜೈಲು ಸೇರುತ್ತಾರೆ. ಅಪ್ಸರೆಯನ್ನು ಆಗ ಸುಲಭದಿಂದ ವಶಪಡಿಸಿ ಕೊಳ್ಳಬಹುದು...."

ಸಬ್ ಇನ್‌ಸ್ಪೆಕ್ಟರ್ ನುಡಿದಾಗ ಸುಧೀರ ಮೆಚ್ಚುಗೆ ಸೂಚಿಸಿದ.

"ಗುಡ್....ಇದಾಗಿರಲು....ಸಾಧ್ಯ....ಒಂದೇ ಸಂಶಯ....ಕೊಲೆಮಾಡಿ ಶವದ ತುಂಡುಗಳನ್ನು ಸೂಟುಕೇಸಿನಲ್ಲಿ ಅದೂ ಕೆಳಗೆ ಅಂಗಡಿಯಲ್ಲಿ

ಸೂಟಕೇಸನ್ನು ಹೇಗೆ ಇರಿಸಿದ ? ಆತನೊಬ್ಬನೇ ಈ ಕೃತ್ಯ ಮಾಡಿದನೆ ? ಅಥವಾ ಅವನಿಗೆ ಸಹಾಯಕರು ಯಾರಾದರೂ ಇರಬಹುದೆ?"

"ಅಪ್ಸರೆಯೇ ಅವನಿಗೆ ಸಹಾಯ ಮಾಡಿರಬಹುದು. ಹೀಗಾಗಿ ಆಕೆಯು ಸಹಾಯವಾಗಿದ್ದಳೆ"

"ಕರೆಕ್ಟ್.... ಅವಳ ಸಹಾಯವಿಲ್ಲದೇ ಸೂಟುಕೇಸು ಮುಟ್ಟುವ ಹಾಗೆ ಇಲ್ಲ. ಹಾಂ. ಒಂದು ಪ್ರಶ್ನೆ.... ಇದಕ್ಕೆ ಕಾರಣವೇನು? ಉದ್ದೇಶ ವೇನು?" ಮತ್ತೆ ಮುಂತಾದ ಸಮಸ್ಯೆ ಜಟಿಲವಾಗಿತ್ತು.

ಸುಧೀರ ಮೇಲೇಳುತ್ತಾ ಮಾತು ಮುಗಿಸಿದ.

"ಏನೇ ಆಗಲಿ ಇಂದಿನ ಮಾತುಕತೆ ಫಲಪ್ರದವಾಗಿದೆ. ದರ್ಶನ ನಿರಪರಾಧಿ ಎಂದು ಯೋಚಿಸುವ ಜೊತೆಗೆ ನಾವು ಜಯಚಂದ್ರ ಹಾಗೂ ಅಪ್ಸರೆ ಬಗ್ಗೆಯೂ ಯೋಚಿಸಿದ್ದೇವೆ. ನಾಳೆ ಬೆಳಗ್ಗೆ ಮತ್ತೆ ಭೆಟ್ಟಿಯಾಗೋಣ."

ಎಲ್ಲರೂ ಸೆಲ್ಯೂಟ್ ನೀಡಿ ಹೊರಟರು. ಕಾನ್‌ಸ್ಟೇಬಲ್ ನನ್ನನ್ನು ಕರೆದೊಯ್ಯಲು ಬಂದ.

"ಬೇಡ. ದರ್ಶನನನ್ನು ನಾನು ನನ್ನ ಜೊತೆ ಕರೆದೊಯ್ಯುತ್ತೇನೆ."

ನಾನು ಅವಿಶ್ವಾಸದಿಂದ ಅವನೆಡೆ ನೋಡಿದೆ....ಆತ ಮುಗುಳ್ನಕ್ಕ.

ಅರ್ಧ ಗಂಟೆಯಲ್ಲಿ ನಾನು ಮತ್ತೆ ಮನುಷ್ಯನಾಗಿದ್ದೆ. ಎಷ್ಟೋ ದಿನಗಳ ನಂತರ ಸೂರ್ಯನನ್ನು ಕಂಡಿದ್ದೆ.. ಮುಖಕ್ಷೌರ ಮಾಡಿಕೊಂಡು ಒಳ್ಳೆ ಬಟ್ಟೆ ಧರಿಸಿ ಕಾರಿನಲ್ಲಿ ಸುಧೀರನೊಂದಿಗೆ ಮನೆಗೆ ಬಂದೆ. ನನ್ನನ್ನು ನೋಡುತ್ತಲೇ ಅಮ್ಮ ಓಡಿ ಬಂದು ಅಪ್ಪಿಕೊಂಡಳು. ಅಪ್ಪ ಕಣ್ಣೀರು ಮಿಡಿದರು. ಆದೇ ಊರಿನಿಂದ ಬಂದಿದ್ದ ಅತುಲ ತಬ್ಬಿಕೊಂಡು "ಇದೇ ನಾಯಿತಣ್ಣ.... ನಾನು ಊರಿಗೆ ಹೋಗಿದ್ದೆ ನಿನಗೆ ಮುಳುವಾಯಿತು. ಇದೆಲ್ಲಾ ಆದದ್ದು ನನ್ನಿಂದ" ಎಂದು ಹಳಿದುಕೊಂಡ. ಅವನಿಗೆ ಸಮಾಧಾನ ಹೇಳುವದರಲ್ಲಿ ಸಾಕುಸಾಕಾಯಿತು.

ಎಲ್ಲರ ದುಃಖ ಶಮನವಾದ ಮೇಲೆ ನಾನವರಿಗೆ ಸುಧೀರನ ಪರಿಚಯ ಮಾಡಿಕೊಟ್ಟಾಗ ಎಲ್ಲರೂ ಅವನನ್ನು ನೋಡಿ ಸಂತೋಷಪಟ್ಟರು. ತಿಂಡಿ ತಿಂದಾದ ಮೇಲೆ ಸುಧೀರ್ ಹೇಳಿದ,

ನೀವು ಯಾರೂ ಗಾಬರಿ ಆಗಬೇಡಿ. ಈತ ಕೊಲೆಗಾರ ಅಲ್ಲ. ಯಾರೋ ಬುದ್ಧಿವಂತಿಕೆಯಿಂದ ಇವನನ್ನು ಸಿಕ್ಕಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಕೆಲವು ದಿವಸ ದರ್ಶನ ಗುಪ್ತವಾಗಿರಲಿ. ಒಂದು ಸ್ಥಾನದಲ್ಲಿ ನಾನು ಮುಚ್ಚಿ ಇಡುತ್ತೇನೆ. ಹೊರಗಿರುವುದರಿಂದ ಇವರ ಜೀವಕ್ಕೆ ಅಪಾಯ ಇದೆ. ನೀವು ಮಾತ್ರ ಯಾರ ಮುಂದೆಯೂ ತುಟಿ ಬಿಚ್ಚಬೇಡಿ."

ಎಲ್ಲರೂ ಒಪ್ಪಿಕೊಂಡರು. ಇಬ್ಬರೂ ಹೊರಬಂದೆವು.

ಸುಧೀರ ತನ್ನ ಮನೆಗೆ ಕರೆದೊಯ್ದ. ಅವನ್. ಮದುವೆಯಾಗಿದೆ ಒಂದು ಮಗೂ ಸಹ ಇದೆ. ಒಂದು ವರ್ಷದ್ದು... ಮುದ್ದಾದ ಹೆಣ್ಣು ಮಗು. ಹೆಸರು ರಮ್ಯ....ಆತ್ಮೀಯತೆಯಿಂದ ಸ್ವಾಗತಿಸಿದ ಅವನ ಪತ್ನಿ ಮೊದಲು ಚಹಾ ಮಾಡಿ ತಂದಿಟ್ಟು "ನೀವು ಮಾತಾಡ್ತಿರಿ...ನಾನು ಊಟ ರೆಡಿ ಮಾಡ್ತೇನೆ" ಎಂದಳು. ಮಗುವಿನ ಜೊತೆ ಸ್ವಲ್ಪ ಹೊತ್ತು ಕಳೆದೆವು. ಆದು ನಿದ್ರಿಸುತ್ತಲೇ ವಿ.ಸಿ.ಪಿ.ಯಲ್ಲಿ ಇಂಗ್ಲಿಸ್ ಚಿತ್ರ ನೋಡಿದ್ದಾಯಿತು. ಸುಧೀರನ ಹೆಂಡತಿ ಬಂದು ಊಟಕ್ಕೆ ಕರೆದಳು. ಮೂರು ಜನ ನಗುತ್ತ ಕಲೆಯುತ್ತ ಊಟ ಮಾಡಿದೆವು. ನಾನೊಬ್ಬ ಕೊಲೆಗಾರ. ನನ್ನ ತಲೆ ಮೇಲೆ ಮೃತ್ಯುಖಡ್ಗ ನೇತಾಡುತ್ತಿದೆ ಎಂಬುದನ್ನೇ ನಾನು ಮರೆತಿದ್ದೆ.

"ನೀವೇಕೆ ಇನ್ನೂ ಮದುವೆ ಮಾಡಿಕೊಂಡಿಲ್ಲ?" ಒಮ್ಮೆಲೆ ಆಕೆ ಕೇಳಿದಳು.

"ಸರಿಯಾದ ಹುಡುಗಿ ಸಿಕ್ಕಿಲ್ಲ...." ನಾನು ಚುಟುಕಾಗಿ ಉತ್ತರಿಸಿದೆ.

"ಇನ್ನು ಹೆಚ್ಚು ಹುಡುಕಬೇಡಿ. ಬೇಗನೇ ಮದುವೆಯಾಗಿ....ಕಳೆದು ಹೋದ ದಿನಗಳು ಮತ್ತೆ ಕೈಗೆ ಸಿಗೋದಿಲ್ಲ....ಪಶ್ಚಾತ್ತಾಪಪಡಬೇಕಾಗುತ್ತದೆ. ನಾನು ನಿರುತ್ತರನಾದೆ. ವಿಷಯ ನಿಜವಾಗಿತ್ತು. ಹತ್ತಾರು ಜನ ಹುಡುಗಿಯರಲ್ಲಿ ಒಬ್ಬರನ್ನೂ ಪಾಸು ಮಾಡದೇ ಅಪ್ಸರೆಯ ಸಂಗದಲ್ಲಿ ಬಿದ್ದು ಒದ್ದಾಡುತ್ತಿದ್ದೇನೆ.

ಇನ್ನೆಲ್ಲಿ ಮದುವೆ?.... ಇದರಿಂದ ಬದುಕಿ ಬಂದ ಮೇಲೆ ತಾನೇ?

ಸಾಯಂಕಾಲ ಇಬ್ಬರೂ ಪುನಃ ಠಾಣೆಗೆ ಬಂದೆವು. ಸುಧೀರ ಹೇಳಿದ. "ದರ್ಶನ್... ನೀನು ನಿರಪರಾಧಿ ಎಂದು ನನಗೆ ಗೊತ್ತು. ಆದರೂ ಏನೂ ಮಾಡಲಿಕ್ಕಾಗದು. ನಾನು ಒಂದು ಮಾತ್ರ ಮಾಡಬಲ್ಲೆ...."

"ಏನು?"

"ನಿನ್ನನ್ನು ಇಲ್ಲಿಂದ ಓಡಿಸುವದು"

"ಏನೆಂದೆ?" ಗಾಬರಿಯಾಗಿ ಕೇಳಿದೆ.

"ಶಾಂತಚಿತ್ತದಿಂದ ನನ್ನ ಮಾತು ಕೇಳು ನೀನಿಲ್ಲಿಂದ ಓಡಿಹೋಗು. ಎಷ್ಟು ದಿನ ಸಾಧ್ಯವೋ ಅಷ್ಟು ದಿನ ನಾನು ಈ ವಿಷಯ ಮುಚ್ಚಿಡುತ್ತೇನೆ. ನಿನ್ನಿಂದ ಸಾಧ್ಯವಾದರೆ ಅಪ್ಸರೆಯನ್ನೋ–ಜಯಚಂದ್ರನನ್ನೋ ಹುಡುಕು– ಅವರು ಸಿಕ್ಕರೆ ನನ್ನ ಮನೆಗೆ ಫೋನು ಮಾಡು. ಸಿಗದಿದ್ದರೆ ದೂರ ಅತೀ ದೂರ ದೇಶದ ಯಾವದಾದರೂ ಒಂದು ಮೂಲೆಯಲ್ಲಿ ವಾಸಮಾಡು ಮರಳಿ ಬರಬೇಡ"

"ಸುಧೀರ–ಇದೇನಿದು? ನಾನು ಓಡಿಹೋದರೆ ನಿನ್ನ ಗತಿ ಏನು?"

"ಅದರ ಬಗ್ಗೆ ನೀನು ಯೋಚಿಸಬೇಡ. ಬಹಳವಾದರೆ ಸಸ್ಪೆಂಡ್ ಮಾಡ್ತಾರ. ಆಮೇಲೆ ವಿಚಾರಣೆ. ಕೊನೆಯ ಶಿಕ್ಷೆ ಕೆಲಸದಿಂದ ತೆಗೆಯು ತ್ತಾರೆ. ನಿನ್ನ ಪ್ರಾಣಕ್ಕಿಂತ ನನಗೆ ನೌಕರಿ ಹೆಚ್ಚಿನದಲ್ಲ...ನಿರಪರಾಧಿಯಾದ ನಿನ್ನನ್ನೂ ರಕ್ಷಿಸಲು ನಾನು ಪ್ರಯತ್ನಿಸಿ ನ್ಯಾಯದೇವತೆಯ ಮೆಚ್ಚುಗೆಗೆ ಪಾತ್ರನಾಗುತ್ತೇನೆ"

"ಒಲ್ಲೆ....ನನಗಿಷ್ಟವಿಲ್ಲ....ನಿನ್ನನ್ನೂ ನಾನು ಕಷ್ಟದಲ್ಲಿ ಸಿಲುಕಿಸಲಾರೆ"

"ನೀನೊಬ್ಬ ಹುಚ್ಚ....ಇಲ್ಲಿ ಕೇಳು....ನಾನೀಗ ಸಾಕಷ್ಟು ಗಳಿಸಿದ್ದೇನೆ. ನಾನು, ನನ್ನ ಮಕ್ಕಳು ಹಾಯಾಗಿ ಕೂತು ತಿನ್ನುವಷ್ಟು. ನನಗಿನ್ನು ಸಾಕು. ಈಗಲ್ಲದಿದ್ದರೂ ಇನ್ನೊಂದೆರಡು ವರ್ಷಕ್ಕೆ ನಾನು ಈ ನೌಕರಿಗೆ 'ಗುಡ್ ಬೈ' ಹೇಳುವವನಿದ್ದೇನೆ. ತಿಳೀತಾ....ಹೂಂ.... ಇಂದು ರಾತ್ರಿ ನೀನು ಇಲ್ಲಿಂದ ಪಲಾಯನ ಮಾಡಬೇಕು. ಒಂದು ಮಾತ್ರ ನೆನಪಿಡು. ನಿನಗೆ ಪೊಲೀಸ ರಿಂದ ಯಾವ ಭಯವೂ ಇಲ್ಲ....ನಾನೆಲ್ಲ ವ್ಯವಸ್ಥೆ ಮಾಡುತ್ತೇನೆ. ಕುತ್ತಿಗೆಗೆ ಬಂದಾಗ ನೀನು ಅವರಿಗೆ ನನ್ನ ಹೆಸರು ಹೇಳು....ಎಷ್ಟು ಸಾಧ್ಯವೋ ಅಷ್ಟು ಅವರಿಂದ ದೂರವಿರು. ಏನೇ ಬಂದರೂ ನಾನಿದ್ದೇನೆ....ನಿನ್ನ ವಿಷಯ ಎಲ್ಲಾ ನನ್ನ ಸ್ಟಾಫಿಗೆ ಹೇಳಿರುತ್ತೇನೆ."

ಸುಧೀರನ ಮಿತ್ರತ್ವ ಕಂಡು ಮನಸ್ಸು ಮೂಕವಾಯಿತು?

ಯಾರಿದ್ದಾರೆ ಇಂಥ ಬಲಿದಾನ ಮಾಡುವವರು?....

ನನ್ನ ಮೌನವೇ ಅವನಿಗೆ ಉತ್ತರವಾಯಿತು.

"ಶಹಬ್ಬಾಸ್" ಎಂದಾಗ ಆವನ ಕಣ್ಣುಗಳಲ್ಲಿ ನೀರಾಡಿತ್ತು.

"ಏನಿದು ? ಎಷ್ಟು ಬೇಗ ಬಂದ್ಬಿಟ್ರಿ?.... ನಮ್ಮ ಗೋಕರ್ಣ ಅಷ್ಟು ಪ್ರೀತಿನಾ?" ಭಟ್ಟರು ಆತ್ಮೀಯತೆಯಿಂದ ಕೇಳಿದರು. ಪಾಪ! ಅವರಿಗೇನು ಗೊತ್ತು? ಗೋಕರ್ಣ ನನ್ನನ್ನು ಎಲ್ಲಿಂದ ಎಲ್ಲಿಗೆ ಒಯ್ದಿದೆ ಎಂದು. ಹಾಗೆ ಮುಗುಳುನಗೆ ನಕ್ಕೆ....ನನಗೆ ಮೊದಲಿದ್ದ ಕೋಣೆಯ ಬೀಗದ ಕೈ ಕೊಟ್ಟರು. ಬಂದೆ....ಸುನೀಲ ಕಾಫಿ....ಉಪ್ಪಿಟ್ಟು ತಂದಿತ್ತು. ಟಿಫಿನ್ ಮಾಡಿ ಸ್ನಾನ ಮಾಡಿದೆ. ಆಮೇಲೆ ಹೊರಬಂದು ದೇವಸ್ಥಾನಕ್ಕೆ ಹೋಗಿ ದರ್ಶನ ಪಡೆದೆ. ಊರೆಲ್ಲಾ ಸುತ್ತಾಡಿದೆ. ಕೆಲವೊಂದು ಸಾಮಾನು ಕೊಂಡೆ.

ಒಂದು ವಿಷಯ ಸ್ಪಷ್ಟವಾಗಿತ್ತು....

ಎಲ್ಲೂ ಅಪ್ಸರೆಯಾಗಲಿ.... ಅವಳ ಹಿಂದಿದ್ದ ಗೂಂಡಾಗಳಾಗಲೀ ಕಾಣಲಿಲ್ಲ. ಅವರ ಹೆಜ್ಜೆ ಗುರುತೂ ಸಹ ಗೋಕರ್ಣದಲ್ಲಿರಲಿಲ್ಲ. ಕೋಣೆಗೆ ಬಂದು ಹಾಸಿಗೆ ಮೇಲೆ ಉರುಳಿದೆ. ಮಧ್ಯಾಹ್ನ ಊಟ ತಂದವಳು ಸವಿತಾ. ಆಕೆ ಬಂದಾಗ ಬೇಕೆಂತಲೇ ನಿದ್ದೆ ಬಂದಂತೆ ಸೋಗು ಹಾಕಿದೆ. ಊಟದ ತಟ್ಟೆ ಟಿಪಾಯ್ ಮೇಲಿಟ್ಟ ಆಕೆ ನನ್ನ ಕೋಣೆಯುಲ್ಲಿದ್ದ ವಸ್ತುಗಳನ್ನು ಸಂಭ್ರಮ ಆಚ್ಚರಿಯಿಂದ ನೋಡತೊಡಗಿದಳು.

ಬಗೆಬಗೆಯ ಆಟಿಕೆಗಳು .... ರಿಬ್ಬನ್ನು .... ಬಳೆ .... ದೊಡ್ಡದೊಡ್ಡ ಬೊಂಬೆಗಳು.... ನೃತ್ಯಮಾಡುವ ಹುಡುಗಿ, ಲಾಗ ಹಾಕುವ ಮಂಗ, ಡ್ರಂ ಬಾರಿಸುವ ಕರಡಿ.... ಎಲ್ಲಾ ನೋಡಿ ಆಕೆ ಮರುಳಾಗಿ ನಿಂತಾಗ ನಾನು ಎದ್ದು ಕುಳಿತೆ.

"ಅರೆ ಸವಿತಾ, ಯಾವಾಗ ಬಂದೆ...." ಆಚ್ಚರಿ ವ್ಯಕ್ತಪಡಿಸಿ ಕೇಳಿದೆ.

"ಇದೀಗ....ಊಟ ತಂದಿದ್ದೇನೆ"

"ಸರಿ" ಎಂದು ಹೇಳಿ ಮೇಲೆದ್ದು ಮುಖ ತೊಳೆದುಬಂದೆ. ಊಟ

ಮಾಡತೊಡಗಿದೆ. ತುಸು ಹೊತ್ತು ನಿಂತ ಆಕೆ ಹೊರಳಿ ಹೊರಳಿ ಆಟಿಕೆಗಳತ್ತ ನೋಡುತ್ತ ಹೋದಳು.

ನಾನು ಮನದಲ್ಲೇ ನಕ್ಕೆ

ನನ್ನ ಟ್ರಿಕ್ ಸಫಲ ಎನಿಸಿತ್ತು. ನಾನವಳ ಭಾವನೆಗಳನ್ನು ಕೆಣಕಿದ್ದೆ.

ಅರ್ಧಗಂಟೆ ಕಳೆದಿರಲಿಲ್ಲ ಮತ್ತೆ ಸವಿತಾ ಬಂದಳು. ತಟ್ಟೆ ಒಯ್ಯುವ ನೆಪದಲ್ಲಿ. ಅವಳು ಬಂದೇ ಬರುತ್ತಾಳೆಂದು ನನಗೆ ಗೊತ್ತೇ ಇತ್ತು. ಅವಳ ನಿರೀಕ್ಷೆಯಲ್ಲಿದ್ದ ನಾನು ಹಾಸಿಗೆ ಮೇಲೆ ಕುಳಿತು ಬೊಂಬೆಯೊಂದಿಗೆ ಆಡುತ್ತಿದ್ದೆ. ಅವಳು ಬಂದಾಗ ನನ್ನೆದುರು ಹತ್ತಾರು ಆಟಿಕೆಗಳು....ಎಲ್ಲಾ ನೋಡುತ್ತ ಕುಳಿತ ಆಕೆ ಕೇಳಿದಳು.

"ಮಾಮಾ ಇದ್ಯನ್ನೆಲ್ಲ ಏಕೆ ತಂದಿರಿ ?"

"ನನ್ನ ತಂಗಿಗೊಂದು ಪುಟ್ಟ ಮಗುವಿದೆ. ಅದಕ್ಕೆ ಕೊಡಲು."

ಆಕೆಗೆ ನಿರಾಶೆ ಆಯಿತು. ಸಪ್ಪೆ ಮುಖ ಮಾಡಿದಳು.

"ಅಷ್ಟೂ ಕೊಡಬೇಕಾ ?"

"ಹೌದಮ್ಮಾ. ಇವಷ್ಟೇ ಸಾಲದು. ಅವಳು ಮಹಾ ತುಂಟಿ."

ಮನದಲ್ಲೇ ನನ್ನ ಕಲ್ಪನೆಯ ಮಗುವನ್ನು ಶಪಿಸಿದಳು.

"ಮಾಮಾ ನನಗೊಂದು ಬೊಂಬೆ ಕೊಡಿ ಸಾಕು."

"ಆಗೋದಿಲ್ಲಮ್ಮ" ನಾನು ನಿದಾರ್ಕ್ಷಿಣ್ಯವಾಗಿ ಹೇಳಿದಾಗ ಆಕೆ ಎದ್ದು ಹೊರಗೆ ಹೋದಳು.

ಅವಳು ಹೋಗುತ್ತಲೇ ನಾನು ಮನದಲ್ಲೇ ನಕ್ಕೆ. ಈ ಬಾರಿ ನಾನವಳಲ್ಲಿ ಆಶೆ ಹುಟ್ಟಿಸಿ ಅದನ್ನು ಅಲ್ಲೇ ಚಿಗುಟಿ ಹಾಕಿದ್ದೆ. ಆಕೆ ಮನದಲ್ಲೇ ನೊಂದುಕೊಂಡಿದ್ದಳು · ಅವಳಿಗೆ ಯಾವುದೇ ರೀತಿ ಆಟಿಗೆ ಅಥವಾ ಬೊಂಬೆ ಪಡೆಯಲೇ ಬೇಕಾಗಿತ್ತು. ಹೀಗಾಗಿ ಆಕೆ ಪುನಃ ನನ್ನಲ್ಲಿಗೆ ಬರಲೇ ಬೇಕಾಗಿತ್ತು. ಈ ವಾದ ನನ್ನದಲ್ಲ... ಮನೋವಿಜ್ಞಾನಿಗಳದು.

ಸಂಜೆ ನಾನು ರೂಮಿಗೆ ಬೀಗ ಹಾಕಿಕೊಂಡು ಹೊರಗೆ ಹೋದೆ ಬೇಗನೇ ಮರಳಿ ಬರಲಿಲ್ಲ. ತುಂಬಾ ತಡಮಾಡಿ ಅಂದ್ರೆ ರಾತ್ರಿ ಹತ್ತು ಗಂಟೆಗೆ ಕೋಣೆಗೆ ಬಂದೆ. ಕೋಣೆ ಬಾಗಿಲಿಗೇ ಸವಿತಾ ಕುಳಿತಿದ್ದಳು. ನನಗೆ ಕಡುಕೆನಿಸಿತು. ಮಗು ರಾತ್ರಿ ಸಮಯದಲ್ಲಿ ಒಂಟಿಯಾಗಿ ಕುಳಿತಿ

ದ್ದನ್ನು ಕಂಡು....ಮರುಕ್ಷಣ ಮನಸ್ಸು ಕಲ್ಲು ಮಾಡಿಕೊಂಡೆ, ನಾನು ಬದುಕಬೇಕಾಗಿತ್ತಲ್ಲ ಅದಕ್ಕೆ.

"ಮಾಮಾ ಎಷ್ಟೊತ್ತು....ಅಡಿಗೆ ಎಲ್ಲಾ ಆರಿಹೋಗಿದೆ" ಆಕ ದೂರಿತ್ತಾಳು.

"ಆರಲಿ ಬಿಡು ನನಗೆ ಹಸಿವೆ ಇಲ್ಲ....ನೀನು ಮಲಗು"

"ಹಾಗೆಂದರೆ ಹೇಗೆ ? ಬರಿಹೊಟ್ಟೆಯಿಂದ ಮಲಗಬಾರದು. ಇರು ತಟ್ಟೆ ತರುತ್ತೇನೆ" ಬೇಡ ಬೇಡವೆಂದರೂ ಓಡಿಹೋದ ಆಕೆ ಊಟದ ತಟ್ಟೆಯೊಡನೆ ಬಂದಾಗ ನಾನು ಕೈಕಾಲು ತೊಳೆದು ಬಟ್ಟೆ ಬದಲಾಯಿಸಿದ್ದೆ. ಒಂದೆರಡು ಬೊಂಬೆ....ಆಟಿಕೆ ಅವಳ ಕೈಗೆ ಕೊಟ್ಟು ನನ್ನ ಊಟ ಆಗುವವರೆಗೂ ಆಡ್ತಿರು ಎಂದೆ. ಅವಳಿಗೆ ತುಂಬಾ ಖುಷಿ ಆಯ್ತು.

ನಾನವಳನ್ನೇ ನೋಡ್ತಾ ಊಟ ಮಾಡಿದೆ. ನಾನು ಬೇಗನೇ ಊಟ ಮುಗಿಸಿದ್ದು ಅವಳಿಗೆ ನಿರಾಶೆ ಆಯ್ತು. ಸವಿತಾ ಅಂಗಲಾಚಿದಳು.

"ಮಾಮಾ....ಎರಡು ಬೊಂಬೆ ನಾನು ಒಯ್ತೀನೆ. ಬೆಳಿಗ್ಗೆ ಮತ್ತೆ ವಾಪಸ್ ತರುತ್ತೇನೆ ?"

"ಬೇಡಮ್ಮಾ ಬೇಡ. ಬೊಂಬೆ ಕೆಟ್ಟು ಹೋಗುತ್ತೆ."

ಹುಣ್ಣಿನ ಮೇಲೆ ಬರೆ ಎಳೆದಷ್ಟು ನೋವಾಯಿತವಳಿಗೆ. ಮರುಕ್ಷಣ ಹೇಳಿದೆ.

"ಹಾಂ. ಒಂದು ಷರತ್ತಿನ ಮೇಲೆ ನಾನು ನಿನಗೆ ಬೊಂಬೆ ಕೊಡಬಲ್ಲೆ."

"ಬೇಗ ಹೇಳು...." ಅವಳ ಕಣ್ಣುಗಳಲ್ಲಿ ಹತ್ತಾರು ದೀಪಗಳು ಮಿನುಗಿದವು.

"ನೀನು ಅಪ್ಸರೆಯ ನಿಜವಾದ ಹೆಸರು ವಿಳಾಸ ಹೇಳಿದರೆ ನಿನಗೆ ಬೇಕಾದ ಬೊಂಬೆ ನೀನು ಒಯ್ಯಬಹುದು...." ತಾನೊಂದು ಕ್ಷಣ ಅವಳನ್ನು ನಿರೀಕ್ಷಿಸಿದೆ. ಅವಳಲ್ಲಿ ತಾಕಲಾಟ ನಡೆದಿತ್ತು. ನಾನು ಆಶೆ ಹೆಚ್ಚಿಸಿದೆ.

"ಹಾಂ, ನೀನು ಸರಿಯಾಗಿ ಹೇಳಿದರೆ ಈ ಆಟಿಕೆಗಳು ನಿನಗೆ...." ದಾಳ ಎಸೆದೆ.

"ಏನು ? ಎಲ್ಲಾ ನನಗೇನಾ ?....ಮತ್ತೆ....ಮತ್ತೆ....ನಿಮ್ಮ ತಂಗಿ ಮಗುವಿಗೆ ?"

"ಬೇರೆ ಕೊಂಡರಾಯ್ತು....ಒಪ್ಪಿಗೇನಾ ?...."

"ಹೂಂ...." ಗೋಣು ಆಡಿಸಿದಳು.

"ಗುಡ್, ಹಾಗಾದರೆ ಹೇಳು. ಅಪ್ಸರೆ ಯಾರು ? ಅವಳ ಹೆಸರೇನು ?"

"ನಂಗೆ ಗೊತ್ತಿಲ್ಲ...." ಹಿಮಾಲಯದಿಂದ ಕೆಳಗೆ ಪ್ರಪಾತಕ್ಕೆ ತಳ್ಳಿದಂತಾಯ್ತು....ಸಿಟ್ಟಿನಿಂದ ನಾನು ನನ್ನ ಎಲ್ಲಾ ಬೊಂಬೆ ಕೂಡಿಸಿ ಬ್ಯಾಗಿಗೆ ತುರುಕಿದೆ. ಅವಳ ಕೈಯಲ್ಲಿಯ ಆಟಿಕೆಯನ್ನು ಕಿತ್ತುಕೊಂಡು "ಹೋಗಿನ್ನು....ನನಗೇನೂ ಬೇಡ" ಎಂದೆ.

"ಮಾಮಾ....ನಿಜವಾಗಿ ನನಗೆ ಗೊತ್ತಿಲ್ಲ. ಅಮ್ಮನ ಹತ್ತಿರ ಅವರ ಫೋಟೋ ಇದೆ. ಅಮ್ಮಂಗೆ ಎಲ್ಲಾ ಗೊತ್ತಿದೆ. ನಾನು ಕೇಳಿಕೊಂಡು ಬಂದು ನಾಳೆ ಹೇಳ್ತೀನಿ, ಬೇಕಾದ್ರೆ ಫೋಟೋನು ತರ್ತೀನಿ." ಕಮರಿದ ಆಸೆ ಚಿಗುರಿತು.

"ಹಾಗಾದರೆ ಎಲ್ಲಾ ಬೊಂಬೆ ನಿನಗೆ. ಹೆಸರು—ಅಡ್ರೆಸ್ ಎಲಾ. ಬೇಕು. ಫೋಟೋನೂ."

"ಹೂಂ. ಒಂದಲ್ಲ, ಭಾಳ ಫೋಟೋ ಆವೆ. ಎಲ್ಲಾ ತರುತ್ತೇನೆ."

"ಗುಡ್. ಹಾಗೇ ಮಾಡು "

"ಈಗ ಬೊಂಬೆ ಒಯ್ಯಲಾ"

"ಊಹೂಂ....ನಾನು ಹೇಳಿದ್ದು ಎಲ್ಲಾ ಆದ್ಮೇಲೆ....ಎಲ್ಲಾ ಆಟಿಗೆ ನಿಂದೇ...."

ನನಗೆ ಗೊತ್ತು ಖಂಡಿತಾ ರಾತ್ರಿ ಎಲ್ಲಾ ಸವಿತಾ ನಿದ್ದೆ ಮಾಡಲಾರಳೆಂದು. ನಿದ್ದೆ ಹೋದರೂ ಕನಸಲ್ಲಿ ಈ ಎಲ್ಲಾ ಬೊಂಬೆಗಳು ಕುಣಿಯುತ್ತಿರುತ್ತವೆ.

ಮುಂಜಾನೆ ಬೇಗ ಎದ್ದು ಕೋಟಿ ತೀರ್ಥಕ್ಕೆ ಹೋಗಿ ಸ್ನಾನ ಮಾಡಿ ಈಶ್ವರ ದರ್ಶನ ಮಾಡಿಕೊಂಡೆ. ಅದೇ ಸೂರ್ಯ ಉದಯಿಸುತ್ತಿದ್ದ ಸೂರ್ಯೋದಯವು ಕಂಡು ಉದಯಿಸುವ ಸೂರ್ಯನಿಗೆ ಕೈಮುಗಿದು ಬೇಡಿ

ಕೊಂಡೆ, "ಯಾವ ರೀತಿ ನೀನು ಕತ್ತಲೆ ಸೀಳಿ ಬೆಳಕಿಗೆ ದಾರಿ ಮಾಡುತ್ತಿಯೋ ಹಾಗೇ ನನ್ನ ಬಾಳಿನಲ್ಲಿ ಕವಿದಿರುವ ಕತ್ತಲೆ ಸೀಳಿ ಬೆಳಕು ಚೆಲ್ಲುವ ಶಕ್ತಿ ಕೊಡು" ಎಂದು.

ನನ್ನ ಬರುವನ್ನು ಸವಿತಾ ಕಾತರತೆಯಿಂದ ಕಾಯುತ್ತಿದ್ದಳು. ಸ್ಕೂಲ್ ಬ್ಯಾಗಿನಲ್ಲಿ ಮುಚ್ಚಿಕೊಂಡು ತಂದ 2-3 ಆಲ್ಬಂ ನನ್ನುಂದೆ ಇಟ್ಟು ಹೇಳಿದಳು.

"ಅವಳ ಹೆಸರು ಅಪ್ಸರೆಯಲ್ಲ....ಮಂದಾಕಿನಿ....ನಮ್ಮ ಅವ್ವನ ಗೆಳತಿ ತಂಗಿ ಆಕೆ....ಅವ್ರು ವಿಜಾಪುರದವರು....ಇದ್ಕೂ ಹೆಚ್ಚಿಗೆ ನನಗೆ ಗೊತ್ತಿಲ್ಲ...."

ಇದಕ್ಕೂ ಹೆಚ್ಚಿಗೆ ಕಾಡಿಸುವುದು ಸರಿಯಲ್ಲವೆನಿಸಿತು. ಪಾಪ! ಎಂದುಕೊಂಡು ಎಲ್ಲಾ ಆಟಿಗೆ ಬೊಂಬೆ ಪೆಟ್ಟಿಗೆಯಲ್ಲಿ ತುಂಬಿ ಅವಳ ಕೈಲಿತ್ತಾಗ ನನ್ನ ಕೆನ್ನೆಗೆ ಮುತ್ತಿಟ್ಟು "ಥ್ಯಾಂಕ್ಯು ಮಾಮಾ" ಎಂದು ಹೇಳಿ ಅವಳು ಮೊಲದ ಮರಿಯಂತೆ ಓಡಿದಾಗ ನಾನು ಪುಲಕಿತನಾಗಿದ್ದೆ.

ಒಂದೊಂದಾಗಿ ಮೂರೂ ಆಲ್ಬಂ ತಿರುವಿ ಹಾಕಿದೆ....ಅಪ್ಸರೆ ಉರ್ಫ್ ಮಂದಾಕಿನಿಯ ಒಟ್ಟು ಇಪ್ಪತ್ತೊಂಬತ್ತು ಫೋಟೋಗಳಿದ್ದವು. ಹೆಚ್ಚು ಮದುವೆ ಕಾಲದವು. ಎಂಟು, ಹತ್ತು ಬೇರೆ ಬೇರೆ....ಸಂಬಂಧಿಕರು—ಆಪ್ತರು—ಗೆಳತಿಯರೊಂದಿಗೆ. ಆ ಎಲ್ಲಾ ಫೋಟೋ ತೆಗೆದು ನನ್ನ ಬ್ಯಾಗಿಗೇರಿಸಿದೆ.. ಇನ್ನು ಮಂದಾಕಿನಿಯನ್ನು ಹುಡುಕಬೇಕಿತ್ತು. ಅವಳನ್ನು ಹುಡುಕಬೇಕೆಂದರೆ ಸವಿತಾಳ ಅವ್ವನನ್ನು ಕೆಣಕಬೇಕು. ಅವರ ಊರು, ತಂದೆ, ತಾಯಿ ಎಲ್ಲಾ ವಿಚಾರಿಸಿದರೆ ಮಂದಾಕಿನಿ ವಿಷಯ ತಿಳಿಯುತ್ತದೆ.

ಅದಕ್ಕಾಗಿ ನಾನು ಸಿದ್ಧನಾದೆ.

ಭಟ್ಟರನ್ನು ಕಾಣಲು ಬಂದೆ ಇಂದು ನಾನು ಹೋಗುತ್ತೇನೆ ಎಂದೆ. ಅವಲಕ್ಕಿ ಚಹ ಬಂದಿತು. ಸೇವಿಸಿದೆ. ಮಾತಾಡುತ್ತ ಸವಿತಾಳ ತಾಯ್ಯಿ ಬಗ್ಗೆ ವಿಚಾರಿಸಿದೆ. ಅವಳ ಊರು, ತಂದೆ, ತಾಯಿ ಬಗ್ಗೆ ಕೇಳಿದೆ.ಊರ ನೋಡುವ ಆಶೆ ಎಂದಾಗ "ಅವಶ್ಯ ಹೋಗಿ ಬರ್ರಿ....ನಮ್ಮ ಬೀಗ್ರು ಗೋವಿಂದರಾಯರು....ಬಳ್ಳಾರಿ ಊರಿಗೇ ದೊಡ್ಡ ಶ್ರೀಮಂತರು....

ಅರಮನೆಯಂಥ ಮನೆ ಇದೆ....ಹುಬ್ಬಳ್ಳಿಯಿಂದ ನೇರವಾಗಿ ಬಸ್ ಇವೆ. ಐದಾರು ಗಂಟೆ ದಾರಿ" ಭಟ್ಟರು ಎಂದರು ತಟಕ್ಕನೆ....

ಸರಿ ಎಂದು ತಲೆ ಹಾಕಿ ಮೇಲೆದ್ದೆ. ಸವಿತಾ ಬಂದು "ಅಜ್ಜ ಅಜ್ಜಿಗೆ ನನ್ನ ನಮಸ್ಕಾರ ಹೇಳು....ಹಾಗೇ ಮಂದಾಕಿನೀ ಆಂಟಿಗೂ" ಎಂದಳು ತುಂಟತನದಿಂದ....ಮಹಾ ಘಾಟಿ.

"ಯಾವ ಮಂದಾಕಿನಿ ?" ಎಂದೆ ಬೇಕೆಂತಲೇ. ಭಟ್ಟರು ಉತ್ತರಿಸಿದರು,

"ಮಂದಾಕಿನೀನಾ....ಅವಳದೇನು ಕೇಳ್ತೀರಿ .... ಅದೊಂದು ದೊಡ್ಡ ಕತೆ "ಉಸುರ್ಗರೆದರು.

ಅದೆಲ್ಲಾ ಸರಿ. ಆದರೆ ಯಾರವಳು ಮಂದಾಕಿನಿ ಅಂದ್ರಿ...."

"ನನ್ನ ಸೊಸೆಗೆ ದೂರದ ಸಂಬಂಧಿ....ಅಲ್ಲೇ ಇರತಾರೆ. ಬಳ್ಳಾರಿಯಿಂದ ಎಂಟು, ಹತ್ತು ಕಿಲೋಮೀಟರ್ ದೂರದಲ್ಲಿ. ಸುಬ್ಬರಾಯರ ಮಗಳಾಕೆ.... ಹೋಗಿ ಬಿಡ್ಲಿ. ಅವರಿವರ ವಿಷಯ ಯಾಕೆ?"

ಅನಾಯಾಸವಾಗಿ ನನಗೆಲ್ಲ ವಿಷಯ ತಿಳಿದಿತ್ತು. ಮುದುಡಿದ ಮನಸ್ಸು ಮುದಗೊಂಡಿತು ನೇರವಾಗಿ ಬಸ್‌ಸ್ಟ್ಯಾಂಡಿಗೆ ಬಂದೆ. ನನಗಾಗಿಯೇ ಎಂಬತೆ ಹುಬ್ಬಳ್ಳಿ ಬಸ್ಸು ಸಿದ್ಧವಾಗಿ ನಿಂತಿತ್ತು. ಕಂಡೆಕ್ಟರ್ ಬಾಗಿಲಿಗೇ ಎದುರಾದ. ಟಿಕೆಟ್ ಪಡೆದು ಸೀಟಿನಲ್ಲಿ ಕುಳಿತೆ. ಎರಡು ಮೂರು ನಿಮಿಷಗಳು ಕಳೆದಿರಲು ಸಾಕು. ಡ್ರೈವರ್ ಬರುತ್ತಿದ್ದಂತೆ ಅವರ ಹಿಂದೆಯೇ ಕಂಡಕ್ಟರ್ ಬಂದ. ಬಾಗಿಲು ಮುಚ್ಚಿ ಕೀರಲು ಕಂಠದಲ್ಲಿ "ರೈಽಽಽಽಟ್" ಎಂದು ಕಿರುಚಿದ. ಬಸ್ಸು ತಕ್ಷಣ ಹೊರಟಿತು. ಲೆಕ್ಕ ಬರೆಯುವುದಲ್ಲಿ ಮಗ್ನನಾಗಿದ್ದ ಕಂಡಕ್ಟರ್ ಎದ್ದು ತೂರಾಡುತ್ತ ನನ್ನ ಬಳಿ ಬಂದ. ಏಕೆಂಬುದು ತಿಳಿಯದೆ ಅವನತ್ತ ನೋಡಿದೆ. ಜೇಬಿಗೆ ಕೈ ಹಾಕಿ ಚೀಟಿಯೊಂದನ್ನು ನನ್ನೆಡೆ ಚಾಚಿ ಹೇಳಿದ.

"ಕ್ಷಮಿಸಿ ಮರೆತಿದ್ದೆ"

"ಏನು ?"

"ಸ್ಟ್ಯಾಂಡಿನಲ್ಲೇ ಒಬ್ಬ ಹುಡುಗಿ ನಿಮಗೆ ಕೊಡುವಂತೆ ಈ ಚೀಟಿ ಕೊಟ್ಟಿದ್ದಳು." ನನ್ನೆಡೆ ನೋಡುತ್ತ ಮುಸಿಮುಸಿನಕ್ಕ ಆತ. ಚೀಟಿ ಇಸಿದುಕೊಂಡೆ. ಆತ ತನ್ನ ಸೀಟಿನತ್ತ ನಡೆದ ಮದಿರೆ ಸೇವಿಸಿದವರಂತೆ ಜೋಲಿಹೊಡೆಯುತ್ತ. ಚೀಟಿ ಬಿಡಿಸಿದೆ ಮೈ ಜುಂ ಎಂದಿತು. ಮರುಕ್ಷಣ ನಾನು ತಪ್ಪನೆ ಬೆವೆತು ಹೋದೆ.... ಚೀಟಿ ಬಂದದ್ದು ಅಪ್ಸರೆಯಿಂದ ಒಂದೇ ಒಂದು ಮಾತು ಅದರಲ್ಲಿತ್ತು.

"ದರ್ಶನ್, ಇಂದು ರಾತ್ರಿ ಹನ್ನೆರಡಕ್ಕೆ ನಾನು ನಿಮ್ಮ ಮನೆಯ ಬಳಿ ಕಾಯುತ್ತಿರುತ್ತೇನೆ."

ಹಾಗಾದರೆ ಅಪ್ಸರೆ ನನ್ನ ಹಿಂಬಾಲಿಸಿಕೊಂಡು ಬಂದಿದ್ದಾಳೆ ಅಂದಾಯಿತು. ಕಂಡಕ್ಟರ್ ಮೇಲೆ ಬೆಂಕಿಯಷ್ಟು ಕೋಪ ಬಂತು. ಅಲ್ಲೇ ಹೇಳಿದ್ದರೆ ಅವಳನ್ನು ಕಂಡು ಮಾತನಾಡಬಹುದಿತ್ತಲ್ಲ ಎಂದು. ಮರ ಗಳಿಗೆಯೇ ಆಕೆಗೆ ನನ್ನ ಭೆಟ್ಟಿಯಾಗುವುದು ಬೇಕಾಗಿರಲಿಲ್ಲ ಅದಕ್ಕೆ ಚೀಟಿ ಕೊಟ್ಟಿದ್ದಾಳೆ ಎನಿಸಿ ತೆಪ್ಪಗಾದೆ....

ಹುಬ್ಬಳ್ಳಿ ಬರುವವರೆಗೂ ಒಂದೇ ಯೋಚನೆ. ಏನು ಮಾಡುವುದು ? ಈಗಾಗಲೇ ಅಪ್ಸರೆಯಿಂದಾಗಿ ಸಾಕಷ್ಟು ಅನುಭವಸಿದ್ದೇನೆ. ಸಾವಿನಂಚಿಗೆ ಬಂದ್ದಿದ್ದೇನೆ. ಹೀಗಿರುವಾಗ ಮತ್ತೆ ಅವಳನ್ನು ಭೆಟ್ಟಿಯಾಗುವುದೆ ? ಅಲ್ಲಿ ಮತ್ತಾವ ಬಲೆ ನನಗಾಗಿ ಆಕೆ ಹರಡಿರುತ್ತಾಳೋ ಅವಳನ್ನೆಷು ನಂಬುವುದು ? .. ಮನೆಯತ್ತ ಸುಳಿಯುವುದೆಂದರೆ ಮೃತ್ಯುವಿಗೆ ಆಮಂತ್ರಣ ಕೊಟ್ಟಂತೆ .. ಸುಧೀರಗೆ ತಿಳಿದರೆ ಏನೆಂದುಕೊಂಡಾನು ?

ನೂರೆಂಟು ಯೋಚನೆಗಳ ಮಧ್ಯೆ ಕೊನೆಗೊಂದು ನಿರ್ಧಾರಕ್ಕೆ ಬಂದೆ. ಹೇಗಿದ್ದರೂ ನಾನು ನಾಲ್ಕು ದಿನಗಳ ಅತಿಥಿ.. ಇಂದಿಲ್ಲ ನಾಳೆ ಪೋಲೀಸರ ಅತಿಥಿಯಾಗಲೇಬೇಕು. ಮೊದಲು ಕೊಲೆ ಅಪಾದನೆ ನನ್ನ ಮೇಲಿತ್ತು ಈಗ ಜೈಲಿನಿಂದ ಓಡಿಹೋದ ಅಪವಾದ ಬೇರೆ. ಇದರರ್ಥ ನಾನು ಕೊಲೆ ಒಪ್ಪಿಕೊಂಡಂತೆ. ಹೀಗಿರುವಾಗ ಏನಾದರೂ ನನಗೇನು ? ಎಲ್ಲಾ ಒಂದ್ಸಲ ತಾನೇ ? ನಾಲ್ಕು ದಿನಗಳನಂತರ ಆಗುವುದು ಇಂದೇ ಆಗುತ್ತದ ಅಷ್ಟೇ.

ಹೀಗಾಗಿ ನಾನು ಹುಬ್ಬಳ್ಳಿಯಿಂದ ಬಳ್ಳಾರಿಗೆ ಹೋಗುವುದರ ಬದಲು ನಮ್ಮೂರಿಗೆ ಹೊರಡಲು ಮಾನಸಿಕವಾಗಿ ಸಿದ್ಧನಾದೆ....ಹುಬ್ಬಳ್ಳಿಯಲ್ಲಿಳಿದು.

ಗ್ರಂಥ ಸ್ವಾಮ್ಯ ವಿಭಾಗ
ರಾಜ್ಯ ಕೇಂದ್ರ ಗ್ರಂಥಾಲಯ
ಬೆಂಗಳೂರು
544T2LR
...



ಕಳ್ಳನಂತೆ ಸಂದಿಗೊಂದಿಗಳಲ್ಲಿ ತಿರುಗಿ ಶ್ರೀಪದ್ಮ ಟಾಕೀಜ ಬಳಿ ಬಂದೆ. ಸಮಯ ಕಳೆಯ ಬೇಕಿತ್ತು....ಎಂಟೆದೆ ಬಂಟ ಚಿತ್ರ ಓಡುತ್ತಿತ್ತು. ಟಿಕೆಟ್ ತೆಗೆದುಕೊಂಡು ಒಳಹೊಕ್ಕೆ....ಚಿತ್ರ ಬಿಟ್ಟ ಮೇಲೆ ಹೊರಬಂದೆ. ಪೂರ್ತಿ ಕತ್ತಲಾಗಿತ್ತು. ಹೀಗಾಗಿ ಬಂದಿಷ್ಟು ಧೈರ್ಯ ಬಂದಿತ್ತು.

ರಾತ್ರಿ ಹನ್ನೊಂದುವರೆ ಸುಮಾರಿಗೆ ಮನೆಯಿಂದ ಫರ್ಲಾಂಗ್ ದೂರದಲ್ಲಿದ್ದೆ. ಎದೆ ಡವಡವ ಬಡಿದುಕೊಳ್ಳುತ್ತಿತ್ತು. ಮುಂದೇನಾಗುವುದೋ ಎಂಬ ಭಯ. ಅದರೊಂದಿಗೆ ತಂದೆತಾಯಿಗಳ ಬಗ್ಗೆ ಯೋಚನೆ. ಅವರನ್ನು ಕಂಡು ಮಾತಾಡಬೇಕು. ಅವರ ಕೈಕಾಲು ಹಿಡಿದು ಕ್ಷಮಿಸುವಂತೆ ಕೇಳಿ ಕೊಳ್ಳಬೇಕು ಇಷ್ಟೊಂದು ಸುಖವಾಗಿ ಸಾಕಿದ ಅವರಿಗೆ ನಾನು ಕೊಟ್ಟ ಉಡುಗೊರೆಗಾಗಿ ಅವರೇ ಶಿಕ್ಷೆ ನೀಡುವಂತೆ ಬೇಡಿಕೊಳ್ಳಬೇಕೆಂಬ ಹುಚ್ಚು ವಿಚಾರ....ಎಲ್ಲಾ ಒಟ್ಟುಗೂಡಿ ಕರುಳನ್ನು ಕತ್ತರಿಸಿ ಆಡಿಸಿದಂತಾಗಿ ದುಃಖ ಉಕ್ಕಿಬಂದಿತು. ಹತ್ತಿರ ಯಾರೂ ಇರಲಿಲ್ಲ. ಮನಸ್ಸು ಹಗುರವಾಗುವವರೆಗೆ ಅತ್ತು ಸಮಾಧಾನ ಮಾಡಿಕೊಂಡೆ. ಸ್ವಲ್ಪ ಹಾಯೆನಿಸಿತು... ಮೇಲೆದ್ದೆ.

ರಾತ್ರಿಯ ನೀರವತೆ. ಆಕಾಶದಲ್ಲಿ ಚಂದಿರನ ದರ್ಶನವಿರಲಿಲ್ಲ. ಎಲ್ಲೆಡೆ ಶಾಂತಿ. ಒಂದು ಬಗೆಯ ದುಗುಡ... ಭಾರವಾದ ಕಾಲುಗಳನ್ನು ಎತ್ತಿ ಅತ್ತಿತ್ತ ನೋಡುತ್ತ ಮುನ್ನಡೆದೆ. ಎಲ್ಲಾ ಪರಿಚಿತ ಮನೆಗಳು. ಬಾಗಿಲುಗಳು ಭದ್ರವಾಗಿ ಮುಚ್ಚಲ್ಪಟ್ಟಿದ್ದವು. ಅಲ್ಲೊಂದು ಇಲ್ಲೊಂದು ಮನೆಯ ಕೋಣೆಗಳಲ್ಲಿ ದೀಪದ ಬೆಳಕು, ಬಹುಶಃ ಮಕ್ಕಳು ಓದುತ್ತಿರ ಬೇಕು. ಬೆಳಕಿನ ಕಿರಣಗಳಿಂದ ತಪ್ಪಿಸಿಕೊಳ್ಳುತ್ತ ಮನೆಯಿಂದ ಐವತ್ತಡಿ ಅಂತರದಲ್ಲಿದ್ದ ಹಳೆ ಹುಣಸೆಮರದ ಬಳಿ ಬಂದು ನಿಂತೆ. ಚಿಕ್ಕವ ಸಿದ್ದಾಗ ಅದರ ಕೆಳಗೆ ಆಡಿ ದೊಡ್ಡವನಾಗಿದ್ದೆ. ದೊಡ್ಡವನಾದ ಮೇಲೆ ಮರ ಏರಿ ಕಾಯಿ ಹರಿದು ತಿಂದಿದ್ದೆ. ಇಂದು ಪುನಃ ಅದರ ಆಸರೆಗೆ ಬಂದಿದ್ದೆ. ಎದುರಿಗೆ ಕಾಣುತ್ತಿತ್ತು ನಮ್ಮ ಭವ್ಯ ಮನೆ. ಒಂದೇ ಒಂದು ಕಡೆ ಬೆಳಕು. ಅದು ನನ್ನ ಅಮ್ಮನ ಕೋಣೆ. ಅವಳಿಗಿನ್ನೂ ನಿದ್ದೆ ಬಂದಿ ರಲಿಕ್ಕಿಲ್ಲ. ಹೇಗೆ ಬಂದೀತು? ಅವಳ ಪ್ರೀತಿಪಾತ್ರ ಪುತ್ರ ನೇಣುಗಂಬ ಏರುವವನಾಗಿದ್ದ... ನನ್ನ ಬಗ್ಗೆ ನನ್ನ ಹಾಗೂ ಅಪ್ಸರೆಯ ಮದುವೆ ಬಗ್ಗೆ ಅನೇಕ ಹೊಂಗನಸು ಕಂಡ ಆ ಹೃದಯಕ್ಕಾಗಿದ್ದ ಬರೆಯ ನೋವು

ನಾನು ಅರ್ಥಮಾಡಿಕೊಳ್ಳದಷ್ಟು ಮೂರ್ಖನಾಗಿರಲಿಲ್ಲ. ವಿಧಿಯ ವಂಚನೆ ಅನ್ನಬೇಕೋ....ಮಾಯಾಂಗನೆಯ ಮಾಯೆ ಅನ್ನಬೇಕೋ ಅರ್ಥವಾಗುತ್ತಿಲ್ಲ ನನಗೆ ತಿಳಿಯದಂತೆ ನಾನೇ ಕಾಣದ ಬಲೆಯಲ್ಲಿ ಬಂಧಿತನಾಗಿದ್ದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಅದು ನನ್ನ ಪ್ರಾರಬ್ಧ...ಮತ್ತೆ ಅದೇ ಪ್ರಾರಬ್ಧ ನನ್ನನ್ನು ಕೈಬಿಸಿ ಕರೆದಿತ್ತು. ನನಗಾಗಿ ಮತ್ತೇನು ಕಾದಿದೆಯೋ?....

ಅತೀ ಹತ್ತಿರದಿಂದ ಬಿಸಿ ಗಾಳಿ ಬಂದಂತೆನಿಸಿ ಸರಕ್ಕನೆ ಹೊರಳಿದೆ. ನನ್ನ ತುಟಿಗಳು ಮಿದುವಾದ ಅಷ್ಟೇ ಬಿಸಿಯಾದ ವಸ್ತುವಿನೊಂದಿಗೆ ಸ್ಪರ್ಶಿಸಿದವು. ಕಣ್ಣು ಒಡೆದುಹೋಗುವಂತಾಯಿತು. ಪಕ್ಕದಲ್ಲಿ ಅಪ್ಸರೆ.... ಅವಳ ತುಟಿಗಳು ನನ್ನ ತುಟಿಗಳನ್ನು ಬಂಧಿಸಿದ್ದವು. ಮೈಯೆಲ್ಲಾ ಕುದ್ದು ಹೋಗುವಷ್ಟು ಬಂದಿದ್ದ ಕೋಪ ತಣ್ಣಗಾಯಿತು. ಆಕೆ ಹಿಂದೆ ಸರಿದು ಮೆಲ್ಲಗೆ ಉಸುರಿದಳು.

"ದರ್ಶನ್, ಇಲ್ಲೇನೂ ಕೇಳಬೇಡಿ....ನನ್ನ ಹಿಂದೆ ಬನ್ನಿ ಸಾಕು"

"ಎಲ್ಲಿಗೆ?"

"ಜಯಚಂದ್ರನ ರೂಮಿಗೆ"

"ನಿನಗೆ ಹುಚ್ಚೇ....ಅದನ್ನು ಪೊಲೀಸರು ಸೀಲು ಮಾಡಿದ್ದಾರೆ"

"ಅದೆಲ್ಲಾ ನಿಮಗೇಕೆ ಬನ್ನಿ"

ಇಬ್ಬರೂ ನಿಧಾನವಾಗಿ ಮೈಯೆಲ್ಲಾ ಕಣ್ಣಾಗಿ ಮುಂದೆ ನಡೆದೆವು. ನಮ್ಮ ಮನೆ ಪಕ್ಕದಲ್ಲೊಂದ ಕಪ್ಪು ಆಕೃತಿ ಚಲಿಸಿದಂತಾಯಿತು. ತಟಕ್ಕನೆ ನಿಂತೆ.

"ಅಪ್ಸರಾ, ಅಲ್ಲಿ ಯಾರೋ ಇದ್ದಾರೆ"

"ಆತ ಜಯಚಂದ್ರ....ಅಪಾಯವಿಲ್ಲ.... ಬನ್ನಿ"

ನಾನು ತಣ್ಣಗಾದೆ....ಅಪ್ಸರೆ ಬಗ್ಗೆ ಯೋಚಿಸಿದೆ....ಅದೆಂಥ ಹೆಣ್ಣು....

ಅಪ್ಸರೆ ಹೇಳಿದ್ದು ಸತ್ಯವಾಗಿತ್ತು. ಆತ ಜಯಚಂದ್ರ. ನನ್ನನ್ನು ನೋಡಿ ಹಲ್ಲು ಕಿರಿದ. ಕತ್ತಲೆಯಲ್ಲಿ ಅವನ ಹಲ್ಲುಗಳು ಬೆಳ್ಳಗೆ ಕಂಡವು. ಕಣ್ಣಂಚಿನಲ್ಲಿ ಮಿನುಗಿದ ಕುಯುಕ್ತಿ ಇಣುಕಿತು ಅಷ್ಟೆ.

ನಾನು ಮಾತನಾಡಲಿಲ್ಲ,

"ಜಯಚಂದ್ರ....ನಾನು ಕೆಳಗೆ ಇರತೇನೆ" ಅಪ್ಸರೆ ಪಿಸುಗುಟ್ಟಿದಳು.

"ಸರಿ....ನನ್ನ ಜೊತೆ ದರ್ಶನ ಬಂದರೆ ಸಾಕು" ಹಾವಿನಂತೆ ಫೂತ್ಕರಿಸಿದ ಆತ.

ನಾನು ನಿರಾಕರಿಸುವ ಸ್ಥಿತಿಯಲ್ಲಿರಲಿಲ್ಲ.

ಅವನನ್ನು ಹಿಂಬಾಲಿಸಿದ.

ಆತ ಅತ್ತಿತ್ತ ನೋಡುತ್ತ ಮಹಡಿ ಮೆಟ್ಟಲು ಹತ್ತತೊಡಗಿದ. ಎಡ ಬದಿಗೆ ನನ್ನ ತಮ್ಮನ ರೂಮು....ಬಾಗಿಲು ಮುಚ್ಚಿತ್ತು. ನಂತರ ನನ್ನದು. ಬೀಗ ನೇತಾಡುತ್ತಿತ್ತು. ಎದುರಿಗೆ ಸರಿಯಾಗಿ ಜಯಚಂದ್ರನ ರೂಮು. ಬೀಗ ಹಾಕಿ ಮೇಲೆ ಬಟ್ಟೆ ಸುತ್ತಿ ಅರಗಿನಿಂದ ಸೀಲು ಮಾಡಿದ್ದರು. ಕೈಯಿಂದ ಹಿಡಿದು ನೋಡಿದ ಆತ ನಂತರ ಜೇಬಿನಿಂದ ಹರಿತವಾದ ಆಯುಧ ಹೊರ ತೆಗೆದ....

ಅರಗಿನ ಸೀಲು, ಬಟ್ಟೆ ಎಲ್ಲಾ ಕತ್ತರಿಸಿ ತುಂಡು ತುಂಡಾಗಿ ಕೆಳಗೆ ಬಿತ್ತು. ಜಯಚಂದ್ರ ಹರಿತವಾದ ಆಯುಧ ಜೇಬಿಗೆ ಸೇರಿಸಿ ಎಂಟು ಹತ್ತು ಕೀಲಿಗಳಿದ್ದ ಗುಚ್ಛ ಕೈಗೆ ತೆಗೆದುಕೊಂಡ. ಬೀಗದೊಡನೆ ಅವನ ಬೆರಳು ಗಳು ಹೆಣಗಾಡತೊಡಗಿದವು. ಫಲ ದೊರೆಯಲಿಲ್ಲ. ಅತ್ತಿತ್ತ ನೋಡುತ. ಹಣೆಯ ಮೇಲೆ ಮೂಡಿದ ಬೆವರನ್ನು ಬಲಗೈ ಮುಂಗೈಯಿಂದ ಒರಸಿಕೊಂಡ್ತು ಎಡಗಡೆ ಜೇಬಿನಿಂದ ಪೆನ್‌ಟಾರ್ಚ್ ತೆಗೆದು ಬೀಗದ ಮೇಲೆ ಬೆಳಕು ಚೆಲ್ಲಿದ. ನಾನು ಥರಥರ ಕಂಪಿಸತೊಡೆಗಿದ್ದೆ. ಬೆಳಕು ಕಂಡು ಪಹರೆಗಿದ್ದ ಕಾವಲು ಗಾರನೋ ಪೊಲೀಸನೋ ಬಂದರೆ ನನ್ನ ಗತಿ ?....

"ಏಕೆ ಹೆದರಿಕೆಯಾಗುತ್ತಿದೆಯೇ ?" ವ್ಯಂಗ್ಯ ಬೆರೆತ ಧನಿಯಲ್ಲಿ ಕೇಳಿದ.

"ಹೂಂ....ನಿನಗೆ ?" ನಾನುಸಾವಕಾಶವಾಗಿ ಕೇಳಿದೆ.

"ನನಗಿಲ್ಲ."

"ಏಕೆ ?"

"ನನಗೆ ಇದೆಲ್ಲಾ ಮಾಮೂಲು."

"ಅಂದ್ರೆ ?"

"ನಮ್ಮ ಉದ್ಯೋಗವೇ ಇದು."

ನಾನು ದಂಗಾದೆ....ಗಂಟಲಿನಿಂದ ಸ್ವರ ಹೊರಡಲಿಲ್ಲ.

"ಏಕೆ ?....ಆಚ್ಚರಿ ಆಯ್ತಾ ?"

"ಇಲ್ಲ....ಮತ್ತೆ....ಮತ್ತೆ....ಅಪ್ಸರಾ ?...."

"ಆಕೆ...." ನನ್ನ ಕಡೆ ನೋಡಿ ಕುಹಕನಗೆ ನಕ್ಕು ನುಡಿದ "ಆಕೆ ನಮ್ಮ ಬಾಸ್"

"ಆಂ ?"... ಸರ್ಪ ಕಂಡವರಂತಾಯಿತು ನನ್ನ ಸ್ಥಿತಿ.

ಮುಂದಾತ ಮಾತನಾಡಲಿಲ್ಲ. ಕೆಲಸದಲ್ಲಿ ಮಗ್ನನಾದ.

ಸುಮಾರು ಹತ್ತಾರು ನಿಮಿಷಗಳಲ್ಲಿ ಬೀಗ ತೆರೆಯಿತು. ಮೆಲ್ಲನೆ ಅದನ್ನು ತರಚಿ ಚಿಲುಕ ಸರಿಸಿದ. ಎಷ್ಟು ಪ್ರಯತ್ನಿಸಿದರೂ ಸಪ್ಪಳವಾಗದೇ ಇರಲಿಲ್ಲ.... ನನಗೆ ಕಸಿವಿಸಿಯಾಯಿತು. ಮುಂದೆ ಹೋದವ ಜಯಚಂದ್ರ ಪೆನ್‌ಟಾರ್ಚ್ ಬೆಳಕು ಸುತ್ತಲು ಬೀರಿ ಕಿಟಕಿ ಮುಚ್ಚಿದ್ದು ಮನದಟ್ಟು ಮಾಡಿಕೊಂಡ ಮೇಲೆ ಬಾಗಿಲು ಮುಚ್ಚಿ ಚಿಲಕಹಾಕಿದ. ನಂತರ ದೀಪ ಉರಿಸಿದ.

ಝಗ್ ಎಂದು ಬೆಳಗಿದ ಪ್ರಕಾಶಕ್ಕೆ ಕಣ್ಣು ಮಿಂಚಿದವು. ಹೊಸಕಿಕೊಂಡೆ. ಮುಂದೆ ಸರಿಹೋಯಿತು. ಜಯಚಂದ್ರ ಸರಸರನೆ ತನ್ನ ಸೂಟ್‌ಕೇಸೊಂದನ್ನು ಖಾಲಿ ಮಾಡಿದ ಏಕೆಂದು ನನಗೆ ಹೊಳೆಯಲಿಲ್ಲ. ಆಮೇಲೆ ಮಂಚದ ಮೇಲಿದ್ದ ಗಾದಿ ಕಡೆ ಬಂದು ಮೇಲಿದ್ದ ಬ್ಲಾಂಕೆಟ್, ಬೆಡ್‌ಶೀಟ್, ದಿಂಬು ಎಲ್ಲಾ ತೆಗೆದಿಟ್ಟ. ಪುನಃ ಅವನ ಜೇಬಿನಲ್ಲಿದ್ದ ಹರಿತವಾದ ಆಯುಧ ಹೊರಬಂತು. ಅದರಿಂದ ಗಾದಿಯ ಮೇಲೆ ಮನಃ ಬಂದಂತೆ ಏಟುಹಾಕಿ ಹರಿದ.

ಒಮ್ಮೆಲೇ ನನ್ನ ಕಣ್ಣುಗಳು ಮಿನುಗಿದವು. ಸಾವಿರ ಕ್ಯಾಂಡಲ್ ಬಲ್ಬಿನಂತೆ ನೂರರ ನೋಟಿನ ಕಂತೆಗಳು, ಚಿನ್ನದ ಬಿಸ್ಕೆಟ್, ವಜ್ರದ ಒಡವೆ ಏನೇನೋ ಇದ್ದವು....ಅದನ್ನೆಲ್ಲ ನೋಡಿ ನಾನು ಮೂಕನಾದೆ. ಆತ ನಗುತ್ತ ಎಲ್ಲಾ ಸೂಟ್‌ಕೇಸಿನಲ್ಲಿ ತುಂಬ ತೊಡಗಿದ.

ಅದೇ ಕ್ಷಣ ಹೊರಗಿನಿಂದ ಜೋರಾಗಿ ಸೀಟೀ ಕೇಳಿ ಬಂದಿತು. ಜಯಚಂದ್ರನ ಮುಖ ಭೂತ ಬಡಿದವನಂತೆ ಕಪ್ಪಿಟ್ಟಿತು. ಆತ ತರಗೆಲೆಯಂತೆ ಕಂಪಿಸತೊಡಗಿದ. ಬದಲಾದ ಅವನ ಅವಸ್ಥೆಗೆ ಕಾರಣ ಏನು ಎಂದು ಕೇಳಬೇಕೆನ್ನುವಾಗಲೇ 'ಢಂ ಢಂ' ಎಂದು ಎರಡು ಗುಂಡು ಹಾರಿದಾಗ ನನ್ನ

ಪ್ರಶ್ನೆಗೆ ಉತ್ತರ ದೊರೆತಿತ್ತು. ನಾನು ಭೂಮಿಗಿಳಿದೆ. ಪೋಲಿಸರ ಆಗಮನವಾಗಿತ್ತು. ಅದನ್ನು ತಿಳಿದೇ ಅಪ್ಸರಾ ಸಂಜ್ಞೆ ನೀಡಿದ್ದಳು. "ಓಡು ಬೇಗ" ಎಂದರಚಿದ ಜಯಚಂದ್ರ ಬಾಗಿಲಿಗೆ ಬರುವಷ್ಟರಲ್ಲಿ ಬಾಗಿಲ ಮೇಲೆ ಪ್ರಹಾರ ಆರಂಭವಾಯಿತು.

ಆತ ಗಪ್‌ನೆ ನಿಂತುಬಿಟ್ಟ.

ನಾವಿಬ್ಬರೂ ಬಲವಾದ ಪೊಲೀಸ್ ಬಲೆಯಲ್ಲಿ ಸಿಲುಕಿಕೊಂಡಿದ್ದೆವು.

ನಾನಂತೂ ಭೂಮಿಗಿಳಿದಿದ್ದೆ.

ಆದರೆ ಜಯಚಂದ್ರ ಸಮುದ್ರದಲ್ಲಿ ಈಜಿದವನು.

ಒಮ್ಮೆಲೆ ಹಾರಿ ಕೋಣೆದೀಪ ಆರಿಸಿದ.

ಮೆಲ್ಲನೆ ಹೇಳಿದ.

"ಬಾಗಿಲ ಪಕ್ಕಕ್ಕೆ ನಿಲ್ಲು.... ಬಾಗಿಲು ಮುರಿದು ಒಳಗೆ ಅವರು ಬರುತ್ತಲೂ ತಳ್ಳಿಕೊಂಡು ಹೊರಗೆ ಓಡು"....

ಮನದಲ್ಲೇ ಅವನ ಧೈರ್ಯ ಹಾಗೂ ಉಪಾಯಕ್ಕೆ ತಲೆದೂಗಿದೆ.

ಪ್ರಹಾರ ಒಂದೇ ಸಮನೆ ಆರಂಭವಾಗಿತ್ತು. ಅದರೊಂದಿಗೆ "ನನಗೆ ಗೊತ್ತು. ನೀನು ಒಳಗಿದ್ದದ್ದು.... ಜಯಚಂದ್ರ ಬಾಗಿಲು ತೆರೆ...."

ಅದು ಸುಧೀರ ಜಾಧವನ ಧ್ವನಿ....

ನಾನು ಬೆವೆತು ನೀರಾದೆ.

ತನ್ನನ್ನು ಗಂಪಾಂತರದಲ್ಲಿ ನೂಕಿಕೊಂಡು ನನ್ನನ್ನು ಆತ ಪಾರು ಮಾಡಿದ್ದ. ಎಂದೂ ಈ ಕಡೆ ತಲೆಹಾಕಬಾರದೆಂದು ಎಚ್ಚರಿಸಿದ್ದ.... ಈಗ ನನ್ನನ್ನು ನೋಡಿ ಆತ ಏನೆಂದುಕೊಂಡಾನು ?.... ಡಿಪಾರ್ಟಮೆಂಟಿನಲ್ಲಿ ಅವನ ಘನತೆಗೌರವ ಏನಾದೀತು ? "ಓ ದೇವರೆ ಇದೇನಾಯಿತು" ಎಂಬು ದನ್ನು ನಾ ಶಪಿಸಿಕೊಂಡೆ. ಮತ್ತೆ ನನ್ನನ್ನು ಇಂಥ ವಿಚಿತ್ರ ಅಪಾಯಕಾರಿ ಸನ್ನಿವೇಶಕ್ಕೆ ದೂಡಿದ ಅಪ್ಸರೆಯನ್ನು ಮನಸಾರೆ ಹಳಿದೆ.

"ದಡಾರ್" ಭಾರಿ ಸಪ್ಪಳದೊಂದಿಗೆ ಬಾಗಿಲು ಮುರಿದು ಬಿತ್ತು. ಮೂರು ನಾಲ್ಕು ಜನ ಒಳನುಗ್ಗಿದರು. ಅವರು ಒಳಗೆ ಬರುವುದಕ್ಕೂ ನಾವಿಬ್ಬರೂ ಹೊರಗೋಡಿದೆವು. ಮೆಟ್ಟಲು ಬಳಿ ಬರುತ್ತಿದ್ದಂತೆ ಹಿಂದಿನಿಂದ

ಸದ್ದು. ಕಿವಿಗೊಡದೆ ಧಡಧಡ ಇಳಿದು ಕೆಳಗೆ ಬಂದೆವು. ಅಷ್ಟರಲ್ಲಿ ಮುಖದ ಮೇಲೆ ಬ್ಯಾಟರಿ ಬೆಳಕು.

"ಅರೆ....ದರ್ಶನ್... ನೀನು....ಇಲ್ಲಿ...." ಸುಧೀರನ ವೇದಭರಿತ ಅಚ್ಚರಿಯ ಉದ್ಗಾರ.

ಇದರ ಸದುಪಯೋಗಪಡಿಸಿಕೊಂಡ ಜಯಚಂದ್ರ ಸುಧೀರನ ಮೇಲೆ ನೆಗೆದ. ಒಂದು ಮೂಲೆಯಿಂದ ಬಂತು ಧ್ವನಿ, "ದರ್ಶನ್....ಬೇಗ ಈ ಕಡೆ ಬಾ" ಅದು ಅಪ್ಸರೆಯ ಧ್ವನಿ. ಓಡಿದೆ. ಸುಧೀರ ಮತ್ತು ಜಯಚಂದ್ರ ಗುದ್ದಾಡುತ್ತಿದ್ದರು. ತಿರುವಿನಲ್ಲಿ ನಿಂತಿತ್ತು ಒಂದು ಜಿಪ್ಸಿ ಜೀಪು. ಅದರಲ್ಲಿ ಹತ್ತಿ ಕೂಡುವಾಗ ಹಿಂದೆ ನೋಡಿದೆ. ಜಯಚಂದ್ರ ಓಡಿ ಬರುತ್ತಿದ್ದಂತೆ ಅನಿಸಿತು. ನಾನು ಗಾಡಿಯಲ್ಲಿ ಕುಳಿತೆ. ಗಾಡಿ ಸ್ಟಾರ್ಟ್ ಆಯಿತು. ಅದೇ ಕ್ಷಣ ಸುಧೀರನ ಕಂಚಿನ ಕಂಠ ಮೊಳಗಿತು.

"ಜಯಚಂದ್ರ ಓಡದಿರು....ಶೂಟ್ ಮಾಡ್ತೇನೆ...."

ಜಯಚಂದ್ರ ಅತ್ತ ಲಕ್ಷ ಕೊಡದೆ ಗಾಡಿ ಹಿಂದೆ ಓಡಿ ಬರತೊಡಗಿದ.

"ಜಯಚಂದ್ರ ಸ್ಟಾಪ್" ಸುಧೀರ ಗರ್ಜಿಸಿದ.

ಗಾಡಿ ವೇಗ ಹಿಡಿದಿತ್ತು. ಅಪ್ಸರ ಕೂಗಿದಳು.

"ಕಮಾನ್ ಜಯಚಂದ್ರ....ಶಭಾಶ್....ಬೇಗ"

ಮತ್ತೆ ಹಿಂದಿನಿಂದ ಕೇಳಿ ಬಂದಿತು ಧ್ವನಿ.

"ಜಯಚಂದ್ರ ಲಾಸ್ಟ್ ವಾರ್ನಿಂಗ್....ಅಲ್ಲೇ ನಿಲ್ಲು."

ನಮ್ಮ ಗಾಡಿ ಒಮ್ಮಿಂದೊಮ್ಮೆಲೆ ವೇಗ ಹೆಚ್ಚಿಸಿತು.

ಜಯಚಂದ್ರ ಸಹ ವೇಗ ಹೆಚ್ಚಿಸಿದ.

"ಢಂ....ಢಂ"

ಹಿಂದಿನಿಂದ ಗುಂಡು ಸಿಡಿದವು.

"ಅಯ್ಯೋ....ಹಾ...." ಜಯಚಂದ್ರ ಚೀರಿಕೊಂಡು ನೆಲಕ್ಕುರುಳಿದ.

ನಮ್ಮ ಗಾಡಿ ಮಿಂಚಿನ ವೇಗದಲ್ಲಿ ಓಡಿ ಮರೆಯಾಯಿತು.

ನನ್ನ ಕಣ್ಣೆದುರೇ ಜಯಚಂದ್ರನ ಗತಿ ಕಂಡು ದಿಗ್ಮೂಢನಾಗಿ ನಾನು ಅಪ್ಸರೆಯತ್ತ ನೋಡಿದೆ, ಅವಳ ಮುಖದ ಮೇಲೆ ವಿಚಿತ್ರ ಕಾಂತಿ

ಮಿನುಗುತ್ತಿತ್ತು. ಕೊಬ್ಬಿದ ಇಲಿಯನ್ನು ತಿಂದ ಬೆಕ್ಕಿನ ನೆನಪು ನನಗೆ ಬರದಿರಲಿಲ್ಲ...."

ಅದೇ ಕ್ಷಣ....ನನ್ನ ತಲೆಯ ಮೇಲೆ ಮೆಲುವಾದ ಆದರೆ ದೀಪ ಹಚ್ಚುವಂತೆ ಪ್ರಹಾರವಾಯಿತು.

"ಅರೆ....ಫೂಲ್....ಇದೇನು ಮಾಡಿದೆ ?" ಎಂದು ಅಪ್ಸರ ಚೀರಿಕೊಂಡದ್ದು ಕೇಳಿಸಿತು.

ಮುಂದೆ ನನಗೊಂದೂ ತಿಳಿಯದು. ನಾನು ಮೂರ್ಛೆ ಹೋಗಿದ್ದೆ.

ಮುಂದೆ ಎಚ್ಚರವಾದಾಗ ಪಾರ್ಕೊಂದರ ಬೆಂಚ ಮೇಲೆ ಮಲಗಿದ್ದೆ. ಚಿಕ್ಕ ಚಿಕ್ಕ ಮಕ್ಕಳು ನನ್ನನ್ನು ಮುತ್ತಿ ನಿಂತಿದ್ದರು. ಜಾಗಿಂಗೆಗೆ ಬಂದ ಹಲವಾರು ಹಿರಿಯರೂ ಅವರಲ್ಲಿದ್ದರು. ಎಲ್ಲರೂ ನನ್ನನ್ನು ಕುಡುಕ ಎಂದೇ ತಿಳಿದಿರಬೇಕು. ಚಟಕ್‌ನೆ ಮೇಲೆದ್ದು ಸುತ್ತಲೂ ನೋಡಿದೆ. ಮಕ್ಕಳು "ಹೋ" ಎಂದರು. ಸರಸರನೆ ನಡೆದು ಹೊರಬಂದೆ. ಮುಖ ಒರೆಸಿಕೊಳ್ಳಲು ವಸ್ತ್ರ ತೆಗೆದೆ. ಅದರ ಜೊತೆ ಒಂದು ಚೀಟಿ ಹೊರಬಂದಿತು. ಅಪ್ಸರೆ ಬರೆದಿದ್ದು.

"ಸಾರಿ ದರ್ಶನ್....ಖರ್ಚಿಗೆ ಹಣ ಇರಿಸಿರುವೆ. ಆಪತ್ತು ಬಂದಾಗ ನನ್ನ ನೆನೆಸು. ನಿನಗಾಗಿ ಒಂದು ವಸ್ತು ಬಿಟ್ಟಿರುವೆ. ಹುಡುಕು."

ಅಪ್ಸರೆ ಒಂದು ಒಗಟಾದಳು.

ಅವಳ ವರ್ತನೆಯೇ ಅರ್ಥವಾಗಲಿಲ್ಲ.

ಮೊದಲು ಹೊಟೆಲೊಂದರಲ್ಲಿ ರೂಮು ಬುಕ್ ಮಾಡಬೇಕೆಂದೆ. ಬೇಡ ಅನಿಸಿತು. ಬಸ್ ಸ್ಟ್ಯಾಂಡಿಗೆ ಬಂದೆ. ಮುಖ ತೊಳೆದು ಹೋಟೆಲ್ ಸೇರಿದೆ. ಟೀ ಕುಡಿದು ಬುಕ್ ಸ್ಟಾಲಿನಲ್ಲಿ ಪೇಪರ ಕೊಂಡು ಬಳ್ಳಾರಿ ಬಸ್ ಹುಡುಕಿ ಅದರಲ್ಲಿ ಕುಳಿತೆ. ಪತ್ರಿಕೆಯ ಒಳಪುಟದಲ್ಲಿ ಪ್ರಕಟವಾದ ಸುದ್ದಿ ಓದಿ ಸ್ತಂಭೀಭೂತನಾದೆ. ಜಯಚಂದ್ರ ಗುಂಡು ತಾಗಿ ಸತ್ತಿದ್ದ....ನನಗೆ ಪಾರಾಪಲು ಅವಕಾಶ ನೀಡಿದ ಸುಧೀರ ಜಾಧವನನ್ನು ಸಸ್ಪೆಂಡ್ ಮಾಡಲಾಗಿತ್ತು. ನನ್ನ ಬೆಂಗಾವಲಿಗೆ ನಿಂತಿದ್ದ ಭುಜಗಳು ಕಳಚಿದ್ದವು. ಅವನ ಜಾಗೆಗೆ ಬಂದಿದ್ದ ಅಧಿಕಾರಿ ನನ್ನನ್ನು ಬೇಗ ಹುಡುಕಿ ಜೈಲಿಗೆ ತಳ್ಳುವದಾಗಿ ಘೋಷಿಸಿದ್ದ....ನನ್ನ ಬಗ್ಗೆ ನನಗೆ ಚಿಂತೆಯಾಗಲಿಲ್ಲ. ಸುಧೀರನ ಬಗ್ಗೆ ಯೋಚಿಸಿದ್ದಾಗ ಕಣ್ಣಾಲಿಗಳು ತುಂಬಿ ಬಂದಿದ್ದವು.

ಇನ್ನು ನಾನು ಚುರುಕಾಗಲೇಬೇಕಿತ್ತು. ಮೈ ಎಲ್ಲಾ ಕಣ್ಣಾಗಿ ನನ್ನ ನಾನೇ ಕಾಪಾಡಿಕೊಳ್ಳುವ ಸಮಯ ಬಂದಿತ್ತು. ಸುಧೀರ ಅಧಿಕಾರದಲ್ಲಿರುವವರೆಗೆ ನಾನು ಸುರಕ್ಷಿತನಾಗಿದ್ದೆ. ಹಾಸಿಗೆಯಿಂದ ಎದ್ದು ಕರಾಟೆಯ ಟ್ರಿಕ್ಸ್‌ಗಳನ್ನು ಮೆಲುಕು ಹಾಕಿದೆ. ಒಂದರ್ಧ ಗಂಟೆ ರೂಮಿನಲ್ಲೇ ರೂಢಿ ಮಾಡಿದೆ. ಮೈ ಎಲ್ಲಾ ಬೆವತು ಬನಿಯನ್ ಒದ್ದೆಯಾಗಿತ್ತು. ಮೊದಲೇ ಬಳ್ಳಾರಿ ಬಿಸಿಲು....ಎಂಟೂವರೆ ಆಗಿದ್ದರೂ ಚುರುಕು ಮುಟ್ಟಿಸುತ್ತಿತ್ತು. ಬನಿಯನ್ ತೆಗೆದು ಫ್ಯಾನಿನ ಕೆಳಗೆ ಚೆಲ್ಲಿ ಕಿಟಕಿಗೆ ಬಂದು ನಿಂತೆ. ಎದುರಿಗೇ ಬಸ್ ಸ್ಟ್ಯಾಂಡ್....ಚಟುವಟಿಕೆಯಲ್ಲಿದ್ದ ಜನ ಸಾಗರ....ಸಾಲಾಗಿ ನಿಂತ ಆಟೋಗಳು. ಆಟೋ ಪಕ್ಕದಲ್ಲಿ ನಿಂತಿದ್ದ ಸಿಗರೇಟು ಸೇದುವಾತ ರಹಸ್ಯಮಯವಾಗಿ ಕಂಡ. ಮರೆಗೆ ನಿಂತು ಅವನನ್ನು ನಿರೀಕ್ಷಿಸಿದೆ. ಐದೂವರೆ ಫೂಟು ಎತ್ತರ, ದೃಢಕಾಯ....ತಲೆಯಲ್ಲಿ ಕೂದಲು ಕಡಿಮೆಯಿದ್ದರೂ ಆಕರ್ಷಕವಾಗಿ ಕಾಣುತ್ತಿದ್ದ. ಪ್ಯಾಂಟು, ಬುಶ್‌ಶರ್ಟು, ಬೂಟು, ನೂರಾರು ಜನರಲ್ಲಿ ಒಬ್ಬನಾಗಿದ್ದರೂ ಅವರನ್ನು ಬಿಟ್ಟು ಬೇರೆ ಬಗೆಯ ವ್ಯಕ್ತಿತ್ವ ಆತ ಪಡೆದಿದ್ದಾನೆ ಎನಿಸಿತು. ಸರಿದು ಕಿಟಕಿಗೆ ಬಂದು ನಿಂತೆ. ನನ್ನತ್ತ ನೋಡುತ್ತಲೇ ಆತ ಸರಕ್ಕನೆ ಆಟೋಗಳ ಹಿಂದೆ ಮರೆಯಾದ.

ಮನದಲ್ಲಿ ಸಂಶಯ ಹೆಡೆಯಾಡಿತು.

ಯಾರೀತ ?....ನನ್ನ ಚಲನವಲನದ ಮೇಲೆ ಕಣ್ಣಿಡುತ್ತಿದ್ದಾನೆ.... ಅಪ್ಸರೆಗೆ....ಸೇರಿದವನೋ....ಜಯಚಂದ್ರನ ಕಡೆಯವನೋ....ಆ ಕುರುಚಲು ಗಡ್ಡದ ಗೂಂಡಾನ ಪಂಗಡದವನೋ ಅಥವಾ ಪೊಲೀಸ್ನರಿಗೆ ಸಂಬಂಧಿಸಿದವನೋ....

ಈ ನಾಲ್ವರಲ್ಲಿ ಯಾರೇ ಇದ್ದರೂ ಅವನಿಂದ ನನಗೆ ಅಪಾಯ ತಾನೇ....ನನ್ನ ಮಿತ್ರನಂತೂ ಅಲ್ಲವಲ್ಲ....

ಮೈ ಜಾಡಿಸಿ ಬಯಲಿಗೆ ಬರುವ ಸಮಯ ಬಂದಿತು.

ನಾನೂ ಸನ್ನದ್ಧನಾದೆ....

ಮೊದಲೇ ತಂದಿಟ್ಟು ಕೊಂಡಿದ್ದ ಲುಂಗಿ ಸುತ್ತಿಕೊಂಡು ಮೇಲೆ

ವೊಂಡು ಅಂಗಿ ಧರಿಸಿ, ತಲೆಗೆ ಬಿಳಿ ವಸ್ತ್ರ ಸುತ್ತಿಕೊಂಡೆ. ಕಾಲಲ್ಲಿ ಕೆಂಪು ಸ್ಯಾಂಡಲ್ಸ ನನ್ನ ವೇಷಕ್ಕೆ ಹೊಂದೋದಿಲ್ಲ ಅನಿಸಿದ್ರೂ ಏನೂ ಮಾಡುವಂತಿ ರಲಿಲ್ಲ. ಏನು ಬದಲಿಸಿದರೂ ಅವನ್ನು ಮಾತ್ರ ಬದಲಿಸಲು ಮನಸ್ಸಾಗಲಿಲ್ಲ. ಕನ್ನಡಿಯಲ್ಲಿ ನನ್ನ ನಾ ನೋಡಿಕೊಂಡೆ. ನನಗೇ ಸಂಶಯ ಬರುವಂತಾಯಿತು. ಇನ್ನು ಬೇರೆಯವರಿಗೆ ಗುರುತಿಸಲು ಸ್ವಲ್ಪ ಕಷ್ಟ ಆದೀತು. ಆ ಸ್ವಲ್ಪ ಕಷ್ಟವೇ ನನಗೆ ಜೀವದಾನವಾಗುವುದರಲ್ಲಿ ಸಂದೇಹವಿರಲಿಲ್ಲ. ಬೀಗ ಹಾಕಿ ಬೀಗ ಜೇಬಲ್ಲೇ ಇಟ್ಟುಕೊಂಡು ಕೆಳಗೆ ಬಂದೆ. ಬೇಕೆಂತಲೇ ರೂಮಿನ ಕಿಟಕಿ ಹಾಕಿರಲಿಲ್ಲ. ನೋಡುವಾಗಲೆ ಆಸಾಮಿ ಇನ್ನೂ ರೂಮಿನಲ್ಲೇ ಇದೆ ಎಂದು ಅನಿಸಿರಬೇಕು.

ನಾಲ್ಕಾರು ನಿಮಿಷ ಹಾಗೇ ರಿಸೆಪ್ಶನ್‌ನಲ್ಲಿ ಸಮಯ ಕಳೆದು ಸರಸರನೆ ಹೊರ ಬಂದು ರಿಕ್ಷಾ ಸ್ಟ್ಯಾಂಡಿನಿಂದ ವಿರುದ್ಧ ದಿಕ್ಕಿನಲ್ಲಿ ಸಾಗಿದೆ. ಸ್ವಲ್ಪ ದೂರ ಹೋಗಿ ಹೊರಳಿ ನೋಡಿದೆ. ಮೊದಲು ಕಂಡ ರಹಸ್ಯಮಯ ವ್ಯಕ್ತಿ ಕಾಣಿಸಲಿಲ್ಲ. ಅಲ್ಲಿಂದಲೇ ಒಂದು ಆಟೋ ಹಿಡಿದು ಗೋವಿಂದರಾಯರ ಹೆಸರು ಹೇಳಿದೆ. "ಪ್ಯಾಲೇಸ್ ಗೋವಿಂದರಾಯರಾ ?" ಎಂದು ಮರಳಿ ಆತ ಕೇಳಿದಾಗ ಗಲಿಬಿಲಿಗೊಂಡೆ. ಪ್ಯಾಲೇಸ್ ಗೋವಿಂದರಾಯರೆಂದು ಭಟ್ಟರು ಹೇಳಿದ್ದು ನೆನಪಿಗೆ ಬರಲಿಲ್ಲ. ಅವರ ಮನೆ ಅರಮನೆ ಹಾಗಿದೆ ಎಂದರು. ತಟಕ್ಕನೆ ನೆನಪಾಯಿತು. ಅರಮನೆ ಅಂದರೆ ಪ್ಯಾಲೇಸ್. ಅರಮನೆ ಥರ ಮನೆ ಇರೋ ಗೋವಿಂದರಾಯರು. ಅಂದ್ಮೇಲೆ "ಪ್ಯಾಲೇಸ್ ಗೋವಿಂದರಾಯರು ಸರಿ ಅಲ್ಲವೆ ?" ತಟಕ್ಕನೆ ಹೇಳ್ದೆ....ಹಾ....ಅವರೇ.

ಆಟೋ ಮತ್ತೆ ಬಸ್‌ಸ್ಟ್ಯಾಂಡ್ ಮುಂದೆ ಬಂದಾಗ ಗಾಬರಿ ಯಾಯಿತು. ಹಿಂದೆ ಸರಿದು ಮರೆಮಾಡಿಕೊಂಡೆ. ಎಷ್ಟೋ ದೂರ ಬಂದ ಮೇಲೆ ಮೈಚಳಿ ಬಿಟ್ಟು ಅತ್ತಿತ್ತ ದೃಷ್ಟಿ ಹರಿಸುತ್ತ ಬಿಸಿಲುಗುದುರೆ ಸವಾರಿ ಮಾಡುತ್ತಿರುವಾಗ ಬಳ್ಳಾರಿಯ ಸೌಂದರ್ಯ ಸವಿಯತೊಡಗಿದೆ.

ಗೋವಿಂದರಾಯರ ಮನೆ ಅರಮನೆಯಷ್ಟು ದೊಡ್ಡದಾಗಿರದಿದ್ರೂ ಸಾಮಾನ್ಯ ಮನೆಗಳಿಗಿಂತ ಹತ್ತಾರು ಪಟ್ಟು ದೊಡ್ಡದಾಗಿತ್ತು. ಅದರೊಂದಿಗೆ ಕಟ್ಟಡದ ವಿನ್ಯಾಸ ಹಿಂದಿನ ಕಾಲದ ಸಣ್ಣಪುಟ್ಟ ಸಂಸ್ಥಾನಿಕರ ಅರಮನೆಗಳಂತೆ ಇದ್ದುದರಿಂದ ಎಲ್ಲರೂ ಅದಕ್ಕೆ ಪ್ಯಾಲೇಸ್ ಎಂದೇ

ಕರೆಯುತ್ತಿದ್ದರು. ಆಟೋದವನಿಗೆ ದುಡ್ಡು ಕೊಟ್ಟು ಗೇಟು ತೆರೆದು ಒಳಗೆ ಕಾಲಿಟ್ಟೆ. ಎಡಬಲಕ್ಕೆ ಸುಂದರವಾದ ತೋಟ. ಮಧ್ಯ ಮಧ್ಯ ತೆಂಗಿನ ಹಾಗೂ ಹಣ್ಣಿನ ಗಿಡಗಳು. ಹತ್ತಾರು ಮರಗಳ ಮಧ್ಯ ಇರುವ ಚಿಕ್ಕ ಅರಮನೆ ನಯನಮನೋಹರವಾಗಿತ್ತು. ಮಾಲಿ ಓಡಿ ಬಂದು "ಯಾರು ಬೇಕು ಸ್ವಾಮೀ ?" ಎಂದು ಕೇಳಿದ. "ಗೋಕರ್ಣದಿಂದ ಬಂದಿದಾರೆ ಅಂತ ಹೇಳು ನಿಮ್ಮ ಜಮಾನರಿಗೆ ನಾವು ಬೀಗರಾಗಬೇಕು" ಎಂದೆ ಗತ್ತಿನಿಂದ.

"ಬನ್ನಿ ಸ್ವಾಮಿ....ನೀವು ಬೈಠಕ್‌ನಲ್ಲಿ ಕೂತ್ಕೊಳ್ಳಿ" ಎಂದವನೇ ಆತ ಅಲ್ಲಿಂದ ಕಂಬಿ ಕಿತ್ತ. ಯಜಮಾನರ ಬೀಗರು ಬಂದ ವಿಷಯ ಶೀಘ್ರ ತಿಳಿಸಬೇಕಲ್ಲ.

ಬೈಠಕ್‌ನಲ್ಲಿ ಕುಳಿತೆ. ಹತ್ತು, ಹದಿನೈದು ನಿಮಿಷಗಳಲ್ಲಿ ಗೋವಿಂದರಾಯರು ಬಂದರು. ಅವರನ್ನು ನೋಡುತ್ತಲೇ ಸರಳ ವ್ಯಕ್ತಿ ಅನ್ನಿಸದಿರಲಿಲ್ಲ. ಅವರ ಹಿಂದೆಯೇ ಆಳು ಬೇಸನ್ ಉಂಡೆ, ಉಪ್ಪಿಟ್ಟು, ಚಹ ತಂದ. "ನನ್ನ ಟಿಫಿನ್ ಆಗಿದೆ" ಎಂದೆ. "ನಮ್ಮ ಮನೆಗೆ ಬರೋದು ಗೊತ್ತಿದ್ದೂ ಟಿಫಿನ್ ಮಾಡೀರಿ ಅಂದ್ರೆ ಅದು ಅಕ್ಷಮ್ಯ ಅಪರಾಧ....ಈ ತಿಂಡಿ ತಿಂದರೆ ಮಾತ್ರ ಕ್ಷಮೆ ಸಿಗುತ್ತದೆ" ಅಂದರು. ಅವರ ಆತ್ಮೀಯತೆಗೆ ಮಾರುಹೋಗಿ ನನಗೆ ಬೇಕಾದ ವಿಷಯ ಕೆದಕ ತೊಡಗುತ್ತ ತಿಂಡಿ ತಿನ್ನತೊಡಗಿದೆ. ಮಂದಾಕಿನಿ....ಸುಬ್ಬರಾವ್‌ರ ವಿಷಯ ಬಂದಾಗ ತುಂಬಾ ನೊಂದುಕೊಂಡು ಅವರು ಹೇಳಿದರು.

"ಸುಬ್ಬರಾಯರು ಎಂಥಾ ದೊಡ್ಡ ಜನ....ಗೌರವಸ್ಥ ಕುಟುಂಬ ಅವರದು. ಅವರು ಒಲ್ಲೆ ಒಲ್ಲೆ ಅಂದರೂ ಜನ ಬಿಡಲಿಲ್ಲ. ಎತ್ತಿ ಹಿಡಿದು ಹತ್ತಿಪ್ಪತ್ತು ವರ್ಷಗಳ ಹಿಂದೆಯೇ ಅವರನ್ನು ಎಂ.ಎಲ್.ಎ. ಮಾಡಿದರು. ಬಡವರ ಬಂಧು ಎಂದು ಹೆಸರು ಬಂದದ್ದು ಅವರು ಮಾಡಿದ ಸೇವೆಯಿಂದಲೇ. ಆದರೆ ಅಂಥವರ ಹೊಟ್ಟೆಯಲ್ಲಿ ಮಂದಾಕಿನಿ ಹುಟ್ಟಿದ್ದು ಹಸುವಿನ ಹೊಟ್ಟೇಲಿ ಹಾವು ಹುಟ್ಟಿದಂತಾಯ್ತು."

"ಅಂದ್ರೆ-ಮಂದಾಕಿನಿ ಅಮ್ಮ ಅಷ್ಟು ಕೆಟ್ಟವಳಾ ?

"ಕೆಟ್ಟವಳಾಗಿದ್ದರೆ ಕ್ಷಮಿಸಬಹುದಿತ್ತು. ತಿದ್ದಿ ಸರಿದಾರಿಗೆ ತರಬಹುದಿತ್ತು."

"ಆದದ್ದಾದರೂ ಏನು ?"

"ಮಂದಾಕಿನಿ ಒಳ್ಳೆ ಸುಂದರ ಹುಡುಗಿ. ನೋಡಿದವರ ಕಣ್ಣು ಕುಕ್ಕುವಂತಿದ್ದಳು... ಊರಲ್ಲಿಯ ಹುಡುಗನೊಬ್ಬ ಓದಿ ಪೋಲಿಸನಾಗಿದ್ದ.... ಅವನಿಗೂ ಅವಳಿಗೂ ಹೇಗೆ ಸಂಬಂಧ ಬೆಳೆಯಿತೋ ತಿಳಿಯದು. ಒಂದು ದಿವಸ ಅವನ ಜೊತೆ ಆಕೆ ಓಡಿಹೋದಳು. ಮನೆತನದ ಗೌರವ, ಮರ್ಯಾದೆ ಎಲ್ಲಾ ಮಣ್ಣು ಪಾಲಾಯಿತು."

"ಆ ಪೊಲೀಸ್ ಯಾರು ?"

"ಸದಾನಂದ ಅವನ ಹೆಸರು....ಮುಂದೆ ರಾಜಧಾನಿಗೆ ವರ್ಗ ಮಾಡಿಸಿಕೊಂಡ. ಅವನ ಜೊತೆ ಆಕೆಯೂ ರಾಜಧಾನಿ ಸೇರಿದಳು. ಹೋಗ್ಲಿ ಬಿಡಿ ಅವಳ ಕತೆ ನಮಗೇಕೆ ?"

"ಸುಬ್ಬರಾಯರು ಏನು ಮಾಡ್ತಿದಾರೆ ?"

"ಅವರು ಅವಮಾನ ತಾಳಲಾರದೇ ಊರುಬಿಟ್ಟು ರಾಜಧಾನಿ ಸೇರಿದರು. ಇಲ್ಲಿಯ ಎಲ್ಲಾ ಆಸ್ತಿ ಮಾರಿಯಾಯಿತು. ಸದ್ಯ ಅವರು ರಾಜಕೀಯದಲ್ಲಿ ದೊಡ್ಡ ಕುಳ. ಅವರ ಒಪ್ಪಿಗೆ ಇಲ್ಲದೆ ಒಂದು ಹುಲ್ಲು ಕಡ್ಡಿ ಸಹ ಅಲ್ಲಾಡುವುದಿಲ್ಲ... "

"ಹೀಗೋ. ಹಾಗಾದರೆ ದಯವಿಟ್ಟು ನಂಗೊಂದು ಉಪಕಾರ ಮಾಡಿ. ನನ್ನ ತಮ್ಮನಿಗೊಂದು ಉದ್ಯೋಗಕ್ಕಾಗಿ ಅಲೆಯುತ್ತಿದ್ದೇನೆ. ಅವರ ಶಿಫಾರಸು ಇದ್ರೆ ಸುಲಭವಾಗಬಹುದು. ಅವರ ವಿಳಾಸ ಅದರ ಜೊತೆ ಒಂದು ಪತ್ರ ಕೊಟ್ರೆ...."

"ಓಹ್ ಅದಕ್ಕೇನು....ಇರಿ ಬಂದೆ" ಅವರು ಎದ್ದು ಒಳಗೆ ಹೋದರು.

ನಾನು ಬಂದ ಕೆಲಸವಾಗಿತ್ತು. ಸುಬ್ಬರಾಯರು ರಾಜಧಾನಿಯಲ್ಲಿರುವುದರಿಂದ ಹಳ್ಳಿಗೆ ಹೋಗುವ ಅವಶ್ಯಕತೆ ಇರಲಿಲ್ಲ. ಇನ್ನು ಅಪ್ಸರೆ ಅರ್ಥಾತ್ ಮಂದಾಕಿನಿಯನ್ನು ಹಾರಿಸಿಕೊಂಡು ಹೋದ ಸದಾನಂದ.... ಪೊಲೀಸ್‌ನನ್ನು ಅಲ್ಲೇ ಹುಡುಕುವುದು. ಒಮ್ಮೆಲೆ ನನಗೆ ಕೊಲೆಯಾದ ಪೊಲೀಸನ ನೆನಪಾಯಿತು....ಅಂದು ಅಡ್ರೆಸ್ ತಂದು ನನಗೆ ತೋರಿಸುವಾಗ

ಅಪ್ಸರೆ ಅವನನ್ನು ನೋಡಿ ಬೆಚ್ಚಿದ್ದಳು, ಬೆದರಿದ್ದಳು. ಅವನೂ ಸಹ ಅವಳನ್ನು ವಿಚಿತ್ರವಾಗಿ ನೋಡಿದ್ದ....

ಹಾಗಾದರೆ ಅವನೇ ಸದಾನಂದನೇ ?....ಹಾಗಾದರೆ ನಾಗರಾಜ ಎಂದದ್ದೇಕೆ ?

ಆತ ಹುಡುಕಿಕೊಂಡು ಬಂದದ್ದು ಅಪ್ಸರೆಯನ್ನು....ಜಯಚಂದ್ರನನ್ನಲ್ಲ....

ಅವನ ಕೊಲೆ ಮಾಡಿದವರಾರು ? ಕೊಲೆಯಾದವ ಸದಾನಂದನೇ ? ಅಥವಾ ನಾಗರಾಜನೇ ?

ಅಪ್ಸರೆಯೇ ? ಛೆ! ಹೆಣ್ಣಿನಿಂದ ಆಗುವ ಕೆಲಸವಲ್ಲವದು....

ಜಯಚಂದ್ರನೇನಾದರೂ ಅವಳಿಗೆ....

ಮನಸ್ಸಿಗೆ ಕಸಿವಿಸಿಯಾಯಿತು. ಈ ವಿಚಾರ ಬರುತ್ತಲೇ, ಅಪ್ಸರೆಯ ಬಗ್ಗೆ ಏನೂ ತಿಳಿಯದಿರುವಾಗ ಜಯಚಂದ್ರನ ಮಾತು ಕೇಳಿ ಕೋಪಗೊಂಡಿದ್ದೆ. ನೂರು ರೂಪಾಯಿಗೆ ಬರುವ ಸುಂದರ ಹಕ್ಕಿಗಳನ್ನು ಅಪ್ಸರಾ ಎಂದು ಅಂದಾಗ ಬೈದಿದ್ದೆ.

ಈಗ ರಾಯರಿಂದ ವಿಷಯ ತಿಳಿದ ಮೇಲೆ ಅಪ್ಸರಾ....

ಥೂ! ಅವಳ ಹೆಸರು ನುಡಿಯಲು ಹೇಸಿಗೆಯಾಯಿತು.

ರಾಯರು ಬಂದು ಪತ್ರ ನೀಡಿದರು. ಅವರಿಗೆ ವಂದಿಸಿ ಹೊರ ಬಂದೆ....

ಬಳ್ಳಾರಿ ಬಿಟ್ಟು ರಾಜಧಾನಿ ಬಂದು ಸೇರಿದೆ. ಹೊರಗೆ ಫ್ರೀಯಾಗಿ ತಿರುಗಾಡಲು ಭಯ. ರಾಜಧಾನಿ ಪೊಲೀಸರು ತುಂಬಾ ಚುರುಕು ಎಂದು ಕೇಳಿದ್ದೆ. ಹೀಗಿರುವಾಗ ರಾಜಧಾನಿ ಪೊಲೀಸರಿಗೆ ಸೇರಿದ ಸದಾನಂದನನ್ನು ಹುಡುಕಲು ನಾನು ಹೋಗುವುದೇ ? ಚಿಂತಿತನಾದೆ. ಸಹಾಯಕ್ಕೊಬ್ಬರು ಬೇಕಾಗಿತ್ತು. ತಟಕ್ಕನೆ ನೆನಪಾದದ್ದು ನಂಜುಂಡಪ್ಪ. ಲಕ್ಷ್ಮೀ ಪ್ರಕಾಶನದ ಒಡೆಯ. ನನ್ನ ಹಲವಾರು ಕಾದಂಬರಿಗಳನ್ನು ಪ್ರಕಟಿಸಿದ್ದರು. ಸರಿ ಅವರೇ ಯೋಗ್ಯರೆಂದುಕೊಂಡು ರಾತ್ರಿಯಾಗುವುದನ್ನು ಕಾಯ್ದು ಆಮೇಲೆ ಹೊರಬಿದ್ದೆ. ನಂಜುಂಡಪ್ಪ ಬೇಗ ಮನೆ ಸೇರುವ ಜಾತಿಯವರಲ್ಲ ಎಂಬುದು ಗೊತ್ತಿತ್ತು....ರಾತ್ರಿ ಹತ್ತರವರೆಗೆ ಎರಡು, ಮೂರು ಕಡೆ ಸುತ್ತಿ ಆಮೇಲೆ

ಒಂದು ಬಾರ್ ಹೊಕ್ಕು ಸ್ವಲ್ಪ ತೀರ್ಥ ಸೇವಿಸಿ ಹನ್ನೊಂದರ ನಂತರ ಮನೆ ತಲುಪುತ್ತಾರೆ. ತೀರ್ಥ ಸೇವಿಸಿದಾಗ ಅವರ ಜೊತೆ ಮಾತನಾಡುವುದು ಎಷ್ಟು ಸಮಂಜಸ ? ಕೆಲವೊಬ್ಬರು ತೀರ್ಥ ತೆಗೆದುಕೊಂಡಾಗಲೇ ಸತ್ಯ ಮಾತಾಡುತ್ತಾರೆ ಎಂಬ ವಿಷಯ ಬೇರೆ. ನನ್ನ ವಿಷಯಕ್ಕೆ ನಂಜುಂಡಪ್ಪ ಹಾಗೆಲ್ಲ ಸುಳ್ಳು ಹೇಳುವ ಪ್ರಮೇಯವೇ ಇಲ್ಲ. ಆದರೂ ಹತ್ತರೊಳಗೆ ಅವರನ್ನು ಹಿಡಿಯಬೇಕು ಎಂದು ನಿರ್ಧರಿಸಿ ನಾಲ್ಕಾರು ಬಾರ್‌ಗಳಿಗೆ ಭೇಟಿ ನೀಡಿದೆ. ಅಲ್ಲಿ ನಂಜುಂಡಪ್ಪ ಬಂದಿರಲಿಲ್ಲ. ಅವರಿಗೆ ಸಂದೇಶ ತಲುಪುವ ವ್ಯವಸ್ಥೆ ಮಾಡಿ ಕಮಲ ಲಾಡ್ಜ್‌ಗೆ ಬಂದೆ. ನನ್ನ ಖಾಯಂ ಲಾಡ್ಜ್. ಅರ್ಧ ಗಂಟೆಯಲ್ಲಿ ನಂಜುಂಡಪ್ಪನ ಫೋನು ಬಂತು. ಗಾಬರಿಯಾಗಿದ್ದುದು ಧ್ವನಿಯಲ್ಲಿ ಕಂಡುಬಂತು. 'ಕೂಡಲೇ ಬರುವಂತೆ ತಿಳಿಸಿದೆ.' ಅವರಿಗೆ ಗೊತ್ತು ನಾನೆಲ್ಲಿರುತ್ತೇನೆ ಅಂತ.

ನಂಜುಂಡಪ್ಪ ಬಂದರು. ಅವರಿಗೆ ನನ್ನ ಬಗ್ಗೆ ತಿಳಿದಿತ್ತು. ಗಾಬರಿಯಾಗಿದ್ದರು. "ಇದೆಲ್ಲಾ ಏನು ? ಹೇಗಾಯ್ತು ?" ಪಟಪಟನೆ ಕೇಳಿದರು.

"ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ನಿಧಾನವಾಗಿ ಹೇಳ್ತೀನಿ ?"

ಆಮೇಲೆ ನಡೆದ ಎಲ್ಲಾ ವಿಷಯ ತಿಳಿಸಿ ಕೂಡಲೇ ನನಗೆ ಸದಾನಂದನ ಒಗ್ಗೆ ವಿವರಬೇಕು. ಅವನ ಫೋಟೋ ಸಿಕ್ಕರೆ ಇನ್ನೂ ಒಳಿತು ಅಂದೆ. ಆಯ್ತು, ನಾಳೆ ಮಧ್ಯಾಹ್ನದೊಳಗೇ ಎಲ್ಲಾ ತಿಳಿಸುತ್ತೇನೆ ಅಂದರು. ಸುಬ್ಬರಾವ್ ಬಗ್ಗೆ ಕೇಳಿದಾಗ "ಓಹ್ ಅವರೂ ನನಗೆ ಗೊತ್ತು ನಾನು ಫೋನು ಮಾಡಿರುತ್ತೇನೆ. ಭೇಟಿಯಾಗಿ, ಅವರ ಬಗ್ಗೆ ಭಯ ಬೇಡ" ಎಂದರು.

ಸಮಾಧಾನವಾಯಿತು....ಊಟ ಮಾಡಿಕೊಂಡು ಮನೆ ಕಡೆ ನಡೆದರು.

"ನೇರವಾಗಿ ಮನೆಗೋ....ತೀರ್ಥಕ್ಕೋ...." ಹಾಸ್ಯ ಮಾಡಿದೆ.

"ನಿಮ್ಮ ವಿಷಯಾನೇ ತಲೆಗೇರಿದೆ. ಇನ್ನು ಯಾವ ತೀರ್ಥವೂ ಬೇಕಾಗಿಲ್ಲ...."

ನಿಜವಾಗಿಯೂ ನನ್ನ ಬಗ್ಗೆ ಅವರಿಗೆ ದುಃಖವಾಗಿತ್ತು. ರಾತ್ರಿ ಕಳೆದು ಬೆಳಗ್ಗಾಯಿತು. ಒಂಬತ್ತು ಗಂಟೆಗೆ ನಂಜುಂಡಪ್ಪನಿಂದ ಫೋನು

ಬಂತು. "ಸುಬ್ಬಾರಾವ್ ಜೊತೆ ಮಾತಾಡಿರುವೆ. ಹತ್ತು ಗಂಟೆಗೆ ಭೇಟಿಯಾಗಿ...."

ನಾನೊಬ್ಬ ಕೊಲೆಗಾರ. ಪೊಲೀಸ್ ಕಸ್ಟಡಿಯಿಂದ ಪಾರಾಗಿ ಬಂದ ಅಪರಾಧಿ ಎಂಬ ವಿಷಯ ಕಮಲ ಲಾಡ್ಜಿನ ಯಜಮಾನರಿಗೆ ಇನ್ನೂ ತಿಳಿದಿರ ಹೀಗಾಗಿ ಕೆಳಗೆ ಬಂದು ಅವರ ಜೊತೆ ಮಾತಾಡುತ್ತ ಕುಳಿತೆ. ಮೆನೇಜರ್ ರಾಮಣ್ಣ ಬಂದರು. ಮಾತು ಮಾತಿನಲ್ಲಿ ಸುಬ್ಬಾರಾವ್ ವಿಷಯ ಬಂದಿತು. ರಾಮಣ್ಣ ಹೇಳಿದರು,

"ಸುಬ್ಬಾರಾವ್ ದೇವರಂಥ ಮನುಷ್ಯರು. ರಾಜಕೀಯದಲ್ಲಿ ಅವರಿಗೆ ದೊಡ್ಡ ಸ್ಥಾನವಿದೆ. ಹೀಗಿದ್ದೂ ಅಧಿಕ್ಕಾರಕ್ಕೆ ಆಶೆ ಪಡದೆ ತಮ್ಮ ಪಾಡಿಗೆ ತಾವು ಜನಸೇವೆ ಮಾಡ್ತಾ ಇದಾರೆ. ಇತ್ತೀಚೆಗೆ ರಾಜಧಾನಿಯಲ್ಲಿ ಬೀರು ಬ್ರಾಂದಿ ಅಂಗಡಿಗಳ ಜೊತೆಗೆ ನಾಯಿಕೊಡೆಯಂತೆ ಪಬ್‌ಗಳು ತಲೆ ಎತ್ತಿವೆ. ಈ ಪಬ್‌ಗಳೇ ನಮ್ಮ ಸಂಸ್ಕೃತಿ ಹಾಳುಮಾಡ್ತಿವೆ. ವಿದ್ಯೆ ಕಲಿಯಲು ಬರುವ ಯುವ ಜನಾಂಗವನ್ನು ದಾರಿತಪ್ಪಿಸಿ ಕುಡುಕರನ್ನಾಗಿ ಮಾಡುತ್ತಿವೆ. ಹೆಣ್ಣು ಗಂಡು ಭೇದವಿಲ್ಲದೆ ಪಬ್‌ಗೆ ನುಗ್ಗುತ್ತಾರೆ. ಮೊದಲು ಪಾರ್ಟಿ ಅಂದರೆ ಹೊಟೆಲ್‌ನಲ್ಲಿ ಸ್ವೀಟು ತಿಂದು ಕಾಫಿ ಕುಡಿಸಿದರೆ ಆಯ್ತು. ಈಗ ಮನಬಂದಂತೆ ಕುಣಿದು ಗಲಾಟೆ ಮಾಡಿ ಮೈಮೇಲಿನ ಬಟ್ಟೆ ಜ್ಞಾನವಿಲ್ಲದೆ, ಎಲ್ಲಿಬೇಕೋ ಅಲ್ಲಿ ಬೀಳುವುದು, ಯಾರಿಗೆ ಯಾರು ಬೇಕು ಅವರು ಒಟ್ಟಾಗಿ ಎಲ್ಲೊ ಒಂದೆಡೆ ಸೇರಿ ಮಜಾಮಾಡೋದು... ಎಚ್ಚರ ಬಂದಾದ ಮೇಲೆ ಮನೆಸೇರೋದು.... ಎಂಥಾ ಸಂಸ್ಕೃತಿ ಬಂತು ನೋಡಿ ನಮ್ಮ ದೇಶಕ್ಕೆ ಇದನ್ನೆಲ್ಲ ಗಮನಿಸಿ ಸಬ್ಬಾರಾಯರು ಬ್ರಾಂಡಿ-ಬೀರ್-ಪಬ್‌ಗಳ ವಿರುದ್ಧ ಸಿಡಿದಿದ್ದು ಅವುಗಳ ಲೈಸೆನ್ಸ್ ರದ್ದುಪಡಿಸಲು ಚಳವಳಿ ಮಾಡಿದರೂ....ಏನೂ ಆಗಲಿಲ್ಲ,....ಅಜ್ಞಾತವ್ಯಕ್ತಿಗಳಿಂದ ಒದೆ ತಿಂದು ಮನೆ ಸೇರಿದರು ಅಷ್ಟೇ....

ಇದನ್ನೆಲ್ಲ ಕೇಳಿ ನನಗೆ ಸುಬ್ಬರಾವ್ ಬಗ್ಗೆ ಅಭಿಮಾನ ಮೂಡಿತು. ಹಾಳಾಗುತ್ತಿರುವ ನಮ್ಮ ಸಂಸ್ಕೃತಿ ಹಾಗೂ ಯುವ ಜನಾಂಗಕ್ಕೆ ಖಂಡಿತವಾಗಿ ಈ ಪಬ್ ಮತ್ತು ಬೀರ ಬ್ರಾಂಡಿ ಅಂಗಡಿಗಳಿಂದ ಮಾತಿಗೆ ಯಾರ ವಿರೋಧವೂ ಇಲ್ಲ. ಹೀಗಿದ್ದರೂ ಅವು ರಾಜಾರೋಷವಾಗಿ ನಡೆಯು

ತ್ತಲೇ ಇವೆ. ದಿನಕ್ಕೆ ಹತ್ತು ಅಂಗಡಿಗಳಾದರೂ ಪ್ರಾರಂಭವಾಗುತ್ತಿವೆ. ಯಾರು ಹಾಳಾದರೇನು? ಬದುಕಿದರೇನು? ಯಾರು ಸತ್ತರೇನು? ಯಾರು ಬದುಕಿದರೇನು? ದೇಶದ ಬಗ್ಗೆ ದೇಶದ ಸಂಸ್ಕೃತಿ ಬಗ್ಗೆ ಪರಿಜ್ಞಾನವಿಲ್ಲ ವೆಂದ ಮೇಲೆ ಕೇವಲ ಹಣಕ್ಕಾಗಿ ಈ ದಂಧೆ ಮಾಡುವವರು ಮನುಷ್ಯರೇ ಎಂದು ಯೋಚಿಸದೆ, ಪ್ರಜೆಗಳ ಹಿತಕ್ಕಾಗಿ ಚುನಾಯಿತರಾದ ರಾಜ ಕಾರಣಿಗಳು ಆ ರಾಜಕಾರಣಿಗಳಿಂದ ರಚಿತವಾದ ಸರಕಾರ, ಪ್ರಜೆಗಳ ಹಿತ ಕ್ಕಾಗಿ ಕೆಲಸ ಮಾಡುತ್ತಿದೆಯೇ? ಅವರ ಉದ್ಧಾರಕ್ಕಾಗಿ ಶ್ರಮಿಸುತ್ತಿ ದೆಯೇ?.... ಕೆಲವೇ ಜನ ಧನಾಢ್ಯ ಸಮಾಜದ ಗುತ್ತಿಗೆದಾರರ ಕೈ ಗೊಂಬೆಯಾಗಿ ಅವರು ನೀಡುವ ಹಣದ ಚೀಲಕ್ಕಾಗಿ ಬಾಯಿಬಿಟ್ಟು ಅವರ ಸೂತ್ರದ ಬೊಂಬೆಯಾಗಿ ಇದ್ದು ಸತ್ತಂತೆ ಇದೆ. ಇಬ್ಬರಿಗೂ ಬೇಕಾದಷ್ಟು ಹಣ. ಈ ಹಣಕ್ಕಾಗಿ ಇಬ್ಬರೂ ಸೇರಿ ಒಂದೊಂದು ಕಡೆ ನಿಂತು ಪ್ರಜೆ ಗಳನ್ನೇ ಹಗ್ಗವನ್ನಾಗಿ ಮಾಡಿ ಬ್ರ್ಯಾಂಡಿ, ಬೀರ್, ಪಬ್ ಮುಂತಾದವು ಗಳಿಗೆ ಸುತ್ತಿ ಮಂಥನ ಮಾಡಿದರೆ ಸಿಗುವದೇನು? ವಿಷ ತಾನೆ? ಜನರಿಗೆ ವಿಷ. ಅವರಿಗೆ ಅಮೃತಸಿಂಚನವಾದ ಹಣ.... ಒಂದೆಡೆ ರಾಕ್ಷಸರು ಇನ್ನೊಂದೆಡೆ ದೇವತೆಗಳು ನಿಂತು ಭೂಮಿಯನ್ನೇ ಕಡಗೋಲನ್ನಾಗಿ ಮಾಡಿ ಆದಿಶೇಷನನ್ನು ಹಗ್ಗವನ್ನಾಗಿ ಮಾಡಿ ಸಮುದ್ರ ಮಂಥನ ಮಾಡಿದಾಗ ವಿಷ....ಹಾಲಾಹಲ.... ಸಮುದ್ರದೊಳಗಿನಿಂದ ಲಕ್ಷ್ಮೀ, ಅಮೃತ, ವಿಷ ಇವೆಲ್ಲ ಒಂದೊಂದಾಗಿ ಮೇಲೆ ಬಂದವು ಎಂಬುದನ್ನು ಓದಿದ್ದೆ.... ಇಂದು ರಾಜಕಾರಣಿಗಳು ಹಾಗೂ ಹಣವಂತರು ಕೂಡಿ ನಡೆಸಿರುವ ವಿಷ ಮಂಥನದಲ್ಲಿ ಏನು ದೊರೆಯುತ್ತಿದೆ? ಕೇವಲ ವಿಷ....ಹಾಲಾಹಲ.... ಕಾಲಕೂಟ... ಅದನ್ನೇ ಜನತೆಗೆ ಉಣ ಬಡಿಸುತ್ತಿದ್ದಾರೆ. ಈ ಜನವೋ.... ಕುರಿಗಳು, ಹೇಡಿಗಳು. ಸತ್ಯ ಮಾತಾಡಲು ಸತ್ಯ ಎದುರಿಸಲು ಆಗದವರು. ಅದನ್ನೇ ಮಹಾಪ್ರಸಾದ ಎಂದು ಸ್ವೀಕರಿಸಿ ಕುಡಿದು ಮಸಣ ಸೇರುತ್ತಿವೆ.... ಥೂ....

ಯೋಚಿಸಿದಷ್ಟೂ ಮನಸ್ಸು ಕಹಿಯಾಯಿತು, ಮೇಲೆದ್ದೆ. ಮಹಾಪುರಷ ಸುಬ್ಬರಾಯರ ದರ್ಶನಕ್ಕೆ ನಡೆದೆ. ಮನೆಮುಂದೆ ನೂರಾರು ಜನ. ಒಳ ಗಡೆ ಮುಖ್ಯ ಮಂತ್ರಿಗಳು ಸುಬ್ಬಾರಾವ್ ಜತೆ ಆಪ್ತಾಲೋಚನೆ ನಡೆಸಿ

ದ್ದರು. ಒಂದರ್ಧ ಗಂಟೆ ನಾನು ಕಾಯಬೇಕಾಯಿತು. ಮುಖ್ಯಮಂತ್ರಿಗಳು ಹೊರಗೆ ಬಂದರು. ಸುಬ್ಬಾರಾವ್ ಅವರಿಗೆ ವಂದಿಸಿ ಗೌರವದಿಂದ ಬೀಳ್ಕೊಟ್ಟರು. ಅಷ್ಟರಲ್ಲಿ ಅಲ್ಲೇ ಇದ್ದ 3-4 ಜನ ಪತ್ರಕರ್ತರು ಅವರನ್ನು ಮುತ್ತಿದರು. ಮುಖ್ಯಮಂತ್ರಿಗಳು ಬಂದದ್ದೇಕೆ? ಏನು ವಾರ್ತಾಲಾಪ ನಡೆಯಿತು. ನೀವು ಪಾರ್ಟಿಅಧ್ಯಕ್ಷರಾಗುತ್ತೀರೋ ಹೇಗೆ? ಮುಂತಾದ ಎಲ್ಲದಕ್ಕೂ ಮುಗುಳ್ನಗೆ ನಕ್ಕು ಉತ್ತರಿಸಿದ ಸುಬ್ಬಾರಾವ್ ಅವರೆಲ್ಲರ ಊಹೆ ತಳ್ಳಿಹಾಕಿದರು. ಪಬ್, ಬಾರ್‌ಗಳ ಬಗ್ಗೆ ನನ್ನೊಂದಿಗೆ ವಿಚಾರ ವಿಮರ್ಶೆ ನಡೆಸಲು ಬಂದಿದ್ದರು. ನಾನವರಿಗೆ ಸ್ಪಷ್ಟವಾಗಿ ಹೇಳಿರುವೆ ನಮ್ಮ ದೇಶ ಮಹಾನ್ ದೇಶ. ಸಂಸ್ಕೃತಿ ಆಚಾರ ವಿಚಾರಗಳಿಗೆ ಆದರ್ಶ ಪ್ರಾಯವಾದುದು. ಪರದೇಶದಿಂದ ಸಾವಿರಾರು ಜನ ನಮ್ಮಲ್ಲಿಯ ಆಚಾರ, ವಿಚಾರ, ಸಂಸ್ಕೃತಿ ಕಲಿತುಕೊಂಡು ಹೋಗುತ್ತಾರೆ. ಹೀಗಿರುವಾಗ ಇತ್ತೀಚಿಗೆ ಬಂದಿರುವ ಈ ಅನಿಷ್ಟ ಸಂಪ್ರದಾಯದಿಂದಾಗಿ ನಾವು ತಲೆಯೆತ್ತದಂತೆ ಆಗಿದೆ. ಒಂದು ಕಾಲಕ್ಕೆ ಚಹ ಕುಡಿದವರನ್ನೂ ಒಳಗೆ ಕರೆಯುತ್ತಿರಲಿಲ್ಲ. ಸೆರೆಸೇಂದಿ ಕುಡಿದವರನ್ನು ಊರಿನಿಂದ ಹೊರಗಿಡುತ್ತಿದ್ದರು. ಈಗೇನಾಗ್ಗಿದೆ? ಒಂದೊಂದು ಓಣಿಗೆ ಹತ್ತು ಚಹದಂಗಡಿಗಳು ಐದಾರು ಬೀರ್ ಬ್ರ್ಯಾಂಡಿ ಅಂಗಡಿಗಳು. ಮನುಷ್ಯ ಇವುಗಳಿಗೆ ದಾಸಾನು ದಾಸನಾಗಿದ್ದಾನೆ. ಮನೆಗಳಲ್ಲಿ ಪ್ರೀತಿ - ಪ್ರೇಮ - ಸುಖ ಶಾಂತಿ ಎಲ್ಲಾ ಹಾಳಾಗಿ ಮನೆ ಮಸಣಗಳಾಗುತ್ತಿವೆ. ಕಷ್ಟಪಟ್ಟು ರಕ್ತ ಸುರಿಸಿ ನಾಲ್ಕು ದುಡ್ಡು ಗಳಿಸಿದ ಬಡವ ಎಲ್ಲಾ ಹಣ ಇಲ್ಲೇ ಸುರಿದು ಮನೆಗೆ ಹೋಗುತ್ತಾನೆ. ಜಮಾಖರ್ಚು. ನಂಬರ ಟು ಧಂಧೆಯಿಂದ ಸಿಕ್ಕಾಪಟ್ಟೆ ಹಣಗಳಿಸಿದ ಹಣವಂತರ ಮಕ್ಕಳು ಅದೇ ಹಣ ತೆಗೆದುಕೊಂಡು ಬಂದು ಇಲ್ಲಿ ಸುರಿಯುತ್ತಾರೆ.

ತಿಂದು ಕುಡಿದು ಸೊಕ್ಕಿದ ಅವರು ಸಭ್ಯತೆಯನ್ನು ಗಾಳಿಗೆ ತೂರಿ ಸಂಸ್ಕೃತಿಯನ್ನು ಪಾತಾಳಕ್ಕೆ ತಳ್ಳುತ್ತಿದ್ದಾರೆ. ತಮ್ಮ ವಿಷಮವಾಸನೆಗಳಿಗೆ ನಿರ್ಬಲ ವರ್ಗದವರನ್ನೂ ಬಲಿಪಶುಗಳನ್ನಾಗಿ ಮಾಡುತ್ತಿದ್ದಾರೆ. ಧನಾಢ್ಯ ಕುಲೀನ ಮನೆತನದ ಹೆಣ್ಣುಮಕ್ಕಳು ಬೀದಿಗೆ ಬಂದು ಬೆತ್ತಲೆ ತಿರುಗಿ ಭಾರತೀಯ ಪರಂಪರೆ, ಗೌರವಗಳನ್ನೇ ಬೀದಿಗಿಟ್ಟು ಪ್ರತಿಯೊಬ್ಬರೂ ತಲೆ

ತಗ್ಗಿಸುವಂತೆ ಮಾಡುತ್ತಿದ್ದಾರೆ....ಇದಾವುದರ ಪರಿವೆ ಇಲ್ಲದೇ ಹಣ ಗಳಿಸ ಲೆಂದೇ ಪಣ ತೊಟ್ಟಿರುವ ಒಂದು ಗುಂಪು, ರಾಜಕಾರಣಿಗಳ ಜೊತೆ ಶಾಮೀಲಾಗಿ ಹಗಲು ರಾತ್ರಿ ಈ ಕಾಲಕೂಟ ವಿಷವನ್ನು ಜನತೆಗೆ ಉಣ ಬಡಿಸುವಲ್ಲಿ ಶ್ರಮಿಸುತ್ತಿದ್ದಾರೆ. ವನಗೆ ಬಹಳ ನೋವಾದ್ದರಿಂದ ಇದರ ಬಗ್ಗೆ ಮಾತಾಡಲು ಮುಖ್ಯಮಂತ್ರಿಗಳಿಗೆ ಕೇಳಿಕೊಂಡಿದ್ದೆ. ಅವರು ದೊಡ್ಡಮನುಷ್ಯರು, ತಾವೇ ನನ್ನಲ್ಲಿಗೆ ಬಂದುಬಿಟ್ಟರು. ಇಂದು ಸಂಜೆ ಯೊಳಗಾಗಿ ಎಷ್ಟು ಸಾಧ್ಯವೋ ಅಷ್ಟು ಅಂಗಡಿಗಳ ಲೈಸೆನ್ಸ್ ರದ್ದುಪಡಿಸಿ ಅವುಗಳಿಗೆ ಬೀಗ ಹಾಕಿಸುವ ಭರವಸೆ ಕೊಟ್ಟಿದ್ದಾರೆ....ಇದು ವಿಷಯ.

ಪತ್ರಿಕೆಗಳಿಗೆ ಇಷ್ಟು ವಿಷಯ ಸಿಕ್ಕರೆ ಕೇಳಬೇಕೆ? ಅವರಿಗೆ ಸುಗ್ರಾಸ ಭೋಜನ. ಅವರು ಹೊರಟುಹೋದ ಮೇಲೆ ಭೆಟ್ಟಿಯಾಗಲು ಬಂದ ವರ ಸರದಿ. ಒಬ್ಬೊಬ್ಬರದು ಒಂದೊಂದು ಗೋಳಿನ ಕಥೆ. ಅವರೆಲ್ಲರಿಗೆ ಒಂದೊಂದು ಪರಿಹಾರ ಸೂಚನೆ ಸೂಚಿಸುತ್ತಾ ನನ್ನೆಡೆ ನೋಡಿದರು. ನಾನು ನಮಸ್ಕರಿಸಿ ‹ನಂಜುಂಡಪ್ಪ ಕಳಿಸಿದರು› ಎಂದೆ. ಓಹ್ ಬನ್ನಿ....ಎಂದು ಒಳಗೆ ನಡೆದರು. ನಾನು ಹಿಂಬಾಲಿಸಿದೆ. ಅವರ ಖಾಸಾ ಕೋಣೆಯಲ್ಲಿ ಕುಳಿತು ಮೊದಲು ಗೋವಿಂದರಾಯರು ನನಗೆ ಬರೆದುಕೊಟ್ಟ ಪತ್ರ ಅವರ ಕೈಯಲ್ಲಿರಿಸಿದೆ. ಅದನ್ನವರು ಓದಿಕೊಂಡರು. ಮನ ಪ್ರಫುಲ್ಲಿತವಾಯಿತು. ಮತ್ತೆ ನಂಜುಂಡಪ್ಪ ಕಳಿಸಿದರು ಎಂದಿರಲ್ಲ, ಎಂದು ಕೇಳಿದರು. "ಹೌದು ಅವರು ನನ್ನ ಸ್ನೇಹಿತರು" ಅನ್ನುತ್ತ ಅವರು ಕೇಳುವ ಮುನ್ನವೇ ಪೀಠಿಕೆ ಬೆಳೆಸದೆ ನೇರವಾದ ವಿಷಯಕ್ಕೆ ಬಂದು ಅಪ್ಸರಾ ಉರ್ಫ್ ಮಂದಾಕಿನಿ ಯಿಂದ ಫಲಿಸಿದ ಎಲ್ಲಾ ವಿಷಯ ತಿಳಿಸಿ ಸಧ್ಯ ನಾನೀಗ ನೇಣುಗಂಬಕ್ಕೇ ರಲು ಸಿದ್ದನಾಗಿ ನಿಂತಿದ್ದೇನೆ....ಏನೂ ತಪ್ಪು ಮಾಡದೇ ನಿರಪರಾಧಿಯಾಗಿ ದ್ದರೂ ಅಪರಾಧಿಯಾಗಿದ್ದೇನೆ....ಸಧ್ಯ ನನಗೆ ನಿಮ್ಮ ಸಹಾಯ ಬೇಕು, ಹೇಗಾದರೂ ಮಾಡಿ ನ್ನನ್ನನ್ನು ಉಳಿಸಿ" ಎಂದು ಬೇಡಿಕೊಂಡೆ.

ಐದಾರು ನಿಮಿಷ ಅವರು ಮೂಕರಾಗಿ ಕುಳಿತರು. ತಲೆ ಕೆಳಗೆ ಹಾಕಿದ ಅವರು ನನ್ನೊಡನೆ ಮಾತಾಡಲು ತಲೆ ಮೇಲೆತ್ತಿದಾಗಕೆನ್ನೆ ಒದ್ದೆ ಯಾಗಿತ್ತು. "ನನ್ನ ಮಗಳಿಂದಾಗಿ ನೀವು ಅಪಾರ ಯಾತನೆ ಅನುಭವಿಸಿ ದ್ದೀರಿ. ದಯುವಿಟ್ಟು ಕ್ಷಮಿಸಿ. ನಾನು ನಿಮ್ಮ ಅಪರಾಧಿ....ನನಗೆ ಶಿಕ್ಷೆ

ನೀಡಿ ಎಂದೆನ್ನುತ್ತಾ ಅಳತೊಡಗಿದರು. ತಬ್ಬಿಬ್ಬಾಗಿ ನಾನು ಹಾಗೆ ಕುಳಿತಿದ್ದೆ. ಸ್ವಲ್ಪಹೊತ್ತಿನಲ್ಲಿ ಸಮಾಧಾನ ತೆಗೆದುಕೊಂಡು ಹೇಳಿದರು.

"ಪರಿಹಾರವೇನು ನನ್ನಲ್ಲಿ ಇಲ್ಲ....ಪ್ರಯತ್ನಿಸಬಲ್ಲೆ. ಈಗ ಮಂದಾಕಿನಿ ಎಲ್ಲಿದಾಳೆ"

"ನನಗೆ ಗೊತ್ತಿಲ್ಲ. ನಿಮ್ಮ ಬಳಿ ಬಂದಿರಬಹುದು ಎಂದು ತಿಳಿದಿದ್ದೆ"

"ಅವಳು ನನ್ನ ಮನೆಬಿಟ್ಟು ಒಂಭತ್ತು ವರ್ಷಗಳಾದವು. ಮತ್ತೆ ದರ್ಶನ, ನೀವು ಒಂದು ಕೆಲಸಮಾಡಿ ನಾಳೆ ಸಂಜೆ ಎಲ್ಲಿ ಸಿಗುತ್ತೀರಿ?

"ನೀವು ಹೇಳಿದಲ್ಲಿ"

"ಎಲ್ಲಿ ಇಳಿದುಕೊಂಡಿದ್ದೀರಿ"

ನಾನು ಕಮಲ ಲಾಡ್ಜಿನ ವಿಳಾಸ ಕೊಟ್ಟೆ. ಕಿಲಾರಿ ರೋಡು, ಬಳೇ ಪೇಟೆ ಬುಕ್‌ಹೌಸ್ ಎದುರು. ಅವರು ಹಾಳೆ ಮೇಲೆ ವಿಳಾಸ ಬರೆದು ನನ್ನ ಕೈಗಿಟ್ಟು ಹೇಳಿದರು.

"ಸಧ್ಯ ನೀವು ಹೋಗಿ ಕಮಲದಲ್ಲೇ ಇರಿ. ರಾತ್ರಿ ರೂಮು ಖಾಲಿ ಮಾಡಿ ಈ ವಿಳಾಸಕ್ಕೆ ಹೋಗಿ. ಎಲ್ಲಾ ವ್ಯವಸ್ಥೆ ಆಗುತ್ತದೆ. ನನ್ನಿಂದ ಸೂಚನೆ ಬರುವವರೆಗೂ ಅಲ್ಲೇ ಇರಿ. ನಾನು ಏನಾದರೂ ಒಂದು ದಾರಿ ಹುಡುಕಿರುತ್ತೇನೆ. ಮೊದಲು ನಿಮ್ಮ ರಕ್ಷಣೆ ಅವಶ್ಯ.

ಅವರ ಮಾತಿಗೆ ಒಪ್ಪಿಕೊಂಡು ನಮಸ್ಕರಿಸಿ ನಾನು ಮೇಲೆದ್ದೆ.

ರೂಮಿಗೆ ಬಂದಾಗ ನಂಜುಂಡಪ್ಪ ನನಗಾಗಿ ಕಾಯುತ್ತಿದ್ದ. ಏನೋ ವಿಷಯ ತಿಳಿಸಲು ಆತ ಉತ್ಸುಕನಾಗಿದ್ದ ಎಂಬುದು ಎದ್ದು ಕಾಣುತ್ತಿತ್ತು. ನನ್ನೊಂದಿಗೆ ಮೇಲೆ ಬಂದು ರೂಮು ಸೇರಿದ. ತಕ್ಷಣವೇ ಬಾಗಿಲು ಭದ್ರ ವಾಗಿ ಮುಚ್ಚಿ ಹೇಳಿದ.

"ಸದಾನಂದ ಪ್ರಳಯಾಂತಕ"

"ಏಕೆ? ಏನಾಯಿತು?"

"ಛೆ, ಛ. ನನಗೆ ನಂಬಿಕೆಯೇ ಆಗ್ತಾ ಇಲ್ಲ.... ಅವನಿಗಿಲ್ಲಿ ನಾಗರಾಜ ಎಂದು ಹೆಸರು."

"ವಿಷಯವೇನೆಂದು ಮೊದಲು ಹೇಳಿ" ನಂಜುಂಡಪ್ಪ ಹೇಳಲಾರಂಭಿಸಿದ.

ಸದಾನಂದ ಹೆಡ್ ಕಾನ್ಸ್ಟೇಬಲ್. ಆಗಿದ್ದ ನಾಗರಾಜನಾಗಿ ಮಂದಾಕಿನಿಗೆ ಅಪ್ಸರೆ ಎಂದು ಹೊಸ ಹೆಸರು ಇಟ್ಟದ್ದು ಅವನೇ. ಅಪ್ರತಿಮ ರೂಪವತಿಯಾದ ಅವಳ ಮೇಲೆ ಅವನ ಮೇಲಧಿಕಾರಿಗಳ ಕಣ್ಣು ಬಿತ್ತು. ಒಂದುದಿನ ಮಂದಾಕಿನಿಗೆ ತಿಳಿಯದಂತೆ ಅವಳಿಗೆ ಮೋಸಮಾಡಿ ಸ್ವತಃ ತಾನೇ ಹಿರಿಯ ಅಧಿಕಾರಿಗೆ ಅವಳನ್ನು ಒಪ್ಪಿಸಿದ. ಲಕ್ಷಾವಧಿ ರೂಪಾಯಿಗಳಿಸಿದ. ಅಂದಿನಿಂದ ಇದೇ ಅವನ ವೃತ್ತಿಯಾಯಿತು. ಅಧಿಕಾರಿಗಳು, ರಾಜಕಾರಣಿಗಳು ಅವನ ಮಿತ್ರರಾದರು. ಶ್ರೀಮಂತ ಬಡಾವಣೆಯಲ್ಲಿ ದೊಡ್ಡದಾದ ಬಂಗಲೆ ಬಾಡಿಗೆ ಹಿಡಿದ. ಮಂದಾಕಿನಿ ಮನೆ ಒಡತಿ. ಅಲ್ಲಿ 8–10 ಹುಡುಗಿಯರನ್ನು ತಂದಿಟ್ಟ. ಬಿಸಿನೆಸ್ ಆರಂಭಿಸಿದ ಅವನಿಗೆ ಸಹಾಯಕನಾದವ ಜಾನ್. ಆತ ಇನ್ನೂ ಒಂದು ಹೆಜ್ಜೆ ಮುಂದೆ ಹೋದ. ರಾಜಕಾರಣಿಗಳನ್ನು ಹೇಗೆ ಬುಟ್ಟಿಗೆ ಹಾಕಿಕೊಂಡನೋ ತಿಳಿಯದು. ನೋಡ ನೋಡುತ್ತಿರುವಂತೆ ರಾಜಧಾನಿಯಲ್ಲಿ ತಲೆ ಎತ್ತಿದ ಬೀರ್, ಬ್ರ್ಯಾಂಡಿ ಪಬ್ ಬಾರ್‌ಗಳಿಗೆ ಆತ ಒಡೆಯನಾದ. ಸದಾನಂದ ಪಾಲುಗಾರ. ಒಮ್ಮೆ ಏನಾಯಿತೋ ಏನೋ ಮಂದಾಕಿನಿಗೂ ಜಾನ್‌ನಿಗೂ ವ್ಯಾಜ್ಯವಾಯಿತು. ಸದಾನಂದ ಜಾನ್‌ನ ಪಕ್ಷ ಕಟ್ಟಿದ. ಅಂದೇ ಮಂದಾಕಿನಿ ಅವರಿಗೆ ಕೈಕೊಟ್ಟು ಓಡಿಹೋದಳು. ಅದಾದ ಮೂರು ದಿನಕ್ಕೆ ಸದಾನಂದ ಪರಾರಿಯಾದ. ಆತ ಹೋಗುವ ಮುನ್ನ ಸುಮಾರು ಐದಾರು ಕೋಟಿ ರೂಪಾಯಿ ಬೆಲೆ ಬಾಳುವ ಜಾನ್‌ಗೆ ಸೇರಿದ ಚಿನ್ನದ ಬಿಸ್ಕೆಟ್, ವಜ್ರ ಅಪಹರಿಸಿಕೊಂಡು ಹೋಗಿದ್ದಾನೆ ಎಂಬ ಸುದ್ದಿ. ಕಂಗಾಲಾದ ಜಾನ್ ಕಂಪ್ಲೇಂಟ್ ಮಾಡುವಂತಿಲ್ಲ. ಹಾಗೆ ಔಪಚಾರಿಕವಾಗಿ ಕಂಪ್ಲೆಂಟ್ ನೀಡಿದ್ದರಿಂದ ಪೊಲೀಸರು ಆತ ಕೊಡುವ ಭಾರಿ ಬಹುಮಾನದ ಆಸೆಗೆ ಸದಾನಂದನನ್ನು ಹುಡುಕುತ್ತಿದ್ದಾರೆ"

"ಸದಾನಂದನ ಕೊಲೆಗೆ ಜಾನ್ ಕಾರಣ ಹಾಗಿದ್ದರೆ...." ನಾನು ನುಡಿದೆ.

"ಖಂಡಿತವಾಗಿ....ಕೊಲೆಯ ಉದ್ದೇಶವೂ ಸ್ಪಷ್ಟವಾಗಿದೆ. ಜಾನ್‌ನಿಂದ ಅಪಹರಿಸಿದ ಐದಾರು ಕೋಟಿ ಬೆಲೆ ಬಾಳುವ ವಜ್ರ ಹಾಗೂ ಚಿನ್ನದ ಬಿಸ್ಕೆಟ್"

"ನನಗೆ ಇನ್ನೊಂದು ಸಂಶಯ....ಅಪ್ಸರೆ ಮತ್ತು ಸದಾನಂದ ಇಬ್ಬರೂ ಸೇರಿ ಏಕೆ ಪ್ಲಾನ್ ಮಾಡಿರಬಾರದು. ಮೊದಲು ಆಕೆ, ಆಮೇಲೆ ಸದಾನಂದ ಪರಾರಿಯಾದರು. ನಂತರ ಇಬ್ಬರಿಗೂ ನಮ್ಮ ಮನೆಯಲ್ಲಿ ಕೂಡುವ ಬಗ್ಗೆ ಒಪ್ಪಂದವೇಕೆ ಆಗಿರಬಾರದು ?"

"ಅದೂ ಸಾಧ್ಯವಿದೆ. ನಿಮ್ಮ ತರ್ಕ ನಿಜವಾಗಿದ್ದರೆ ಸದಾನಂದನನ್ನು ಕೊಂದು ನಿಮ್ಮ ಮೇಲೆ ಅಪವಾದ ಬರುವಂತೆ ಮಾಡಿದವರಾರು ?"

ನನ್ನಲ್ಲಿ ಉತ್ತರವಿರಲಿಲ್ಲ. ಅವರೇ ಉತ್ತರಿಸಿದರು. "ನನಗೆನಿಸುವ ಮಟ್ಟಿಗೆ ರಾಜಧಾನಿಯಲ್ಲಿ ಜಾನ್ ಹಾಗೂ ಅವರ ಸಂಗಡಿಗರ ಹೆಸರಿನಿಂದ ಆರಂಭವಾಗಿರುವ ನೂರಾರು ಪಬ್, ಬೀರ್, ಬ್ರಾಂಡಿ ಅಂಗಡಿಗಳಿಗೆ ಗುಪ್ತ ಯಜಮಾನ ಬೇರೊಬ್ಬನಿದ್ದಾನೆ. ಆತ ಸಾರ್ವಜನಿಕರ ಎದುರಿಗೆ ಬರಲು ಒಪ್ಪದೇ ಜಾನ್ ಹಾಗೂ ಸದಾನಂದರನ್ನು ಮುಂದೆ ಮಾಡಿದ್ದ.... ಸದಾನಂದ ಕೈಕೊಡುತ್ತಲೂ ಜಾನ್ ಅವನ ಹಿಂದೆ ಬಿದ್ದ. ಸದಾನಂದನನ್ನು ಹಿಡಿದು ಮೂಲು ವಶಪಡಿಸಿಕೊಂಡ. ಹಣ್ಣು ತಿಂದ ಮೇಲೆ ಸಿಪ್ಪೆಯದೇನು ಕೆಲಸ ? ಸದಾನಂದನನ್ನು ಮುಗಿಸಿ ಸೂಟ್‌ಕೇಸಿನಲ್ಲಿಟ್ಟು ಪರಾರಿಯಾದ."

"ಸೂಟ್‌ಕೇಸು ನನ್ನ ಬಳಿಯಲ್ಲಿತ್ತು. ಜಾನ್ ಅದರಲ್ಲಿ ಸದಾನಂದನ ಶವ ಹೇಗೆ ಇರಿಸಿದ...."

"ಒಂದೇ ಉತ್ತರ. ಅವನಿಗೆ ಅಪ್ಸರಾ ಸಹಾಯ ಮಾಡಿದ್ದಾಳೆ. ಅವಳ ಸಹಾಯದಿಂದ ಜಯಚಂದ್ರನ ಕೋಣೆಯಲ್ಲಿ ಸದಾನಂದನ ಕೊಲೆ ಮಾಡಿದ್ದಾರೆ. ಅವರ ಬಳಿ ಇರುವ ಬೀಗದಿಂದ ಸೂಟ್‌ಕೇಸು ತೆರೆದು ಅದರಲ್ಲಿದ್ದ ಎಲ್ಲಾ ವಜ್ರ-ಚಿನ್ನ ತೆಗೆದು ಅದರಲ್ಲಿ ಶವವಿರಿಸಿದ್ದಾನೆ. ಅಪ್ಸರಾ ಆ ಸೂಟ್‌ಕೇಸಿಗೆ ಬೀಗ ಹಾಕಲು ಮರೆತಿರಬೇಕು. ಅಥವಾ ಬೇಕಂತಲೇ ಬಿಟ್ಟಿರಬೇಕು....ಹೀಗಾಗಿ ಅಪವಾದ ನಿಮ್ಮ ಮೇಲೆ ಬಂದಿದೆ. ಆಕೆ ಪರಾರಿಯಾಗಿದ್ದಾಳೆ.

ನಂಜುಂಡಪ್ಪನ ತರ್ಕ ಸರಿ ಎನಿಸಿತು. ವಾಂತಿ ಮಾಡಿಕೊಳ್ಳುವ ನೆಪ ಮಾಡಿ ಮಲಗಿಕೊಂಡಿದ್ದ ಅಪ್ಸರಾ ಹೊರಗೆ ಓಡಿದ್ದಾಳೆ....ಈ ಎಲ್ಲಾ ನಾಟಕದ ಪಾತ್ರಧಾರಿ ಹಾಗೂ ಸೂತ್ರಧಾರಿ ಆವಳೇ....

ನಾನು ಕರಕರ ಹಲ್ಲು ಕಡಿದೆ....ಸುಂದರ ಪುಷ್ಪವೆಂದು ಮೂಸಲು ಹೋದರೆ ಅದು ಸರ್ಪವಾಗಿ ಕಚ್ಚಿದಂತೆ ಅಪ್ಸರಾ ನನ್ನ ಪಾಲಿಗೆ ಹೂವಾಗದೇ ಹಾವಾದಳು.

ನಂಜುಂಡಪ್ಪ ನಾಲ್ಕಾರು ಫೋಟೋ ಸಹ ತಂದಿದ್ದರು. ಅವನ್ನೂ ನನ್ನ ಮುಂದಿಟ್ಟರು. ನಾನು ಎರಡರಲ್ಲಿ ಸದಾನಂದನನ್ನು ಗುರುತಿಸಿದೆ. ಗಡ್ಡದ ಮನುಷ್ಯನನ್ನು ನೋಡಿ ಬೆಚ್ಚಿದೆ....ಅವನೇ ಗೋಕರ್ಣದಲ್ಲಿ ನನ್ನ ಹಿಂದೆ ಬಿದ್ದು ಗುದ್ದು ಕೊಟ್ಟವ, ಕೇಳಿದೆ.

"ಇವನಾರು ?"

"ಜಾನ್....ಸದಾನಂದ ಅಪ್ಸರೆಯರ ಗೆಳೆಯ. ಒಂದು ದೃಷ್ಟಿಯಿಂದ ಛೋಟಾ ಬಾಸ್"

"ನನಗೀಗ ವಕೀಲರ ನೆರವು ತುಂಬಾ ಅಗತ್ಯವೆನಿಸುತ್ತಿದೆ. ನಮ್ಮ ಬಳಿ ಇದ್ದ ಸೂತ್ರಗಳನ್ನೇ ಅವರ ಮುಂದಿಟ್ಟರೆ ನನ್ನ ಬಿಡುಗಡೆಗೊಂದು ದಾರಿಯಾಗಬಹುದು"

"ಹೌದು....ಆದರದು ಶೀಘ್ರ ಪರಿಣಾಮ ಮಾಡಲಾರದು. ದೀರ್ಘ ಸಮಯ ಹಿಡಿದರೂ ಹಿಡಿಯಬಹುದು....ರಾಜಕಾರಣಿಗಳಿಂದಾದರೆ ಶೀಘ್ರ ಪರಿಹಾರ ದೊರೆಯಬಹುದು."

"ಸರಿ ಹಾಗಾದರೆ....ಸುಬ್ಬಾರಾವ್ ಅವರನ್ನು ಬಿಡುವುದೇ ಇಲ್ಲ. ಅವರ ಮನಕರಗುವಂತೆ ಮತ್ತೆ ಎಲ್ಲಾ ವಿಷಯ ತಿಳಿಸಿ ಉಪಕರಿಸುವಂತೆ ಬೇಡಿಕೊಳ್ಳುತ್ತೇನೆ.

"ನಿಮ್ಮ ಮಾತು ಸರಿ....ನಾಳೆ ಬೆಳಿಗ್ಗೆ ಅವರು ಹೇಳಿದ ವಿಳಾಸಕ್ಕೆ ಹೋದರಾಯಿತು. ನಾನೂ ನಿಮ್ಮ ಜೊತೆ ಬರುತ್ತೇನೆ...."

"ದಯವಿಟ್ಟು ಹಾಗೆ ಮಾಡಿ. ನನಗೂ ಸ್ವಲ್ಪ ಧೈರ್ಯ ಬರುತ್ತದೆ."

'ಠಳ್' ಎಂಬ ಸಪ್ಪಳ ಹೊರಗಿನಿಂದ ಬಂತು....ಕಿಟಕಿಯ ಹಿಂದೆ

ಯಾರೋ ಕದ್ದು ನಮ್ಮ ಮಾತು ಆಲಿಸುತ್ತಿದ್ದಾರೆ, ಸಂಶಯ. ನಾನು ನಂಜುಂಡಪ್ಪನ ಮುಖ ನೋಡಿದೆ. ಆತ ಸನ್ನೆ ಮಾಡಿ ನನಗೆ ಮೌನವಾಗಿರುವಂತೆ ಸೂಚನೆ ನೀಡಿ ಸಾವಧಾನವಾಗಿ ಎದ್ದು ಬಾಗಿಲು ಪಕ್ಕದ ಕಿಟಕಿ ಬಳಿ ಬಂದ. ಯಾರೂ ಇರಲಿಲ್ಲ. ಪಕ್ಕದ ಟೀಪಾಯ್ ಮೇಲಿದ್ದ ಹೂದಾನಿ ಬಿದ್ದು ಒಡೆದು ಹೋಗಿತ್ತು. ನಾನೂ ಹೊರಗೆ ಬಂದೆ. ಮೇಲಿನಿಂದ ಕೆಳಗೆ ಇಣುಕಿದೆ. ರಸ್ತೆ ಒಂದು ಬದಿಗೆ ಬಿರುಬಿರನೆ ನಡೆಯುತ್ತಿದ್ದ ವ್ಯಕ್ತಿಯೊಂದನ್ನು ಕಂಡು ಬೆಚ್ಚಿದೆ....ಆತ ...ಹೌದು....ಬಳ್ಳಾರಿಯಲ್ಲಿ ನಾನು ಲಾಡ್ಜಿನಲ್ಲಿರುವಾಗ ಎದುರುಗಡೆ ಆಟೋಸ್ಟ್ಯಾಂಡಿನಲ್ಲಿ ನಿಂತು ನನ್ನ ಚಲನ ವಲನ ನಿರೀಕ್ಷಿಸುತ್ತಿದ್ದಾತ....

ಆತ ಇಲ್ಲಿಗೂ ಬಂದಿದ್ದ....ನಾನು ಜರ್‍ರನೆ ಬೆವೆತು ನೆಲಕ್ಕೆ ಕುಸಿದೆ.

## 10

ಬೆಳಿಗ್ಗೆ ಬರುವುದಾಗಿ ಹೇಳಿ ನಂಜುಂಡಪ್ಪ ಮನೆಗೆ ಹೋದರು. ರೂಮಿನ ಕಿಟಕಿ ಬಾಗಿಲು ಭದ್ರವಾಗಿ ಮುಚ್ಚಿ ಎಚ್ಚರವಾಗಿರುವಂತೆ ಸೂಚನೆ ನೀಡಿ ಬೆಳಿಗ್ಗೆ ಏಳು ಗಂಟೆಗೆ ಅವರು ಬಂದಾದ ಮೇಲೆಯೇ ಬಾಗಿಲು ತೆರೆಯುವಂತೆ "ವಾರ್ನಿಂಗ್" ಮಾಡಿದ್ದರು. ಅದರಂತೆ ನಾನು ರೂಮಿನ ಬಾಗಿಲು ಮುಚ್ಚಿ ಬೋಲ್ಟ್ ಏರಿಸಿದೆ. ಕಿಟಕಿ ಮುಚ್ಚಿ ಮಂಚದ ಮೇಲೆ ಆಸೀನನಾದೆ. ನಡೆದು ಹೋದ ಘಟನೆಗಳು ಒಂದೊಂದಾಗಿ ಸುರುಳಿ ಬಿಚ್ಚ ತೊಡಗಿದವು.

ಅಪ್ಸರೆಯ ನೆನಪಾದಾಗ ಏನೋ ಒಂದು ಬಗೆಯ ಮಧುರ ವೇದನೆ. ಅವಳ ಸಹವಾಸ, ಸಾನಿಧ್ಯ, ಇಷ್ಟವಾದರೂ ಅವಳು ನನ್ನೊಡನೆ ನಡೆದುಕೊಂಡ ರೀತಿ ಅಷ್ಟೇ ಕೆಟ್ಟದ್ದು. ನನ್ನನ್ನು ಮೃತ್ಯು ಕೂಪದಲ್ಲಿ ನೂಕಿ ತಾನು ಸಂಪತ್ತಿನ ಸುಪ್ಪತ್ತಿಗೆ ಏರಿದಳಲ್ಲ....ಒಮ್ಮೆಲೆ ಆಕೆ ನನ್ನ ಅಪ್ಪಿಕೊಂಡದ್ದು, ಉರುಳಾಡಿದ್ದು, ನನ್ನ ವಿಳಾಸದ ಕಾರ್ಡಿನೊಂದಿಗೆ ಬಂದಾಗ ಹೇಳಿದ್ದು ನೆನಪಾಯಿತು. "ಈ ಕಾರ್ಡನ್ನು ನಿಮಗೆ ಅರಿಯದಂತೆ ನಿಮ್ಮಿಂದ ಅಪಹರಿಸಿರುವೆ. ಆದರಂತೆ ನಿಮ್ಮ ಬಳಿ ನನ್ನದೊಂದು ವಸ್ತು ಬಿಟ್ಟು

ಹೋಗುತ್ತಿರುವೆ. ಸಮಯ ಬಂದಾಗ ಅದೇನೆಂಬುದು ಅರ್ಥವಾಗುತ್ತದೆ.

ಆ ವಸ್ತು ಏನಿರಬಹುದು ? ತಟಕ್ಕನೆ ಎದ್ದು ಕುಳಿತೆ. ಅಂದಿನ ಸನ್ನಿವೇಶ, ಅನಂತರ ನಡೆದ ಘಟನೆ, ವೇಷ ಭೂಷಣ ನೆನಪು ಮಾಡಿಕೊಂಡೆ. ನನ್ನ ಬ್ಯಾಗಿನಲ್ಲಿ ಏನೂ ದೊರೆಯುಲಾರದೆಂದು ಅರಿತಿದ್ದರೂ ಸಹ ಸುಮ್ಮನೆ ಬ್ಯಾಗನ್ನೆಲ್ಲ ಜಾಲಾಡಿಸಿದೆ. ಪರ್ಸ್ ಬಿಚ್ಚಿದೆ. ಬಟ್ಟೆ ಬರೆ ನೋಡಿದೆ. ಏನೂ ದೊರೆಯಲಿಲ್ಲ. ಅಪ್ಸರೆಗೆ ಸೇರಿದ ಯಾವ ವಸ್ತುವೂ ಕಣ್ಣಿಗೆ ಬೀಳಲಿಲ್ಲ. ಎಲ್ಲಾ ನನ್ನೆದುರು ಹರಡಿಕೊಂಡು ಗಂಟೆಗಟ್ಟಲೇ ನೋಡುತ್ತ ಕುಳಿತೆ.

ರಾತ್ರಿ ಎರಡಾದರೂ ಮಲಗಲಾಗಲಿಲ್ಲ. ಸಣ್ಣಗೆ ತಲೆನೋವು ಕಾಣಿಸಿಕೊಂಡಿತು. ನಿರಾಶೆಯಿಂದ ಸಾಮಾನುಗಳನ್ನೆಲ್ಲ ಬ್ಯಾಗಿಗೆ ತುಂಬಲಾರಂಭಿಸಿದೆ. ಅಂದು ಧರಿಸಿದ್ದ ಜೀನ್ಸ್....ಎತ್ತಿ ಇಡುವಾಗ ಕೈಗೆ ಒರಟು ಒರಟಾಗಿ ಏನೋ ತಗಲಿದಂತಾಯಿತು. ದಿಟ್ಟಿಸಿದೆ. ಅರೆ "For Love Only" ಎಂದಿದ್ದ ಲೇಬಲ್ ಇರಲಿಲ್ಲ. ಗೋವಾದಿಂದ ನನ್ನ ಸ್ನೇಹಿತನೊಬ್ಬ ಅದನ್ನು ತಂದುಕೊಟ್ಟಿದ್ದ. ಟೇಲರಿಗೆ ಹೇಳಿ ಆ ಲೇಬಲ್ ಹಿಪ್ಸ್ ಮೇಲೆ ಬರುವಂತೆ ಹೊಲಿಸಿದ್ದೆ. ಆ ಲೇಬಲ್ ಕಾಣಲಿಲ್ಲ. ಅದರ ಬದಲು "ಅಪ್ಸರಾ ಸಾರೀಸ್....ಕಾಂಟ್ಯಾಕ್ಟ್ ಫೋನ್ ನಂಬರ್...." ಎಂದಿತ್ತು....ಒಮ್ಮೆಲೇ ನನ್ನಲ್ಲಿ ಆಶಾಕಿರಣ ಮೂಡಿ ಚಟುವಟಿಕೆ ಮೂಡಿತು. 'For Love Only' ಲೇಬಲ್ ಮೇಲೆಯೇ "ಅಪ್ಸರಾ ಸಾರೀಸ್" ಎಂಬ ಲೇಬಲ್ಲು ಅಂಟಿಸಿದವರು ಯಾರೆಂದು ಅರ್ಥವಾಗಿತ್ತು. ಟೆಲಿಫೋನ್ ನಂಬರ' ನನ್ನ ಡೈರಿಯಲ್ಲಿ ಗುರುತು ಹಾಕಿಕೊಂಡು ಮೈಮುರಿದು ಎದ್ದಾಗ ನಿದ್ದೆಯ ಭಾರದಿಂದ ನನ್ನ ಕಣ್ಣರೆಪ್ಪೆಗಳು ಮುಚ್ಚತೊಡಗಿದ್ದವು.

ಕೇವಲ ನಾಲ್ಕು ಗಂಟೆ ಮಾತ್ರ ನಿದ್ದೆ ಮಾಡಿದ್ದರೂ ಆರು ಗಂಟೆಗೆ ನಾನು ಎದ್ದಾಗ ದೇಹದಲ್ಲಿ ಹೊಸ ಚೈತನ್ಯ ಮೂಡಿತ್ತು. ಎದ್ದು ದೇವರಿಗೆ ಕೈ ಮುಗಿಯುತ್ತಲೇ ಇಂದಿನ ದಿನ ನನಗೆ ವಿಶೇಷ ದಿನವಾಗಲಿದೆ, ಎಂದು ಎನಿಸಿತು. ಒಂದು ಬಗೆಯ ವಿಚಿತ್ರ ಸಂಕೇತ ಅಥವಾ ಅವ್ಯಕ್ತ ಭಾವನೆ ಮೂಡಿ ಇಂದು ಏನೋ ಘಟಿಸಲಿದೆ ಎಂದುಕೊಂಡೆ ಮನದಲ್ಲಿ. ಸ್ನಾನ

ಮಾಡಿ ನಿತ್ಯದಂತೆ ನನ್ನ ಜೊತೆಗೇ ಇರುವ 'ಗಣೇಶ'ನ ಫೋಟೋದ ಮುಂದೊಂದು ಊದುಬತ್ತಿ ಹಚ್ಚಿ ಕೈ ಮುಗಿದೆ. ರೂಮು ಖಾಲಿ ಮಾಡುವ ಉದ್ದೇಶದಿಂದ ಸಾಮಾನು ಪ್ಯಾಕ್ ಮಾಡಲಾರಂಭಿಸಿದೆ.

ಸರಿಯಾಗಿ ಏಳೂಕಾಲಿಗೆ ನಂಜುಂಡಪ್ಪ ಬಂದಾಗ ನಾನು ರೆಡಿಯಾಗಿದ್ದೆ.

ಮೊದಲೊಂದು ಕಪ್ ಕಾಫಿ ಕುಡಿದು, ಬಿಲ್ ಮಾಡಿಸಿ, ರೂಮು ಖಾಲಿ ಮಾಡಿದೆ.

ಸುಬ್ಬಾರಾವ್ ನೀಡಿದ ವಿಳಾಸ ಜಯಪ್ರಕಾಶ ನಗರದ್ದು....ಆಟೋದಿಂದ ಅಲ್ಲಿ ತಲುಪಿದಾಗ ನಮ್ಮನ್ನು ಸ್ವಾಗತಿಸಿದವ ತೋಟದ ಮಾಲಿ. ನಮ್ಮ ಲಗೇಜ ಹೊತ್ತುಕೊಂಡು ಕರೆದೊಯ್ದ....ನಗರದ ಸದ್ದುಗದ್ದಲದಿಂದ ದೂರಾದ ಪ್ರಶಾಂತ ವಾತಾವರಣದ ಮಧ್ಯೆ ತಲೆ ಎತ್ತಿ ನಿಂತ ಮೂರು ಮಹಡಿಗಳ ಭವ್ಯ ಬಂಗಲೆ ಅದು "ಗಗನ ಚುಕ್ಕಿ"....ನನಗಂತೂ ಬಹಳ ಹಿಡಿಸಿತು....ಬಂಗಲೆಯಲ್ಲಿ ಕೇವಲ ನಾವಿಬ್ಬರೇ....ತಿಂಡಿ ನಮಗಾಗಿ ದಾರಿ ಕಾಯುತ್ತಿತ್ತು....ಬಹುಶಃ ಮಾಲಿಗೆ ಮೊದಲೇ ಸುಬ್ಬಾರಾವ್ ಸೂಚನೆ ಕೊಟ್ಟಿದ್ದರೆಂದು ಕಾಣುತ್ತಿದೆ. ಶಿರಾ, ವಡೆ, ಇಡ್ಲಿ, ಟೋಸ್ಟ್ ಮೇಲೆ ಕಾಫಿ. ಹೆವೀ ಟಿಫನ್....ಸುಸ್ತು ಜಾಡ್ಯ ಎರಡೂ ದಾಳಿ ಮಾಡಿದರೆ ಏನಾಗಬೇಕೋ ಅದೇ ಆಯಿತು. ಮಾತು ಬೇಡವಾಯಿತು. ಕೆಲಸ ಒಲ್ಲೆ ಅನಿಸಿತು. ನಿದ್ದೆ ಹತ್ತಿರ ಸುಳಿಯತೊಡಗಿತು. ನಾನು ಭಾರವಾದ ಕಣ್ಣುಗಳನ್ನು ತೆರೆದಿಡುವ ವ್ಯರ್ಥ ಪ್ರಯತ್ನ ಮಾಡುತ್ತಿರುವಾಗ ಟೆಲಿಫೋನು ಕಣ್ಣಿಗೆ ಬಿತ್ತು. ರಾತ್ರಿ ನೆನಪಿಸಿಕೊಂಡ 'ಅಪ್ಸರಾ ಸಾರೀಸ್'ಗೆ ಫೋನು ಮಾಡುವ ಮಾತು ನೆನಪಾಗಿ ಫೋನು ಇದ್ದೆಡೆ ನಡೆದೆ ತೂರಾಡುತ್ತ. ನನ್ನೆಡೆ ನೋಡಿದ ನಂಜುಂಡಪ್ಪ ನಗುತ್ತ "ಏನು ದಿನದಲ್ಲೇ ಇಷ್ಟು ಕುಡಿದದ್ದು ? ತೂರಾಡುತ್ತಿದ್ದೀರಿ" ಎಂದರು. "ನಾನು ಅಪ್ಸರಾಗೆ ಫೋನು ಮಾಡಬೇಕು" ಅಂದೆ. ಅವರಿಗೆ ಅಚ್ಚರಿ "ಏನು ಅಪ್ಸರಾಗಾ ? ಮಾಡಿ ಮಾಡಿ" ಎಂದು ಅನ್ನುತ್ತ ಅವರೂ ತೂರಾಡುತ್ತ ನನ್ನೆಡೆ ಬಂದರು. ಇದೇನಾಗಿದೆ ನಮಗೆ ? ನಾವು ಒಮ್ಮಿಂದೊಮ್ಮೆಲೆ ನಿಂತುಕೊಳ್ಳಲಿಕ್ಕೆ ಆಗದಂತೆ ಜೋಲಿ ಹೊಡೆಯು

ತ್ತಿದ್ದೇವೆ ?....ನಮ್ಮ ಕಣ್ಣೇಕೆ ಭಾರವಾಗಿವೆ ಎಂದು ಯೋಚಿಸುತ್ತ ನಂಬರ್ ತಿರುಗಿಸಿದೆ. ಆ ಕಡೆಯಿಂದ ರಿಸೀವರ್ ಎತ್ತಿದರು....

"ಹಲೋ ಅಪ್ಸರಾ ಸಾರೀಸ್" ಎಂದೆ.

"ರಾಂಗ್ ನಂಬರ್'" ಸಂಬಂಧ ಕಡಿದು ಹೋಯಿತು.

ನಾನು ಡೈರಿ ತೆಗೆದೆ, ಜೀನ್ಸ್ ಪ್ಯಾಂಟು ತೆಗೆದೆ. ಮತ್ತೊಮ್ಮೆ ಲೇಬಲ್ ಮೇಲಿದ್ದ ನಂಬರ್ ಪರೀಕ್ಷಿಸಿದೆ. ಸರಿಯಾಗಿತ್ತು. ಪುನಃ, ಡಯಲ್ ಮಾಡಿದೆ. ಈ ಬಾರಿ "ಅಪ್ಸರಾ ಇದ್ದಾರಾ....ಅಪ್ಸರಾ....ನಾನು ದರ್ಶನ್ ಮಾತಾಡ್ತಿರೋದು" ಅಂದೆ.

"ಯಾವ ಅಪ್ಸರಾ ?" ಆ ಕಡೆಯಿಂದ ಪ್ರಶ್ನೆ ಬಂತು.

"ಅಪ್ಸರಾ ಮೀನ್ಸ್ ಅಪ್ಸರಾ....ಹಾಂ....ಮಂದಾಕಿನಿ....ಸುಬ್ಬಾರಾವ್ ಮಗಳು...."

"ಐದು ನಿಮಿಷ ಬಿಟ್ಟು ಟ್ರೈ ಮಾಡಿ" ಎಂದು ಹೇಳಿ ರಿಸೀವರ್ ಕೆಳಗಿಟ್ಟರು.

ಅರ್ಧ ಯಶಸ್ಸು ದೊರಕಿತ್ತು. ಐದು ನಿಮಿಷಗಳ ಮೇಲೆ ಫೋನು ಮಾಡಿದಾಗ ಫೋನು ಎತ್ತಿದವಳೇ ಅಪ್ಸರಾ.

"ಹಾಯ್ ದರ್ಶನ್ ಹೇಗಿದಿರಿ ? ಎಲ್ಲಿಂದ ಮಾತಾಡ್ತಿದೀರಿ" ಎಂದು ಕೇಳಿದಳು.

"ನರಕದಿಂದ....ನಿನ್ನಿಂದಾಗಿ ಸಿಕ್ಕ ನರಕ ಕೂಪದಿಂದ" ಸಿಟ್ಟಿನಿಂದ ಕೂಗಿದೆ.

"ಶಾಂತರಾಗಿ....ನಿಮ್ಮ ವಿಳಾಸ ಕೊಡಿ....ನಿಮ್ಮನ್ನ ನರಕ ಕೂಪದಿಂದ ಇಂದ್ರನ ಅಮರಾವತಿಗೆ ಒಯ್ಯುತ್ತೇನೆ"

"ಶಟ್‌ಪ್.... ಈಗ ಕೊಟ್ಟಿದ್ದೇ ಸಾಕು...." ಅರಚಿದೆ.

"ದರ್ಶನ್ ಪ್ಲೀಜ್ ಎಲ್ಲಿಂದ ಮಾತಾಡ್ತಿದೀರಿ ಹೇಳಿ....ಒಂದೆರಡು ಗಂಟೇಲಿ ನಾನು ನಿಮ್ಮ ಬಳಿ ಬರುತ್ತೇನೆ" ಆಕೆ ಅಂಗಲಾಚಿದಳು.

ನಾನು ವಿಳಾಸ ತಿಳಿಸಿ ರಿಸೀವರ್ ಕೆಳಗಿಟ್ಟು ಹಾಗೇ ಅಲ್ಲೇ ನೆಲ ಕ್ಕೊರಗಿದೆ....ನನಗಿಂತ ಮೊದಲೇ ನಂಜುಂಡಪ್ಪ ಧಾರಾಶಾಹಿಯಾಗಿದ್ದ.

"ಸೂಳೆಮಗ.... ಮಾಲಿ.... ಕಾಫಿಯಲ್ಲಿ ಮತ್ತು ಬರೋ ಔಷಧಿ ಕೊಟ್ಟಿದ್ದಾನೆ" ಅಂದೆ.

ದೂರದಲ್ಲಿ ಎಲ್ಲೋ ಒಂದುಕಡೆ ಟೆಲಿಫೋನು ಗಂಟೆ ಬಾರಿಸತೊಡಗಿತು. ಸ್ವಲ್ಪ ಸಮಯದ ನಂತರ ಯಾರೋ ರಿಸೀವರ್ ಎತ್ತಿ "ನಾನು ಮಾಲಿ ಗಂಗಪ್ಪ" ಎಂದು ಅನ್ನುವುದು ಕೇಳಿಸಿತು. ಮುಂದೆ ನನಗೊಂದೂ....

ಮುಖದ ಮೇಲೆ ತಣ್ಣೀರಿನ ಕಾರಂಜಿ...'ಹಾ..ಹಾ....ಆಂ' ದಡಬಡಿಸಿ ಎದ್ದು ಕುಳಿತೆ. ನಂಜುಂಡಪ್ಪ ಸಹ ಎದುರಿಗೆ ನೀರಿನ ಜಗ್ ಹಿಡಿದು ನಿಂತಿದ್ದಳು. ಅಪ್ಸರಾ ...ಕಣ್ಣು ಹೊಸಕಿ. ನೀರು ಒರೆಸಿಕೊಂಡು ನೋಡಿದೆ.... ಹೌದು ಅವಳೇ....

"ಅಪ್ಸರಾ....ನೀನು ನಿಜವಾಗಿಯೂ ಬಂದೆಯಾ?"

"ಬೇವಕೂಫ್....ನೀವು ಹುಲಿಯ ಗವಿಯಲ್ಲಿ ಆರಾಮವಾಗಿ ನಿದ್ದೆ ಮಾಡ್ತಿದಿರಾ. ಇದು ಯಾರ ಬಂಗಲೆ ಗೊತ್ತಿದೆಯೇ. ಬಾಸ್‌ದು....ಹೂಂ. ಬೇಗ ಏಳಿ....?

ನಮ್ಮಿಬ್ಬರ ಕಾಲ್ಕೆಳಗಿನ ಭೂಮಿ ಸರಿದಂತೆ ಭಾಸವಾಯಿತು. ಯಾರಿಂದ ತಪ್ಪಿಸಿಕೊಂಡು ಓಡಬೇಕೆಂದಿದ್ದೆನೋ ಅವರ ಮನೆಯಲ್ಲೇ ವಿಶ್ರಾಂತಿ ಪಡೆಯುವದೇ....

"ಈ ವಿಳಾಸ ನಿನ್ನ ತಂದೆ ಸುಬ್ಬಾರಾವ್ ಕೊಟ್ಟದ್ದು"

"ಸುಳ್ಳು.... ನೀವು ಸುಳ್ಳು ಬೊಗಳ್ತಾ ಇದೀರಿ"

ನಾನು ಜೋಬಿನಿಂದ ಚೀಟಿ ತೆಗೆದು ಅವಳ ಮುಂದೆ ಹಿಡಿದೆ.

"ನೋಡು....ಇದು ನಿನ್ನ ತಂದೆಯವರೇ ಬರೆದದ್ದು...."

ಅಪ್ಸರಾಳ ಕಣ್ಣುಗಳು ಒಡೆದುಹೋದವು. ಕಂಪಿಸುವ ಕೈಗಳಿಂದ ಚೀಟಿ ಹಿಡಿದಳು.

"ಹೌದು....ಇದು ಅಪ್ಪಾಜಿಯ ಹಸ್ತಾಕ್ಷರ. ಅವರು ಬೇಕೆಂತಲೇ ನಿಮ್ಮನ್ನು ಈ ಮೃತ್ಯುಪಂಜರಕ್ಕೆ ಕಳಿಸಿದರೇ....ಜಾನ್‌ನ ಮನೆಗೆ ಕಳಿಸಿದರೇ.

"ಹಾಂ....ನನಗೀಗ ನೆನಪಿಗೆ ಬಂದಿತು....ಅವರು ನನ್ನನ್ನು ಬೀಳ್ಕೊಡು

ವಾಗ ಹೇಳಿದ್ದರು "ನೀವು ಈ ವಿಳಾಸ ಸೇರಿದಿರಿ ಅಂದರೆ ಎಲ್ಲಾ ಕಷ್ಟ ಕಾರ್ಪಣ್ಯಗಳಿಗೆ ಕೊನೆ" ಎಂದು ಅದರ ಅರ್ಥ.

"ಖಲಾಸ್ ಕಿರ'ರ'ರ'" ನಂಜುಂಡಪ್ಪ ಕುತ್ತಿಗೆಗೆ ಉರುಲು ಬಿದ್ದ ಅಭಿನಯದೊಂದಿಗೆ ಹೇಳಿದ....ನನ್ನ ಮೈಯೆಲ್ಲಾ ಬೆವತಿತ್ತು....ಭಯ ಮನೆಮಾಡಿತ್ತು.

"ನಮ್ಮ ಕಾಫಿಯಲ್ಲಿ ಮತ್ತು ಬರುವ ಔಷಧಿ ಸೇರಿಸಿದ್ದರು. ಹೀಗಾಗಿ ತಿಂಡಿತಿಂದು ಕಾಫಿ ಕುಡಿಯುತ್ತಲೂ ನಾವಿಬ್ಬರೂ ನಿದ್ದೆ ಹೋದೆವು"

ನಮ್ಮಿಬ್ಬರ ಮಾತು ಕೇಳುತ್ತಿದ್ದಂತೆ ಅಪ್ಸರಾ ಕಿರುಚಿಕೊಂಡಳು.

"ಬಿಗ್‌ಬಾಸ'....ಬಿಗ'ಬಾಸ'"

"ಅಪ್ಸರಾ ಇದೇನು....ಬಿಗ'ಬಾಸ' ಅಂದ್ರೆ?"

"ಜಾನ'ಗೆ ನಾವೆಲ್ಲಾ ಫೋಟಾಬಾಸ' ಅನ್ನುತ್ತಿದ್ದೆವು. ಆತ ಸುಮಾರು ನಾನೂರಾ ಐವತ್ತು ಬಾರ', ಪಬ' ನಡೆಸುತ್ತಿದ್ದ. ದಿನಕ್ಕೆ ಎರಡು ಕೋಟಿಗೂ ಮಿಕ್ಕಿ ವ್ಯವಹಾರ ನಡೆಯುತ್ತಿತ್ತು. ಅದೆಲ್ಲಾ ಮರುದಿನ ಬೇರೆ ಬೇರೆ ಎಲ್ಲೋ ಒಂದು ಜಾಗೆಗೆ ಸೇರುತ್ತಿತ್ತು. ಆ ಜಾಗೆಗೆ ನಾವು "ಬಿಗ' ಬಾಸ'" ಎನ್ನುತ್ತಿದ್ದೆವು. ಅದರರ್ಥ ಜಾನ' ಸಹ ನಮ್ಮ ಯಜಮಾನರಲ್ಲಿ ಆತ ಫೋಟಾಬಾಸ'.... ಅವನ ಮೇಲಿರುವ ಬಿಗ'ಬಾಸ' ಜಾನ' ಸೂತ್ರದ ಬೊಂಬೆ. ಎಷ್ಟು ಪ್ರಯತ್ನಿಸಿದರೂ ಬಿಗ'ಬಾಸ' ಯಾರೆಂದು ನನಗೆ ತಿಳಿಯು ಲಿಲ್ಲ.... ಈಗ ತಿಳಿಯುತ್ತಿದೆ....ಆತ ಬೇರಾರೂ ಅಲ್ಲ....ನನ್ನ ತಂದೆ....ನನ್ನ ತಂದೆ....ಗೋಮುಖ ವ್ಯಾಘ್ರ....ಸುಬ್ಬಾರಾವ'....

ಅಯ್ಯೋ ದೇವರೇ....ನಂಜುಂಡಪ್ಪ ಕೆಳಗೆ ಕುಸಿದು ಬಿಕ್ಕತೊಡಗಿದ. ನನಗೆ ನಂಬಿಕೆ ಆಗ್ತಾ ಇಲ್ಲ. ಸುಬ್ಬಾರಾವ' ನಡತೆ, ಮಾತು, ನೆನಪಿಗೆ ಬರುತ್ತಿವೆ. ದೇಶ ಸೇವಕ, ಬಡವರ ಬಂಧು, ಸಮಾಜಸೇವಕ,ಸುಬ್ಬಾರಾವ'.

"ನೀನು ಸುಳ್ಳು ಹೇಳ್ತಾ ಇದೀಯಾ. ಸದಾನಂದನ ನೂಳೆಯಾಗಿದ್ದು, ಅನಂತರ ಜಾನ'ನ ಸಹಾಯದಿಂದ ಕಾಲ'ಗರ್ಲ' ರ್‍ಯಾಕೆಟ' ನಡೆಸುತ್ತಿದ್ದೆ. ಐದಾರುಕೋಟಿ ರೂಪಾಯಿಯೊಂದಿಗೆ ಪರಾರಿಯಾದವಳು ನೀನು. ನೀನು ಸದಾನಂದನನ್ನು ಕೊಂದ ಕೊಲೆಪಾತಕಿ. ಇಷ್ಟೆಲ್ಲ ಇದ್ದೂ....ಮತ್ತೆ ನನಗೆ

ಮೋಸಮಾಡಿ ಬಲೆ ಬೀಸಿದೆ. ಜಯಚಂದ್ರನನ್ನು ದಾರಿಯಿಂದ ಸರಿಸಿದೆ... ಎಲ್ಲಾ ಕುತಂತ್ರದ ಒಡತಿ ನೀನು....

"ಹೌದು....ನಿಮ್ಮ ಮಾತನ್ನು ನಾನು ನಿರಾಕರಿಸಲಾರೆ. ತಂದೆತಾಯಿಗಳಿಗೆ ಮೋಸಮಾಡಿ ಸದಾನಂದನ ಹಿಂದೆ ಓಡಿದೆ. ಆತನೊಬ್ಬ ಎರಡು ತಲೆ ಹಾವೆಂದು ನನಗೆ ಆಗ ತಿಳಿದಿರಲಿಲ್ಲ. ಅವನ ನಿಜವಾದ ಹೆಸರು ನಾಗರಾಜ ಎಂದು ಆದೋಲೆ ನನಗೆ ತಿಳಿಯಿತು. ಮದುವೆ ಎಂಬ ಹೆಸರಿನಲ್ಲಿ ಆತನ ಸೂಳೆಆದೆ. ನಂತರ ಕಾಲ್‌ಗರ್ಲ್ ರಾಕೆಟ್ ಒಡತಿಯಾದೆ. ಜಾನ್‌ನಿಂದ ಐದಾರುಕೋಟಿ ರೂಪಾಯಿಗಳನ್ನು ಹೊಡೆಯುಲು ನಾನೇ ಅವರಿಗೆ ಸೂಚಿಸಿದ್ದೆ. ನಮ್ಮ ಪ್ಲಾನಿನಂತೆ ನಾನು ಮೊದಲು ಪಾರಾದೆ. ಜಾನ್‌ನ ಸಂಗಡಿಗರು ಹಿಂಬಾಲಿಸಿದರು. ಹೇಗೋ ಪಾರಾಗಿ ನಿಮ್ಮೊಂದಿಗೆ ಸೇರಿಕೊಂಡೆ. ನಿಮ್ಮ ವಿಳಾಸ ನಾಗರಾಜನಿಗೆ ಕೊಟ್ಟೆ. ಆತ ಎಲ್ಲಾ ಅಪಹರಿಸಿ ನನ್ನ ಬಳಿ ಬಂದ. ಅವನನ್ನು ದಾರಿಯಿಂದ ಸರಿಸಿದವಳು ನಾನೇ ಅನಂತರ ಜಯಚಂದ್ರನ ಸರದಿ....

"ಬಾಯಿಮುಚ್ಚು....ಇಷ್ಟೆಲ್ಲ ಹೇಳಲು ನಾಚಿಕೆಯಾಗಬೇಕು ನಿನಗೆ"

"ನನಗೆ ನಾಚಿಕೆಯಾಗಿದ್ದರಿಂದಲೇ ಇಂದು ನಾನು ಪೊಲೀಸ್ ಇನ್ ಫಾರ್ಮರ್ ಆಗಿದ್ದು ತಿಳೀತಾ"

"ಏನೆಂದೆ? ಪೊಲೀಸ್‌ಇನ್‌ಫಾರ್ಮರ'....ನೀನು....

"ಹೌದು....ನಾನೆಲ್ಲಾ ಪೊಲೀಸ'ಗೆ ತಿಳಿಸಿರುವೆ. ಅವರ ಸಾಕ್ಷಿಯಾಗಿ ಕೆಲಸ ಮಾಡಲು ಒಪ್ಪಿಕೊಂಡಿರುವೆ..... ಇದರಿಂದಲಾದರೂ ನನ್ನ ಪಾಪಗಳಿಗೆ ಪ್ರಾಯಶ್ಚಿತ್ತ ಆಗಬಹುದೇನೋ"

"ಇಂಪಾಸಿಬಲ್....ನಾ ನಂಬಲಾರೆ...."

"ನಂಬುವಂತೆ ನಾ ಒತ್ತಾಯ ಮಾಡಲಾರೆ"

ಒಮ್ಮೆಲೆ ಶಾಂತಿ ನೆಲೆಸಿತು. ಇಷ್ಟರವರೆಗೂ ನಮ್ಮಿಬ್ಬರ ಮಧ್ಯ ಮೂಕ ಪ್ರೇಕ್ಷಕನಾಗಿ ಕುಳಿತಿದ್ದ ನಂಜುಂಡಪ್ಪ....ಅವನ ಮುಖ ರಾಹುಗ್ರಸ್ಥವಾಗಿತ್ತು.....ನನಗಾಗಿ ಸಂಕಟದಲ್ಲಿ ಬಿದ್ದಿದ್ದ ಆತ. ಯಮುನ ಅತಿಥಿಯಾಗುವವನಿದ್ದ....ನನಗೆ ಕೆಡುಕೆನಿಸಿತು. ನನ್ನಿಂದಾಗಿಯೇ ಅಲ್ಲವೇ ಆತ ಈ ಸ್ಥಿತಿಗೆ ಬಂದದ್ದು.... ಮತ್ತೆ ನಾನು?.... ಹಾಯಾಗಿ ನನ್ನ ಪಾಡಿಗೆ

ನಾಲ್ಕಕ್ಷರ ಬರೆದುಕೊಂಡು ಸುಖವಾಗಿದ್ದೆ....ಈ ಅಪ್ಸರೆಯಿಂದಾಗಿ ನನ್ನ ಸುಖದ ಸಂಸಾರ ಒಡೆದು ಚೂರಾಯಿತು....ಜಿಗುಪ್ಸೆ ಅನಿಸಿ ಅವಳತ್ತ ನೋಡಿ ಕೇಳಿದೆ.

"ನಿನ್ನ ಮಾತು ಸತ್ಯವೋ ಮಿಥ್ಯವೋ ನನಗೆ ಬೇಕಾಗಿಲ್ಲ. ಒಂದು ಪ್ರಶ್ನೆಗೆ ಉತ್ತರ ಕೊಡು. ನನ್ನನ್ನೇಕೆ ಕೀಲು ಬೊಂಬೆ ಮಾಡಿಕೊಂಡೆ ?" ಒಂದು ಕ್ಷಣ ಆಕೆ ಮಾತನಾಡಲಿಲ್ಲ....ನಂತರ ಮೆಲುವಾಗಿ ಉತ್ತರಿಸಿದಳು, "ದರ್ಶನ್....ನಿಜವಾಗಿಯೇ ಕೀಲು ಬೊಂಬೆಯಾದವಳು ನಾನು....ನಿನ್ನನ್ನು ಕೀಲು ಬೊಂಬೆ ಮಾಡಿದವಳು ನಾನಲ್ಲ....ನಿನ್ನ ಪ್ರಾರಬ್ಧ, ನಿನ್ನ ದೈವ...."

ನಾನು ಮಾತನಾಡಲಿಲ್ಲ.

ನಂಜುಂಡಪ್ಪನ ನಾಲಿಗೆಯಂತೂ ಯಾವಾಗಲೋ ಜಡವಾಗಿತ್ತು.

ಶುಷ್ಕ ನಗೆ ನಕ್ಕ ಅಪ್ಸರಾ ಕೇಳಿದಳು.

"ಏಕೆ ?....ನನ್ನ ಬಾಯಿಯಿಂದ ಬಂದ ಈ ತತ್ವಪದ ಕೇಳಿ ಅಚ್ಚರಿ ಆಯ್ತೇ ? ಏನು ಮಾಡಲಿ....ಹೇಗೆ ಹೇಳಲಿ ?... ನನ್ನ ಸುಂದರವಾದ ಕನಸುಗಳನ್ನು ಚೂರು ಚೂರು ಮಾಡಿದ ಭಯಾನಕ ಚಿತ್ರವನ್ನು ಹೇಗೆ ಮರೆಯಲಿ...."

"ಅಂದರೆ ?....ನೀನಾಗಿಯೇ"

"ಇಲ್ಲ .. ನಾನಾಗಿಯೇ ನರಕದಲ್ಲಿ ಬೀಳಲಿಲ್ಲ....ನರಕಕ್ಕೆ ತಳ್ಳಿದವ ಆ ದರಿದ್ರ ಸದಾನಂದ ಉರುಫ್ ನಾಗರಾಜ" ಆಕೆ ಹೇಳಲಾರಂಭಿಸಿದಳು.

## 11

ಸೌಂದರ್ಯ ಕೆಲವರಿಗೆ ವರವಾದರೆ ಇನ್ನು ಕೆಲವರಿಗೆ ಶಾಪವಾಗುತ್ತದೆ ಎಂಬ ಮಾತು ನನ್ನ ಪಾಲಿಗಂತೂ ಪೂರ್ಣ ಸತ್ಯವಾಯಿತು. ನನ್ನ ತಂದೆ ಸುಬ್ಬರಾಯರು. ತಾಯಿ ಕಮಲಾಬಾಯಿ ಮದುವೆಯಾದ ಎಂಟು ವರ್ಷದ ಮೇಲೆ ಅವರಿಗೆ ಹುಟ್ಟಿದ ಮುದ್ದಿನ ಮಗಳು ನಾನು. ಹುಟ್ಟಿದಾಗಲೇ ಪೂರ್ಣಚಂದ್ರನಂತಿದ್ದ ನನ್ನ ನೋಡಿ ತಂದೆ ತಾಯಿ ಹಿರಿಹಿರಿ ಹಿಗ್ಗಿ

ದ್ದರು. ನಮ್ಮ ಅಜ್ಜಿ ನನ್ನಂತೆಯೇ ಇದ್ದುದನ್ನು ಚಿಟ್ಟಿಪಿಸಿಕೊಂಡ ನನ್ನ ತಂದೆ ನನಗೆ ಅಜ್ಜಿಯ ಹೆಸರನ್ನೇ ಇಟ್ಟರು ಮಂದಾಕಿನಿ ಅಂತ.

ಮೊದಲೇ ನಮ್ಮದು ಜಮೀನದಾರರ ಮನೆತನ. ನೂರಾರು ಎಕರೆ ಹೊಲ ಹತ್ತಿಪ್ಪತ್ತು ಎತ್ತುಗಳು. ಹಾಲು ಹೈನು ಬೇಕಾದಷ್ಟು.... ಆಳುಕಾಳುಗಳಂತೂ ಕಡಿಮೆಯೇ ಇರಲಿಲ್ಲ. ಎಲ್ಲರೂ ನನ್ನನ್ನು ಅಂಗೈಯಲ್ಲಿಟ್ಟು ಜೋಪಾನಮಾಡಿದರು. ನನ್ನ ಬಾಲಲೀಲೆ ಕಂಡು ಆನಂದಿತರಾಗುತ್ತಿದ್ದರು. ಈ ಆನಂದದ ಅವಕಾಶ ನನ್ನ ತಾಯಿಗೆ ಹೆಚ್ಚು ದಿನ ಲಭ್ಯವಾಗಲಿಲ್ಲ. ಹರಕೆ ತೀರಿಸಲೆಂದು ಹೋದವಳು ದೇವರ ಪಾದ ಸೇರಿದಳು. ತೇರು ಎಳೆಯುವಾಗ ಬಿದ್ದು ಗಾಲಿಗೆ ಆಹುತಿಯಾದಳು. ಇದರಿಂದಾಗಿ ತಂದೆ ಕೆಲಕಾಲ ಸನ್ಯಾಸಿಯಂತಾದವರು ಹಿತೈಷಿಗಳ ಮಾತಿಗೆ ಪುನಃ ಸಂಸಾರಕ್ಕೆ ಬಂದರು. ಅವರು ಸಂಸಾರಕ್ಕೆ ಬಂದರೂ ನನಗೆ ಮಲತಾಯಿ ತರಲಿಲ್ಲ. ತಾವೇ ನನಗೆ ತಾಯಿಯಾಗಿ ನಿಂತು ಜೋಪಾನ ಮಾಡಿದರು. ನನ್ನ ಪ್ರತಿಯೊಂದು ಆಶೆಗಳನ್ನು ಈಡೇರಿಸಿ ತಾವೊಬ್ಬ ಆದರ್ಶ ತಂದೆ ಎನಿಸಿಕೊಂಡರೂ ನನ್ನನ್ನು ಜಗಮಂಡಿಯನ್ನಾಗಿ ಮಾಡಿದರು. ನಾನು ಅಪೂರ್ವ ಸುಂದರಿ ಎಂಬ ಹೆಮ್ಮೆಯೊಂದಿಗೆ ಜನರ ಪ್ರಶಂಸೆಯ ಮಾತುಗಳಿಂದಾಗಿ ನಾನು ನೆಲದ ಮೇಲೆ ಕಾಲಿಡಲೇ ಇಲ್ಲ....ಯಾವಾಗಲೂ ಆಕಾಶದಲ್ಲಿ ಹಾರುತ್ತ ಸುಂದರ ಕನಸುಗಳ ಲೋಕದಲ್ಲಿ ವಿಹರಿಸುತ್ತಿದ್ದೆ.

ನನಗಾಗ ಹದಿನೆಂಟು ವರ್ಷಗಳು.

ನನ್ನನ್ನು ಸೊಸೆಯನ್ನಾಗಿ ಮಾಡಿಕೊಳ್ಳಲು ಹತ್ತಾರು ಶ್ರೀಮಂತ ಕುಟುಂಬದವರು ಮುಂದೆ ಬಂದಿದ್ದರು. ನನ್ನನ್ನು ಬಿಟ್ಟಿರಲಾರದ ತಂದೆ ಬೇರೆ ಬೇರೆ ಕಾರಣಗಳಿಂದ ಅವರನ್ನೆಲ್ಲ ದೂರ ಮಾಡಿದ್ದರು. ಅವರ ಅತಿಯಾದ ಪ್ರೀತಿಯೇ ನನಗೆ ವಿಷವಾಗಿ ಪರಿಣಮಿಸಿತು....

ಅಂದು....

ಆಕಾಶದ ತುಂಬೆಲ್ಲ ಕಾರ್ಮೋಡಗಳು....

ಬಿಸಿಲಲ್ಲಿ ಬಾಯಿಬಿಟ್ಟಿದ್ದ ಭೂಮಿ ತಾಯಿಗೆ ತೃಷೆ.

ಆ ತೃಷೆ ನೀಗಿಸಲೇನೋ ಎಂಬಂತೆ ಭಾರೀ ಮಳೆ ಬರುವ ಎಲ್ಲ ಸೂಚನೆಗಳು ಕಂಡು ಬರತೊಡಗಿದ್ದವು.

ಅಂಥ ಸಮಯದಲ್ಲಿ ನಾನು ನನ್ನ ಗೆಳತಿಯರ ಜೊತೆ ಪಕ್ಕದೂರಿನಲ್ಲಿಯ ಜಾತ್ರೆಗೆ ಹೊರಟು ನಿಂತೆ. ತಂದೆ ಪರಿಪರಿಯಿಂದ ಹೇಳಿದ್ದು ಎಲ್ಲಾ ವ್ಯರ್ಥವಾಯಿತು. ಕೊನೆಗೂ ನಾನೇ ಗೆದ್ದೆ.

ಬಂಡಿಯಲ್ಲಿ ಗೆಳತಿಯರೊಂದಿಗೆ ಹೊರಟೆ.

ಬಂಡಿ ಹಿಂದೆ ಕೈಯಲ್ಲಿ ದೊಣ್ಣೆ ಹಿಡಿದಿದ್ದ ನಾಲ್ಕು ಗಂಡಾಳುಗಳು.... ಜಾತ್ರೆಗೆ ಬಂದದ್ದಾಯಿತು. ದೇವರ ದರ್ಶನ ತೆಗೆದುಕೊಂಡು ಎಲ್ಲೆಡೆ ತಿರುಗಾಡಿಯೂ ಆಯಿತು. ಆಗಲೇ ಬಿರುಗಾಳಿ ಬೀಸಲಾರಂಭಿಸಿತು. ಬೆಂಗಾವಲಿಗೆ ಬಂದವರು ನನಗೆ ಹೊರಡಲು ಒತ್ತಾಯ ಮಾಡತೊಡಗಿದರು. ಅವರ ಮಾತನ್ನು ಕಿವಿಯ ಮೇಲೆ ನಾನು ಹಾಕಿಕೊಳ್ಳದಿದ್ದರೂ ಗೆಳತಿಯರ ಅಳು ಮೋರೆ ಕಂಡು ಒಪ್ಪಿಕೊಂಡೆ. ನಾವಿನ್ನು ಬಂಡಿಯಲ್ಲಿ ಕುಳಿತಿರಲಿಲ್ಲ. ಭಾರಿ ತೂಫಾನಿನೊಂದಿಗೆ ಆಕಾಶ ಕಳಚಿ ಬೀಳುವಂತೆ ಮಳೆ ಸುರಿಯಲಾರಂಭಿಸಿತು....ಮಳೆಯಲ್ಲಿ ಬಂಡಿ ಎಳೆಯಲು ಎತ್ತುಗಳು ನಿರಾಕರಿಸಲಾರಂಭಿಸಿದವು. ಹೊರಡಲು ಜೋರು ಮಾಡಿದ್ದ ಗಂಡಾಳುಗಳು ಮಳೆ–ಗಾಳಿ ನಿಲ್ಲುವವರೆಗೂ ಇಲ್ಲೇ ಇದ್ದು ಆಮೇಲೆ ಹೊರಡೋಣ ಎಂದರು. ನಾನಂತೂ ಹಟಮಾರಿ. ಅವರ ಯಾವ ಮಾತಿಗೂ ಜಪ್ ಎನ್ನಲಿಲ್ಲ. ಹೊರಡಲೇಬೇಕು ಎಂದೆ....

ಮುಂದೆ....ಮುಂದೇನು ?....ನನ್ನ ಮಾತೇ ಕೊನೆಯದು.

ಬಂಡಿ ಹೊರಟಿತು. ಓಡಲು ನಿರಾಕರಿಸಿದ ಎತ್ತುಗಳ ಮೇಲೆ ನಾನೇ ಚಾಟಿ ಏಟು ಬಾರಿಸುತ್ತಿದ್ದೆ ...ದಾರಿ ಕಾಣದಷ್ಟು ನೀರು....ಎಲ್ಲಿ ತಗ್ಗಿದೆ, ಎಲ್ಲಿ ನೀರಿದೆ, ಎಲ್ಲಿ ದಾರಿಯಿದೆ ಒಂದೂ ತಿಳಿಯದು....ಎತ್ತುಗಳೇ ಸಾಗಿದ್ದು ದಾರಿ....ಹಾಗೇ ಸುಮಾರು ದೂರ ಸಾಗಿದೆವು.

ಮುಂದೆ ಅಡ್ಡಿಯಾದದ್ದು ನಮ್ಮೂರ ಹಳ್ಳ.

ನಮ್ಮೂರಿನಿಂದ ಸುಮಾರು ಐದು ಕಿಲೋಮೀಟರ್ ದೂರದಲ್ಲಿ ಹರಿಯುವ ನಮ್ಮೂರ ಗಂಗೆ....

ನಮ್ಮೂರ ಗಂಗೆ ಪೂರ್ಣ-ತುಂಬಿ ಹರಿಯುತ್ತಿದ್ದಳು. ಅದಕ್ಕೆ ಕಟ್ಟಿದ್ದ ಚಿಕ್ಕ ಸೇತುವೆ ಮುಳುಗಿ ಹೋಗಿತ್ತು. ಎಲ್ಲಿ ಸೇತುವೆ ಇದೆ, ಎಲ್ಲಿ ದಾರಿ ಇದೆ ಎಂದೇ ತಿಳಿಯುತ್ತಿರಲಿಲ್ಲ....ಬಂಡಿ ನಿಂತಿತು....ಹಳ್ಳದ ನೀರು ಇಳಿಯು

ವವರೆಗೂ ದಾಟುವಂತಿರಲಿಲ್ಲ. ಮನಸ್ಸಿರದಿದ್ದರೂ ನಾನು ಕೆಲಕಾಲ ತೆಪ್ಪಗೆ ಕುಳಿತೆ.

ಆದರೆ ಎಷ್ಟು ಹೊತ್ತು ಹಾಗೇ ಕೂಡುವುದು ?

ಮಳೆ ನಿಲ್ಲಲೊಲ್ಲದು....ಪ್ರವಾಹ ಇಳಿಯಲಾರದು.

ಮತ್ತೆ ನನ್ನ ಹಟ ಆರಂಭವಾಯಿತು....ಹಳ್ಳ ದಾಟಲೇಬೇಕು, ಊರು ಸೇರಲೇಬೇಕು ಎಂದೆ. ಎಲ್ಲರೂ ನಿರಾಕರಿಸಿದರು. ನನ್ನ ಗೆಳತಿಯರು ಬಂಡಿಯಿಂದ ಕೆಳಗಿಳಿದು ಮಳೆಯಲ್ಲೇ ನೆನೆಯುತ್ತಾ ಒಂದು ಗಿಡದಡಿ ನಿಂತುಕೊಂಡರು. ಕಾವಲಿಗೆ ಬಂದ ಗಂಡಾಳುಗಳು ಸಹ ಅವರೊಂದಿಗೆ ಸೇರಿಕೊಂಡಾಗ ನಾನು ಸಿಟ್ಟಿನಿಂದ ಉರಿದೆ. ಈ ಎಲ್ಲರಿಗೂ ಸರಿಯಾದ ಪಾಠ ಕಲಿಸಬೇಕು ಎಂದುಕೊಂಡು ಒಮ್ಮೆಲೆ ಚಾಟಿಯಿಂದ ಎತ್ತುಗಳ ಬೆನ್ನ ಮೇಲೆ ಬಾರಿಸಿದೆ. ಆ ಏಟುಗಳಿಗೆ ತತ್ತರಿಸಿದ ಅವು ಧಡಧಡ ಓಡಿ ಸೇತುವೆ ಮುಂಭಾಗಕ್ಕೆ ಬಂದು ಗಕ್ ಎಂದು ನಿಂತು ಬಿಟ್ಟವು. ಬಂಡಿ ಮುಂದೆ ನಿಂತಿದ್ದ ನನ್ನ ಜೋಲಿ ತಪ್ಪಿತು. ಕಣ್ಣು ಮುಚ್ಚಿ ಕಣ್ಣು ತೆರೆಯುವದರೊಳಗೆ ನಾನು ಬಂಡಿಯಿಂದ ರಭಸದಿಂದ ತುಂಬಿ ಹರಿಯುತ್ತಿದ್ದ ಹಳ್ಳಕ್ಕೆ ಬಿದ್ದಿದ್ದೆ....ದಂಡೆಯಲ್ಲಿ ನಿಂತವರೆಲ್ಲ ಹೋ–ಹೋ ಎಂದರಿಚಿದರು....ನಾನು ನೀರಿನ ಸೆಳೆತಕ್ಕೆ ಸಿಲುಕಿ ತೇಲಿ ಹೋಗಲಾರಂಭಿಸಿದೆ. ಯಾರಿಗೂ ನೀರಿಗೆ ಬಿದ್ದ ನನ್ನನ್ನು ಉಳಿಸಲು ಧೈರ್ಯವಿಲ್ಲ. ಅದೇ ಸಮಯಕ್ಕೆ ನಮಗಿಂತ ಮೊದಲೇ ಬಂದು ನಿಂತಿದ್ದ ಪಟ್ಟಣದ ಹುಡುಗನಂತೆ ಕಾಣಿಸುತ್ತಿದ್ದ ತರುಣ ಪ್ರವಾಹಕ್ಕೆ ಜಿಗಿದ....ಜೀವದ ಹಂಗು ತೊರೆದು ಪ್ರವಾಹದ ಜೊತೆ ಹೋರಾಡಿ ನನ್ನನ್ನು ಎಳೆದು ತಂದು ಎದುರು ದಂಡೆಗೆ ಒಗೆದ....ನಾನು ಸಾಕಷ್ಟು ನೀರು ಕುಡಿದಿದ್ದೆ. ಆತನೇ ಪ್ರಥಮೋಪಚಾರ ಮಾಡಿ ಬದುಕಿಸಿದ. ಇದೆಲ್ಲವನ್ನೂ ಮೂಕ ಪ್ರೇಕ್ಷಕರಾಗಿ ಆ ದಂಡೆಗಿದ್ದ ನನ್ನವರು ನೋಡುತ್ತ ನಿಂತಿದ್ದರು.

ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ, ರಭಸದ ಗಾಳಿ ಎಲ್ಲಾ ಕಂಡು ಚಿಂತಿತರಾದ ನನ್ನ ತಂದೆ ತಾವೊಂದು ಬಂಡಿ ಕಟ್ಟಿಕೊಂಡು ಬಂದರು, ಅವರಿಗೆ ಎಲ್ಲಾ ವಿಷಯ ತಿಳಿಯಿತು. ನನ್ನ ಪ್ರಾಣ ಉಳಿಸಿದ ಯುವಕ ತನ್ನ ಹೆಸರು ಸದಾನಂದ ಎಂದು ಹೇಳಿದ. ತಂದೆಯವರು ಅವನನ್ನು ಬಾಯ್ತುಂಬ

ಹೊಗಳಿ ತಮ್ಮೊಂದಿಗೆ ಮನೆಗೆ ಕರೆತಂದರು. ಅಂದು ಪೂರ್ತಿ ಆತ ನಮ್ಮ ಮನೆಯಲ್ಲಿದ್ದ. ಮರುದಿನ ಪ್ರವಾಹ ಇಳಿಯಿತು. ನನ್ನ ಗೆಳತಿಯರು ಕಾವಲು ಬಂದವರು ಎಲ್ಲರೂ ಬೆಳಿಗ್ಗೆ ಬಂದು ತಲುಪಿದರು. ಎಲ್ಲರೂ ನನ್ನ ಅದೃಷ್ಟ ಚೆನ್ನಾಗಿತ್ತು ಎಂದು ಹೇಳುವದರೊಂದಿಗೆ ಸದಾನಂದನ ಧೈರ್ಯ ವನ್ನು ಹೊಗಳಿದ್ದರಿಂದಾಗಿ ಅಂದೇ ಆತ ನನ್ನ ಆರಾಧ್ಯದೈವವಾದ. ನಾನಾ ತನ ಆರಾಧಕಿಯಾದೆ. ನನ್ನ ಹೃದಯದೊಡೆಯನನ್ನಾಗಿ ಮಾಡಿಕೊಂಡೆ.

ನಾನು ಆಗಾಗ ಸದಾನಂದನನ್ನು ಭೇಟಿಯಾಗತೊಡಗಿದೆ. ಗಂಟೆ ಗಟ್ಟಲೆ ನಾವು ಮಾತನಾಡುತ್ತ ಜಗವನ್ನು ಮರೆಯುತ್ತಿದ್ದೆವು. ಆತ ರಾಜಧಾನಿಯಲ್ಲಿ ತನಗಿರುವ ಮನೆ, ಕಾರು, ಆಳುಕಾಳುಗಳ ಬಗ್ಗೆ ಹೇಳಿ ನನ್ನನ್ನು ತನ್ನತ್ತ ಸೆಳೆಯತೊಡಗಿದ. ಅವನ ಊಹೆಯಂತೆ ನಾನಾತನತ್ತ ವಾಲ ತೊಡಗಿದೆ. ನನ್ನ ಈ ನಡತೆಯಿಂದಾಗಿ ತಂದೆ ರೋಸಿ ಹೋದರು. ಮನೆತನದ ಮರ್ಯಾದೆ ಮಣ್ಣು ಪಾಲಾಗುತ್ತಿದೆ ಎಂದು ಆಕ್ರೋಶ ಮಾಡ ತೊಡಗಿದರು. ಎಲ್ಲರ ಬಾಯಲ್ಲಿ ನನ್ನ ಹಾಗೂ ಸದಾನಂದನ ಪ್ರೇಮಕತೆ ಕುಣಿಯ ತೊಡಗಿತು. ನನಗಂತೂ ಯಾವುದರ ಬಗ್ಗೆಯೂ ಪರಿವೆಯೇ ಇರಲಿಲ್ಲ. ಹೆತ್ತು ಬೆಳೆಸಿದ, ತಾಯಿಗಿಂತ ಮಿಗಿಲಾಗಿ ನೋಡಿಕೊಂಡ ತಂದೆಯ ಮಾತು ಮುಳ್ಳಾಗ ತೊಡಗಿತು. ಅವರ ಹಿತ ನುಡಿ ಭರ್ಜಿಯಂತೆ ಎದೆ ಇರಿಯುತ್ತಿತ್ತು. ಜಗವೆಲ್ಲ ನನ್ನ ವೈರಿಯಂತೆ ಕಾಣತೊಡಗಿತು. ನನ್ನ ನೆಮ್ಮದಿಯ ಬಾಳಿಗೆ ಅವರೆಲ್ಲ ಕಲ್ಲು ಹಾಕುತ್ತಿದ್ದಾರೆ ಎನಿಸಿತು. ಕೇವಲ ಸದಾನಂದನ ಸಾನಿಧ್ಯ ಮಾತ್ರ ನನಗೆ ಅಮೃತದಷ್ಟು ಸಿಹಿ ಅನಿಸಿತು.

ತಂದೆ ಹಣೆಹಣೆ ಬಡಿದುಕೊಂಡು ಇಷ್ಟು ದಿನ ನನ್ನ ಮದುವೆ ಮಾಡ ದ್ದಕ್ಕೆ ತಾನಾಗಿ ಬಂದ ಸಂಬಂಧಗಳನ್ನು ನಿರಾಕರಿಸಿದ್ದಕ್ಕೆ ಪಶ್ಚಾತ್ತಾಪ ಪಡ ತೊಡಗಿದರು. ಹೇಗಾದರೂ ಮಾಡಿ ನನ್ನ ಮದುವೆ ಮಾಡಿ ಕೈತೊಳೆದು ಕೊಳ್ಳಬೇಕೆಂದು ಯೋಚಿಸತೊಡಗಿದರು.

ಇದು ತಿಳಿಯುತ್ತಲೂ ನಾನು ಅವರಿಗಿಂತ ಒಂದು ಹೆಜ್ಜೆ ಮುಂದಿಟ್ಟೆ. ಸದಾನಂದ ಇದನ್ನೇ ಕಾಯುತ್ತಿದ್ದ. ಒಂದು ದಿನ ನಾನವನ ಜೊತೆ ಪಲಾಯನ ಮಾಡಿ ರಾಜಧಾನಿ ಸೇರಿದೆ. ಯಾವದೋ ದೇವಸ್ಥಾನದಲ್ಲಿ ನಾಲ್ಕಾರು ಜನರೆದುರು ಪರಸ್ಪರ ಮಾಲೆ ಹಾಕಿ ಸತಿಪತಿಗಳೆಂದು ಅಂದು

ಕೊಂಡೆವು. ಸುಮಾರು ಒಂದು ತಿಂಗಳು ಭವ್ಯವಾದ ಬಂಗಲೆಯಲ್ಲಿ ವಾಸ ಮಾಡಿದೆವು. ಕಾರಿನಲ್ಲಿ ಸುತ್ತಾಡಿ ಸುಖಿಸಿದೆವು. ಬೇಕಾದ ಬಟ್ಟೆ ತೊಟ್ಟು ಆನಂದಿಸಿದೆವು.

ಒಂದು ತಿಂಗಳು ಕಳೆದ ಮೇಲೆ ವಾಸ್ತವ ಸಂಗತಿ ತಿಳಿಯಿತು.

ನಾನು ಆಕಾಶದಲ್ಲಿ ಕಟ್ಟಿದ್ದ ಕನಸಿನ ಗೋಪುರ ಕಳಚಿಬಿದ್ದು ನುಚ್ಚುನೂರಾಯಿತು. ತಿಂಗಳು ಕಳೆದ ಭವ್ಯ ಬಂಗಲೆ ನಮ್ಮದಲ್ಲ. ಕಾರು ನಮ್ಮದಲ್ಲ. ಅವೆಲ್ಲಾ ಬಾಡಿಗೆಯವು ಎಂದು ತಿಳಿಯಿತು. ಅಷ್ಟೇ ಅಲ್ಲ ತಾನು ಸದಾನಂದ ಎಂದು ಹೇಳಿಕೊಂಡ ಅವನ ಹೆಸರೂ ಸಹ ಅದಲ್ಲ. ಅವನ ನಿಜವಾದ ಹೆಸರು ನಾಗರಾಜ. ಆತ ಶ್ರೀಮಂತನಲ್ಲ. ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಎಂಬುದೂ ತಿಳಿಯಿತು.

ನಾನು ಭೂಮಿಗಿಳಿದು ಹೋದೆ. ಕಣ್ಣೆದುರು ಕತ್ತಲೆ ತನ್ನ ಸಹಸ್ರ ಬಾಹುಗಳಿಂದ ನನ್ನತ್ತ ಧಾವಿಸಿ ಬರತೊಡಗಿತು.

ಮಾಡುವದೇನು?

ನಾನಾಗಿ ಆಯ್ಕೆ ಮಾಡಿಕೊಂಡ ವಿಷ....ಕುಡಿಯಲೇ ಬೇಕಲ್ಲ....

ಮರಳಿ ಊರಿಗೆ ಹೋಗುವಂತಿರಲಿಲ್ಲ. ದಿನನಿತ್ಯ ಜಗಳ....ನ್ಯಾಯ....ಹೊಡೆತ. ಜೀವನ ನರಕವಾಯಿತು.

ಅಂಗೈಯಲ್ಲಿಟ್ಟು ಕಣ್ಣು ಬೊಂಬೆಯಂತೆ ಸಾಕುತ್ತೇನೆಂದವ, ಮೊದಲ ಒಂದು ತಿಂಗಳು ಸುಖದ ಮಳೆಯನ್ನೇ ಕರೆದವ ಇಂದು ಕೆಂಡದುಂಡೆಯಾಗಿದ್ದ. ಮಾತು ಮಾತಿಗೆ ಕೆರಳುತ್ತಿದ್ದ—ಹೊಡೆಯುತ್ತಿದ್ದ—ಹಿಂಸಿಸುತ್ತಿದ್ದ. ಓಡಿ ಬಂದವಳೆಂದು ಹಳಿಯತೊಡಗಿದ.

ಹದಿನೆಂಟು ವರ್ಷಗಳವರೆಗೆ ನನ್ನನ್ನು ತಾಯಿಯಂತೆ ಸಾಕಿದವರು ತಂದೆ. ಒಂದು ದಿನವೂ ಸಿಟ್ಟು ಮಾಡಲಿಲ್ಲ. ಬೈಯಲಿಲ್ಲ, ಹೊಡೆದದ್ದಂತೂ ಇಲ್ಲವೇ ಇಲ್ಲ. ಚೆನ್ನದ ಗಿಣಿಯಂತೆ ಸಾಕಿದ್ದರು ಅವರು. ಇಂದು ನಾನೇ ನಾನಾಗಿ ಗಿಡುಗನ ಕೈಯಲ್ಲಿ ಸಿಲುಕಿಕೊಂಡಿದ್ದೆ.

ದಿನ ನಿತ್ಯವೂ ಹತ್ತಾರು ಜನ ಸಾಲಗಾರರು ಮನೆಗೆ ಬರುತ್ತಿದ್ದರು. ಅವರಿಗೆ ಹೇಳಿ ಹೇಳಿ ನಾನು ಸುಸ್ತಾದೆ. ನನ್ನ 'ಗಂಡ' ಎನಿಸಿಕೊಂಡ ನಾಗರಾಜ ಮುಖ ತಪ್ಪಿಸತೊಡಗಿದ, ನಾನು ಜೋರು ಮಾಡಿದರೆ ಇದೆಲ್ಲಾ

ಸಾಲ ನಿನಗಾಗಿ ಆದದ್ದು....ಅನ್ನ ತೊಡಗಿದ. ಹೀಗೆ ಸಾಗಿದವು ಆರು ತಿಂಗಳು.

ನಾನು ಗರ್ಭವತಿಯಾಗಿದ್ದೆ.

ತಾಯಿ ಎಂಬ ಪದ ಕೇಳಿಯೇ ನಾನು ಪುಳಕಿತಳಾದೆ.

ಆದರೆ....ನಾಗರಾಜ....ಹಾವಿನಂತೆ ಭುಸಗುಟ್ಟಿದ.

ಸಧ್ಯಕ್ಕೆ ಮಕ್ಕಳು ಬೇಡ ಎಂದು ಹಟ ಹಿಡಿದ. ನಾನೂ ಕೇಳಲಿಲ್ಲ. ಮಗು ಬೇಕೇ ಬೇಕು ಎಂದೆ. ಆತ ತೆಪ್ಪಗಾದ. ನಾನು ಗೆದ್ದೆ ಎಂದುಕೊಂಡದ್ದೆ ಹುಸಿಯಾಯಿತು. ಎಂಟೇ ದಿನಗಳಲ್ಲಿ ಗರ್ಭಪಾತವಾದಾಗ ತಿಳಿಯಿತು ನಾಗರಾಜ ನನಗೆ ತಿಳಿಯದಂತೆ ಔಷಧಿ ಕೊಟ್ಟಿದ್ದ ಎಂದು.

ಅಂದು ಮಂದಾಕಿನಿ ಸತ್ತಳು.

ಅವಳ ಹೆಸರಿನಲ್ಲಿ ಜೀವಂತ ಶವವಾಗಿ ನಾನುಳಿದೆ.

ಒಂದು ದಿನ ರಾತ್ರಿ ಡ್ಯೂಟಿಗೆ ಹೋಗಿದ್ದ ಸದಾನಂದ ಅಂದರೆ ನಾಗರಾಜ ಧಾವಿಸಿ ಬಂದ. ಅವನ ಬಳಿ ಮೂವತ್ತು ನಲವತ್ತು ಚಿನ್ನದ ಬಿಸ್ಕತ್ತುಗಳಿದ್ದವು. ಎಲ್ಲಿಂದ ತಂದಿದ್ದನೋ ತಿಳಿಯದು. ಬಚ್ಚಿಟ್ಟು ಮಲಗಿಕೊಂಡ. ಮರುದಿನ ನಾಪತ್ತೆಯಾದ. ಅವನ ಜೊತೆ ಆ ಬಿಸ್ಕತ್ತುಗಳೂ ಇರಲಿಲ್ಲ. ಆತ ಹೋದ ಒಂದು ಗಂಟೆಗೆ ನಾಲ್ಕಾರು ಜನ ಅವನನ್ನು ಹುಡುಕಿಕೊಂಡು ಬಂದರು. ಅವರು ಪೊಲೀಸರೆಂದು ನನಗೆ ತಿಳಿಯದು. ಅವರಿಲ್ಲ ಎಂದು ತಿಳಿಸಿದೆ. ಸಾಯಂಕಾಲ ಜೀಪಿನಲ್ಲಿ ಸ್ವತಃ ಇನ್‌ಸ್ಪೆಕ್ಟರರೇ ಬಂದರು. ಅವರು ನಾಗರಾಜನನ್ನು ವಿಚಾರಿಸಲು ಬಂದವರು. ಆದರೆ ನನ್ನನ್ನು ನೋಡಿ ದಂಗಾಗಿ ನಿಂತುಬಿಟ್ಟರು.

ಇದಾದ ನಾಲ್ಕನೇ ದಿನ ನಾಗರಾಜ ಬಂದ. ನನ್ನ ಮೇಲೆ ಪ್ರೀತಿ ಮಳೆಗರೆದ. ತನ್ನ ವರ್ತನೆಗಾಗಿ ನೊಂದು ಪಶ್ಚಾತ್ತಾಪಪಟ್ಟು ಕ್ಷಮೆ ಕೇಳಿದ....ನಾನಾತನನ್ನು ನಂಬಿದೆ. ದೇವರು ನನ್ನ ಮೇಲೆ ಕಣ್ತೆರೆದ ಎಂದು ಭಾವಿಸಿದೆ. ಒಂದು ದಿನ ಇಬ್ಬರೂ ಕೂಡಿ ಒಬ್ಬರ ಮನೆಗೆ ಪೂಜೆಗೆಂದು ಹೊರಬಿದ್ದೆವು. ಅಲ್ಲಿ ಹೋದ ಮೇಲೆ ತಿಳಿಯಿತು, ಇದೆಲ್ಲಾ ನಾಗರಾಜನ ನಾಟಕ ಎಂದು. ಪೂಜೆಯ ಹೆಸರಿನಲ್ಲಿ ಕರೆತಂದು ಆ ಇನ್‌ಸ್ಪೆಕ್ಟರ ಮನೆ ಸೇರಿಸಿ ತಾನು ಪರಾರಿಯಾದ.

ನನ್ನ ಪ್ರತಿಭಟನೆ ನಡೆಯಲಿಲ್ಲ.

ರಾತ್ರಿ ಕಳೆದು ಬೆಳಕಾದಾಗ ಮಂದಾಕಿನಿ ಬದಲು ಅಪ್ಸರೆ ಜನ್ಮ ತಾಳಿದ್ದಳು. ಅಪ್ಸರೆ....ಹಹಹ....

ವಿಕಟವಾಗಿ ನಗತೊಡಗಿದ್ದ ಅಪ್ಸರೆಯತ್ತ ನಾನು ಗಾಬರಿಯಾಗಿ ನೋಡಿದೆ. ನಂಜುಂಡಪ್ಪ ಸಹ ಅಷ್ಟೇ ಗಾಬರಿಯಾಗಿದ್ದ. ಆವಳಿಗೆ ಹುಚ್ಚೇನಾದರೂ ಹಿಡಿಯಿತೇ? ಎಂಬ ಸಂಶಯ ಇಬ್ಬರಿಗೂ....ನಮ್ಮಿಬ್ಬರತ್ತ ವಿಚಿತ್ರ ದೃಷ್ಟಿ ಬೀರಿ ಕಣ್ಣಂಚಿಗೆ ಬಂದಿದ್ದ ಬೆಳ್ಳಿಪರೆಯಂಥ ಕಣ್ಣೀರು ಒರೆಸಿಕೊಂಡ ಅಪ್ಸರೆ ನುಡಿದಳು.

"ಗಾಬರಿಯಾಗಬೇಡಿ....ನನ್ನ ಬುದ್ಧಿ, ಚಿತ್ತಸ್ವಾಸ್ಥ್ಯ ಎರಡೂ ಚೆನ್ನಾಗಿವೆ"

ಆಕೆ ಮತ್ತೆ ಮುಂದುವರೆಸಿದಳು.

ನಾಗರಾಜನಿಗೆ ರಕ್ತದ ರುಚಿ ಹತ್ತಿತು. ನನ್ನ ಸೌಂದರ್ಯದಲ್ಲಿ ಎಂಥಾ ಶಕ್ತಿ ಇದೆ. ಅದರಿಂದ ಎಷ್ಟೊಂದು ಉಪಯೋಗ ತೆಗೆದುಕೊಳ್ಳಬಹುದೆಂಬ ಕಲ್ಪನೆ ಅವನಿಗಾಗಿತ್ತು. ಒಮ್ಮೇಲೆ ಆತ ಕಾರ್ಯತತ್ಪರನಾದ....ಕೈಯಲ್ಲಂತೂ ಮೇಲಧಿಕಾರಿಯ ಮೆಹಬಾನಿಯಿಂದಾಗಿ ಚಿನ್ನದ ಬಿಸ್ಕಿಟ್ ಕರಗಿಸಿದ್ದ ಲಕ್ಷಾವಧಿ ಹಣ ಕುಣಿಯುತ್ತಿತ್ತು. ಸದಾಶಿವನಗರದಲ್ಲೊಂದು ಭವ್ಯಬಂಗಲೆ ಬಾಡಿಗೆ ಹಿಡಿದ. ಸುತ್ತಲೂ ಕಾಂಪೌಂಡ'ಗೋಡೆ ತೋಟ, ತೆಂಗಿನಮರಗಳು ಇವೆಲ್ಲವುಗಳಿಂದಾಗಿ ಮನೆ ತುಂಬಾ ಸುಂದರವಾಗಿ ಕಾಣುತ್ತಿತ್ತು. ಒಳಗಡೆ ದೊಡ್ಡ ಹಾಲ', ಡೈನಿಂಗ'ರೂಂ, ಕಿಚನ', ಅಲ್ಲದೆ ಸುಮಾರು ಎಂಟು ಬೆಡ'ರೂಮುಗಳಿದ್ದವು. ಮನೆಯ ಅಲಂಕಾರಕ್ಕೆ ಆತ ಯಾವ ಕಡಿಮೆಯನ್ನೂ ಮಾಡಿರಲಿಲ್ಲ. ವೈಭವದ ಸಲಕರಣೆಗಳೆಲ್ಲ ತುಂಬಿಕೊಂಡ ಮನೆ ಹೊರಗಿನಿಂದ ಬಂದವರಿಗೆ ದಿಗ್ಭ್ರಮೆ ಹಿಡಿಸುತ್ತಿದ್ದವು.

ಅಲ್ಲಿಂದ ಆರಂಭವಾಯಿತು ನಾಗರಾಜನ ಮತ್ತೊಂದು ಮುಖ.

ಮೊದಲು ನನ್ನನ್ನು ಸಾಕಷ್ಟು ಹಿಂಸಿಸಿ ಬೇರೆಬೇರೆಯಾಗಿ ನಾಲ್ಕಾರು ಅಧಿಕಾರಿಗಳಿಗೆ, ಧನಾಢ್ಯ ಶ್ರೀಮಂತರಿಗೆ, ಪ್ರಭಾವಿ ರಾಜಕಾರಣಿಗಳಿಗೆ ನನ್ನನ್ನು ಅರ್ಪಿಸಿದ. ನನಗೂ ಒಂದು ಬಗೆಯ ಸೇಡು....ಅದೂ ನಾಗರಾಜನ ಮೇಲೆ ಮೂಡಿತ್ತು. ಹೇಡಿಯಂತೆ ಜೀವ ಕಳೆದುಕೊಳ್ಳುವ ಬದಲು

ನನ್ನ ಸೌಂದರ್ಯದ ಅಗ್ನಿಯಲ್ಲೇ ಅವನನ್ನು ಸುಟ್ಟು ಬೂದಿ ಮಾಡ ಬೇಕೆನ್ನುವ ಛಲ ಹಡೆಯಾಡತೊಡಗಿತು. ಹೀಗಾಗಿ ನಾನು ಆತನಿಗೆ ಪೂರ್ಣ ಸಹಕಾರ ನೀಡಿದೆ.

ಆವಾಗಲೇ ನಮ್ಮ ಸಂಪರ್ಕಕ್ಕೆ ಜಾನ್ ಬಂದ. ಜಾನ್ ಅಪಾಯಕಾರಿ ಮನುಷ್ಯ. ಬೆರಳು ತೋರಿಸಿದರೆ ಹಸ್ತ ನುಂಗುವ ಜಾತಿಯುವ ನಾಗರಾಜ ಮತ್ತು ಜಾನ್ ಕೂಡಿ ಭಯಂಕರ ಯೋಜನೆ ರೂಪಿಸಿದರು. ನಮ್ಮ ಮನೆ ಕಾಲ್‌ಗರ್ಲ್ ರಾಕೆಟ್ ಆಗಿ ರೂಪುಗೊಂಡಿತು. ನಾನು ಅದರ ಒಡತಿ ಆದೆ. ಹದಿನೆಂಟು ಮೀರಿರದ ಸುಂದರ ಎಂಟುಹತ್ತು ತರುಣಿಯರನ್ನು ಜಾನ್ ಹಿಡಿದು ತಂದ.... ಆವರು ನನ್ನ ಜೊತೆ ವಾಸಿಸತೊಡಗಿದರು. ಸಾಯಂಕಾಲವಾಗುತ್ತಲೂ ನಮ್ಮ ಮನೆ ಮನ್ಮಥನ ಅರಮನೆಯಾಗುತ್ತಿತ್ತು. ಮಧ್ಯರಾತ್ರಿವರೆಗೂ ಮುಕ್ತಕಾಮಕೇಳಿ ನಡೆಯುತೊಡಗಿತು. ಅನೇಕ ಹೊಸಮುಖಗಳು ಕಂಡುಬರಲಾರಂಭಿಸಿದವು. ಮಾರುವೇಶದಲ್ಲಿ ಬರುವ ಸಚಿವರು, ರಾಜಕಾರಣಿಗಳು, ಸರಕಾರಿ ಅಧಿಕಾರಿಗಳು, ವೈಟ್‌ಕಾಲರಿನ ಸಮಾಜದ ಠೇಕೇದಾರರು ಹಾಜರಿ ಕೊಡಲಾರಂಭಿಸಿದರು. ಜಾನ್ ಮತ್ತು ನಾಗರಾಜ ಸೇರಿ ಅವರಿಗೆ ತಿಳಿಯದಂತೆ ಆವರ ರತಿಕೇಳಿಯ ವಿಡಿಯೋ ಕ್ಯಾಸೆಟ' ಮಾಡಿಕೊಂಡರಲ್ಲದೆ ಮಾತುಗಳನ್ನೆಲ್ಲ ಟೇಪ' ಮಾಡಿಕೊಂಡರು.

ಮುಂದೆ ಆರಂಭವಾಯಿತು ಬ್ಲ್ಯಾಕ್‌ಮೇಲ್ ಜಾಲ. ಇದರಿಂದಾಗಿ ಹಣ ರಾಶಿರಾಶಿಯಾಗಿ ಬರತೊಡಗಿತಲ್ಲದೇ ನೋಡನೋಡುತ್ತಿದ್ದಂತೆ ಹತ್ತಿಪ್ಪತ್ತು ಬಾರ್ ಮತ್ತು ಪಬ್‌ಗಳು ತಲೆಎತ್ತಿ ಆದರ ಒಡೆಯರಾದರು, ಜಾನ್ ಮತ್ತು ನಾಗರಾಜ. ತಮ್ಮ ಹಾಗೂ ತಮ್ಮ ಆಸ್ತಿಯ ರಕ್ಷಣೆಗಾಗಿ ರೌಡಿಗಳ ಗುಂಪೊಂದು ಸೃಷ್ಟಿಯಾಯಿತು. ನಾಗರಾಜ ನೌಕರಿ ಬಿಡಲಿಲ್ಲವಾದರೂ ಹಾಗೇ ಹಾಜರಿ ಹಾಕಿ ಬರುತ್ತಿದ್ದ. ಅವರನ್ನು ಎದುರಿಸುವ ಶಕ್ತಿ ಯಾರಿಗೂ ಇರಲಿಲ್ಲ.

ಇದೇವೇಳೆಗೆ ನನ್ನ ತಂದೆ ಸುಬ್ಬರಾಯರು ಪಬ' ಹಾಗೂ ಬಾರ್‌ಗಳ ಮೇಲೆ ಗದಾಪ್ರಹಾರ ಮಾಡತೊಡಗಿದರು. ಇವುಗಳಿಂದಾಗಿ ಭಾರತೀಯ ಸತ್‌ಸಂಪ್ರದಾಯ ಸತ್ಯನಾಶವಾಗುತ್ತಿದೆ. ವಿದ್ಯಾರ್ಥಿ ಸಮುದಾಯ ಮಧಿರೆಗೆ ಶರಣಾಗಿ ತನ್ನ ಪಾವಿತ್ರ್ಯತೆ ಕಳೆದುಕೊಂಡು ಹೆಂಡ ಹಾಗೂ

ಹೆಣ್ಣಿಗೆ ದಾಸಾನುದಾಸವಾಗುತ್ತಿದ್ದೆ. ಹೆಣ್ಣು ತನ್ನ ಶೀಲ ಪಾವಿತ್ರ್ಯತೆಗಳಿಗೆ ತಿಲಾಂಜಲಿ ನೀಡಿ ಗಂಡಿನೊಡನೆ ಜಿದ್ದು ಕಟ್ಟಿ ಅಧಃಪತನದತ್ತ ಸಾಗುತ್ತಿದ್ದಾಳೆ. ಇದೇ ಅವಸ್ಥೆ ಮುಂದುವರೆದರೆ ಭಾರತದ ಸಂಸ್ಕೃತಿ ಪರಂಪರೆ ಎಲ್ಲಾ ಮಣ್ಣುಗೂಡಿ ತಲೆತಗ್ಗಿಸುವಂತಾಗುತ್ತದೆ. ಅದಕ್ಕಾಗಿ ಈ ಪಬ್ ಹಾಗೂ ಬಾರ್‌ಗಳನ್ನು ಮುಚ್ಚಬೇಕು. ನಾಯಿಕೊಡೆಯಂತೆ ತಲೆಎತ್ತುತ್ತಿರುವ ಇವುಗಳಿಗೆ ಕಡಿವಾಣ ಹಾಕಬೇಕು ಮುಂತಾಗಿ ಹೇಳಿಕೆ ಕೊಡುತ್ತ ಮುಷ್ಕರ, ಬಂದ್, ಮುಂತಾದವುಗಳಿಗೆ ನಾಂದಿ ಹಾಡಿದರು....ಜಾನ್ ಹಾಗೂ ನಾಗರಾಜ ಕೆರಳಿಕೆಂಡವಾದರು. ಸುಬ್ಬರಾಯರನ್ನು ಒಂದು ಕೈ ನೋಡಿಕೊಳ್ಳುವ ಯೋಜನೆ ಸಿದ್ಧವಾದಾಗ ನಾನು ತಡೆದೆ. ಅವರು ಎಷ್ಟಾದರೂ ನನ್ನ ತಂದೆಯವರಲ್ಲವೆ? ನಮ್ಮ ಮಧ್ಯದ ಸಂಬಂಧ ಕಡಿದಿದ್ದರೂ ರಕ್ತ ಸಂಬಂಧ ಕಡಿದಿರಲಿಲ್ಲವಲ್ಲ.... ನಾನವರನ್ನು ವಿರೋಧಿಸಿದೆ.... ತಡೆಯಲು ಪ್ರಯತ್ನಿಸಿದೆ. ಅದರ ಪರಿಣಾಮ ಅತಿ ಘೋರ....ಇಬ್ಬರೂ ತಮ್ಮ ಮನುಷ್ಯತ್ವ ಮರೆತು ನನ್ನ ಮೇಲೆ ರಾಕ್ಷಸಿ ಪ್ರಯತ್ನ ತೋರಿದರು. ನಾನು ಹತ್ತುಹದಿನೈದು ದಿನ ಹಾಸಿಗೆ ಬಿಟ್ಟು ಏಳಲಿಲ್ಲ. ಈ ಮಧ್ಯೆ ನನ್ನ ತಂದೆ ಸುಬ್ಬಾರಾಯರ ಮೇಲೆ ಕೇಡಿಗಳು ಹಲ್ಲೆ ಮಾಡಿದ್ದರು. ಅವರ ಪುಣ್ಯದಿಂದಾಗಿ ಹೆಚ್ಚು ಅಪಾಯವಾಗದೇ ವಿಚಿತ್ರ ರೀತಿಯಲ್ಲಿ ಅವರು ಪಾರಾಗಿದ್ದರು.

ಹೀಗಾಗಿ ಸುಬ್ಬಾರಾವ್... ನನ್ನ ತಂದೆ ದೇವತಾ ಮನುಷ್ಯರಾಗ್ಗಿ ಜನರೆಂದರು ಬಂದು ಸೇರಿತರು.... ಅದನ್ನು ಕಂಡು ನಾನು ಹಿಗ್ಗಿ ಹೋದೆ....ಅದರೊಂದಿಗೆ....ನನ್ನ ನಂತರದ ಜೀವಿತಕ್ಕೆ ಕೊನೆಹಾಡಲು ಮುಂದಾದೆ. ಮೊದಲು ನಾನು ಮಾಡಿದ ಕೆಲಸ ಜಾನ್ ಹಾಗೂ ನಾಗರಾಜ ಮುಚ್ಚಿಟ್ಟಿದ್ದ ಎಲ್ಲಾ ವಿಡಿಯೋ ಕ್ಯಾಸೆಟ್ ಹಾಗೂ ಧ್ವನಿಮುದ್ರಿಕೆಗಳನ್ನು ಹಾರಿಸಿ ಅಲ್ಲಿ ಖಾಲಿಯಾಗಿರುವ ಕ್ಯಾಸೆಟ್ ಸೇರಿಸಿದೆ. ನಿಧಾನವಾಗಿ ಹಣ ಕೂಡಿಸತೊಡಗಿದೆ....

ಇಷ್ಟಾಗುತ್ತಿದ್ದಂತೆ ಅವರಿಬ್ಬರೂ ಮತ್ತೊಂದು ಹೆಜ್ಜೆ ಮುಂದೆ ಹೋದರು.

ಪಬ್ ಹಾಗೂ ಬಾರ್‌ಗಳಿಗೆ ಬರುತ್ತಿದ್ದ ಹದಿಹರೆಯದ ಶ್ರೀಮಂತ

ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ವಿಷಯ ವಾಸನೆಯತ್ತ ಆಕರ್ಷಿಸತೊಡಗಿದರು. ಸಾಕಷ್ಟು ಮದ್ಯ ಸೇವಿಸಿದ ಅವರು ಗಂಡು ಹೆಣ್ಣು ಎಂಬುದನ್ನು ಮರೆತು ಅನೇಕ ಕಡೆ ತೆರೆಯುತ್ತಿದ್ದ ನಮ್ಮ ತಂಗುಮನೆಗಳಲ್ಲಿ ವಿಶ್ರಾಂತಿ ಪಡೆಯತೊಡಗಿದರು.... ಅವರ ರತಿ ಮನ್ಮಥ ಕಾಮಕೇಳಿ ಎಲ್ಲಾ ಕ್ಯಾಸೆಟ್‌ಗಳಾಗಿ ಮುಂದೆ "ಬ್ಲೂ ಫಿಲ್ಮ್" ಗ್ರೂಪ್‌ಗೆ ಸೇರಿದವು.

ಜಾನ್ ಹಾಗೂ ನಾಗರಾಜರ ಸಂಪತ್ತಿನ ಅಂತಸ್ತು ಏರುತ್ತಲೇ ಹೋಯಿತು.

ಈ ಮಧ್ಯೆ ನನ್ನಲ್ಲಿ ಸಂಶಯವೊಂದು ಮೂಡತೊಡಗಿತು.

ಘೋಟಾಬಾಸ್ ಎಂದು ಕರೆದುಕೊಳ್ಳುತ್ತಿದ್ದ ಜಾನ್‌ನ ಮೇಲೆ ಮತ್ತೊಬ್ಬರಾರೋ ಬಿಗ್‌ಬಾಸ್ ಇದ್ದಾರೆ. ಅವರು ಹೇಳಿದಂತೆ ಈತ ಕುಣಿಯುತ್ತಾನೆ. ಅವರ ಕೀಲುಗೊಂಬೆ ಈತ ಎಂದು. ಅದಕ್ಕೆ ಪುಷ್ಟಿಯಾಗುವಂತೆ, ನಾಲ್ಕಾರುನೂರು ಪಬ'ಗಳಿಂದ, ಕಾಲ್‌ಗರ್ಲ್ 'ರಾಕೆಟ'ಗಳಿಂದ, ಕಾಮಕೇಳಿಯ ತಂಗುದಾಣಗಳಿಂದ ಬ್ಲೂ ಫಿಲ್ಮ್ ಪಾರ್ಲರ್‌ಗಳಿಂದ ಹರಿದು ಬರುತ್ತಿದ್ದ ಸಂಪತ್ತಿನ ಹೊಳೆ ಎಲ್ಲೋ ಒಂಡೆದೆ ಮಾಯವಾಗುತ್ತಿತ್ತು. ಅದರ ಹತ್ತರ ಒಂದು ಭಾಗ ಮಾತ್ರ ಇವರಿಬ್ಬರಿಗೆ ಸೇರುತ್ತಿತ್ತು. ಅದೇ ಸುಮಾರು ದಿನವೊಂದಕ್ಕೆ ಎರಡೂಮೂರು ಲಕ್ಷದಷ್ಟಾಗುತ್ತಿತ್ತು.

ಹಾಗಾದರೆ ಆ ಬಿಗ್‌ಬಾಸ್ ಯಾರು?

ಅವನೇಕೆ ರಹಸ್ಯದ ಪರದೆಯ ಹಿಂದೆ ಅಡಗಿರುವ?

ಎಷ್ಟು ಪ್ರಯತ್ನಿಸಿದರೂ ನನಗೆ ಇದನ್ನು ಬಿಡಿಸಲಾಗಲಿಲ್ಲ.

ಸಾಕಷ್ಟು ಹಣ ಕೂಡಿಹಾಕಿದ ಮೇಲೆ ನಾನು ಜಾನ್ ಮುಚ್ಚಿಟ್ಟ ಸಂಪತ್ತನ್ನು ಎಗರಿಸಲು ಹುನ್ನಾರ ಹೂಡಿದೆ. ಆತ ಕೂಡಿ ಹಾಕಿದ ಚಿನ್ನದ ಬಿಸ್ಕತ್, ವಜ್ರ, ಒಡವೆ ಹಣ ಎಲ್ಲಾ ಎಲ್ಲಿವೆ ಎಂದು ತಿಳಿದುಕೊಂಡೆ.... ನನಗೆ ಯಾರಾದರೂ ಸಹಾಯಕ್ಕೆ ಬೇಕಾಗಿತ್ತು. ಅದಕ್ಕಾಗಿ ನಾಗರಾಜನನ್ನೇ ಆರಿಸಿಕೊಂಡೆ. ದಿನನಿತ್ಯ ಅವನ ಮುಂದೆ ಜಾನ್‌ನ ತಪ್ಪು ಹೇಳುತ್ತಾ ಬಂದೆ. ಆತ ಮೋಸಗಾರ. ಒಂದಲ್ಲ ಒಂದು ದಿನ ನಿನ್ನ ಗತಿ ಕಾಣಿಸುತ್ತಾನೆ.... ನಿನ್ನಿಂದ ಮುಂದೆ ಬಂದವ ಇಂದು ನಿನ್ನ ಬಾಸ್ ಆಗಿದಾನೆ

ಹೇರಳ ಸಂಪತ್ತು ಗಳಿಸಿದಾನೆ. ಅವನ ಮುಂದೆ ನೀನೊಂದು ಕ್ರಿಮಿ ಎಂದು ನೂರಾರು ಬಗೆಯಿಂದ ಚುಚ್ಚಿ ಚುಚ್ಚಿ ಮಾತನಾಡಿದೆ.

ಕೊನೆಗಾತ ನನ್ನ ಅಳವಿಗೆ ಬಂದ.

ನಾನು ಹೇಳಿದಂತೆ ಕೇಳಲು ನಿರ್ಧರಿಸಿದ.

ಅವನ ಮುಂದೆ ನನ್ನ ಯೋಜನೆ ಮುಂದಿಟ್ಟೆ. ಕೇಳಿ ದಂಗಾದ ಆತ. ನಾನಷ್ಟು ಮುಂದುವರೆಬಹುದೆಂದಾತ ಅಂದುಕೊಂಡಿರಲಿಲ್ಲ. ಮೊದಲೇ ಮಾತನಾಡಿ ಕೊಂಡಂತೆ ಮೊದಲು ನಾನು ಪರಾರಿಯಾದೆ. ಜಾನ್‌ನ ಜನ ನನ್ನ ಹಿಂದೆ ಬಿದ್ದರು. ಆವಾಗಲೇ ನೀನು ನನಗೆ ಗಂಟುಬಿದ್ದದ್ದು....ನನಗೊಂದು ನೆಲೆ ಸಿಕ್ಕಿತ್ತು. ನಿನ್ನ ವಿಳಾಸ ನಾಗರಾಜನಿಗೆ ತಿಳಿದು ಬಂದು ಕೂಡಲು ಸೂಚನೆ ಕಳಿಸಿದ್ದೆ. ಆದರೆ ನನ್ನ ಪ್ರಾರಬ್ಧ ನನ್ನ ಬೆನ್ನು ಬಿಡಲಿಲ್ಲ. ಬೆಂಗಳೂರಲ್ಲಿ ನನ್ನ ಸಂಪರ್ಕಕ್ಕೆ ಬಂದು ಕೆಲದಿನ ನಮ್ಮೊಂದಿಗೇ ಕೆಲಸಮಾಡಿ ನಂತರ ಕೈಕೊಟ್ಟು ಓಡಿಹೋಗಿದ್ದ ಜಯಚಂದ್ರನ ಕಣ್ಣಿಗೆ ನಾನು ಬಿದ್ದೆ. ಅವನಿಗೆ ನಾಗರಾಜನ ಮೇಲೆ ವಿಪರೀತ ದ್ವೇಷ. ಅದನ್ನರಿತ ನಾನು ಮುಳ್ಳಿನಿಂದ ಮುಳ್ಳು ತೆಗೆಯಲು ಒಂದು ಯೋಜನೆ ಸಿದ್ಧಪಡಿಸಿದೆ. ನಾಗರಾಜ ಬರುತ್ತಲೂ ಅವನ ಕತೆ ಮುಗಿಸಲು ಜಯಚಂದ್ರನನ್ನು ಒಪ್ಪಿಸಿದೆ. ನನ್ನ ಯೋಜನೆ ಸಫಲವಾಯಿತು. ನಾಗರಾಜ ಬರುತ್ತಲೇ ಅವನನ್ನು ಮುಗಿಸಿ ಆತನ ಸೂಟ್‌ಕೇಸಿನಲ್ಲೇ ಅವನ ಶವ ತುಂಬಿ ತಂದ ಜಯಚಂದ್ರ, ಎಲ್ಲಾ ಸಂಪತ್ತು ಆವನ ಹತ್ತಿರ ಇತ್ತು. ಅದೆಲ್ಲಿದೆ ಎಂದು ನನಗೆ ತಿಳಿದಿತ್ತು. ಆದರೆ ಪೊಲೀಸಿನೆದುರು ಶವ ಇಟ್ಟಿದ್ದ ಪೆಟ್ಟಿಗೆ ಬಾಯಿತೆರೆದುಬಿದ್ದದ್ದು ಕಂಡು ಆಘಾತ. ಇದರಿಂದಾಗಿ ಹೆದರಿದ ನಾವಿಬ್ಬರೂ ಅಲ್ಲಿಂದ ಪಾರಾದೆವು. ಅಪವಾದ ನಮ್ಮ ಮೇಲೆ ಬಂದಿತು.

ಮುಂದೆ ಏನು ನಡೆಯಿತೆಂಬುದು ನಿಮಗೆ ತಿಳಿದಿದೆ....ಈಗ ಹೇಳಿ ಯಾರು ಯಾರ ಕೀಲು ಗೊಂಬೆಯಾದದ್ದು. ಒಮ್ಮೆಲೆ ಎಲ್ಲೆಡೆ ಅಸಹನೀಯವಾದ ಘೋರ ಮೌನ ವ್ಯಾಪಿಸಿತು.

ಏನೆಂದು ಹೇಳುವುದು ?....ಅವಳ ಕತೆ ಕೇಳಿದ ಮೇಲೆ ನನ್ನ ನಾಲಿಗೆ ಉಡುಗಿ ಹೋಗಿತ್ತು. ಎಂಥ ಭಯಾನಕ ನರಕದಿಂದ ಎದ್ದು ಬಂದಿದ್ದಳಾಕೆ.

ಅವಳ ಮುಂದೆ ನನ್ನ ನೋವು, ಯಾತನೆ ಎಲ್ಲಾ ಹುಲ್ಲಿಗೆ ಸಮನಾಗಿ ಕಂಡವು.

'ಕರ್‌್ರ್ರ್....' ಎಂದು ಬ್ರೆಕ್ ಹಾಕಿದ ಸದ್ದಿನೊಂದಿಗೆ ವಾಹನ ವೊಂದು ನಿಂತಂತೆ ಅನಿಸಿತು. ಚಟಕ್‌ನೆ ಮೇಲೆದ್ದ ಆಕೆ ಕಿಟಕಿಯಲ್ಲಿ ಇಣುಕಿ ನೋಡಿ, ನಮ್ಮತ್ತ ನೋಡಿ ಕೂಗಿಕೊಂಡಳು. ಅವಳ ಮುಖ ಬೆಳ್ಳಗಾಗಿತ್ತು.

"ಬೇಗ ಏಳಿ....ಜಾನ್ ಹಾಗೂ ಅವನ ಸಂಗಡಿಗರು ಬಂದರು.... ಅವರು ಸಾಕ್ಷಾತ್ ಯಮದೂತರು...."

ನಾವು ಕಂಗಾಲಾಗಿ ಅವಳತ್ತ ನೋಡಿದೆವು.

ಆಕೆ ಟೆಲಿಫೋನ್ ಇದ್ದಲ್ಲಿ ಓಡಿ ರಿಸೀವರ್ ಎತ್ತಿದಳು.

ಸಂಪರ್ಕ ಕಡಿದಿತ್ತು. ಚಂಗನೆ ಬಾಗಿಲಿಗೆ ಹಾರಿ ಭದ್ರವಾಗಿ ಕೊಂಡಿ ಹಾಕಿದಳು. "ಬನ್ನಿ ನನ್ನ ಜೊತೆ....ಮೇಲೆ ರಕ್ಷಣೆ ಪಡೆಯೋಣ."

ಮೂವರೂ ಮಹಡಿಯತ್ತ ಓಡಿದೆವು....

## 12

ಮೂವರೂ ಮಹಡಿಯತ್ತ ಧಾವಿಸಿದೆವು. ಬಾಗಿಲು ಮುಚ್ಚಿ ಕೊಂಡಿ ಹಾಕಿ ಅದಕ್ಕೆ ಕಾಟ್, ಸೋಫಾ, ಕುರ್ಚಿ, ಟೀಪಾಯ್ ಎಲ್ಲಾ ಆನಿಸಿದೆವು. ಇಷ್ಟೆಲ್ಲ ಮಾಡಿದರೂ ಮೂವರಿಗೂ ಚೆನ್ನಾಗಿ ಗೊತ್ತಿತ್ತು. ನಮ್ಮ ಪ್ರಯತ್ನ ವ್ಯರ್ಥವಾದುದೆಂದು. ಸಾವು ನಮಗೆ ಕಟ್ಟಿಟ್ಟ ಬುತ್ತಿ....ಸಾವು....ಅದೂ ಎಂತಹದು....ಬೀದಿ ನಾಯಿಗಳಿಗೆ ಪ್ರಾಪ್ತವಾಗುವ ಸಾವು....ಬೀದಿ ನಾಯಿಗೂ ಕೇಡು....ಬೀದಿ ನಾಯಿಗಳ ಹೆಣವಾದರೂ ಸಿಗುತ್ತವೆ. ನಮ್ಮ ಹೆಣಗಳು ಸಿಗುತ್ತವೆಯೋ ಅಥವಾ ಎಲ್ಲೋ ಒಂದೆಡೆ ಡ್ರೇನೇಜ್ ಅಡಿಯಲ್ಲಿ ಸಿಲುಕಿ ಕೊಳೆತು ನಾರುತ್ತವೆಯೋ....ಅಥವಾ ಎಲ್ಲೋ ಒಂದೆಡೆ ಬಿದ್ದದ್ದ ಶವಗಳನ್ನು ಹದ್ದು ನಾಯಿಗಳು ಕಿತ್ತಿ ತಿನ್ನುತ್ತವೆಯೋ....

ಅದರೂ ಬದುಕಲು ಪ್ರಯತ್ನ....ಎಂಥಾ ವಿಚಿತ್ರ !

ನಾನು ದುಗುಡ ತುಂಬಿದ ಮುಖದಿಂದ ಅಪ್ಸರೆಯತ್ತ ನೋಡಿದೆ.

ಈಗವಳ ಮೇಲೆ ದ್ವೇಷ ಮೂಡುತ್ತಿಲ್ಲ. ಜೀವನದಲ್ಲಿ ತಿಳಿಯದೇ ದುರಂತದ ಸೆಳವಿಗೆ ಸಿಕ್ಕು ತತ್ತರಿಸಿದ ಹೆಣ್ಣದು. ಪ್ರೇಮವೆಂಬ ಮೃಗ ಜಲದ ಹಿಂದೆ ಓಡಿ, ಮೋಸ ಹೋಗಿ ಬೀದಿಯ ವೇಶ್ಯೆಯಾಗದಿದ್ದರೂ ಶ್ರೀಮಂತರ ಕೈಯಲ್ಲಿ ಕಳಹುದಾಟದ ಆಟಿಕೆಯಾಧವಳು. ನನಗೀಗ ಅರ್ಥವಾಗುತ್ತಿದೆ. ಅಂದವಳು ಬಾತ್ ರೂಮಿನಿಂದ ನಗ್ನಳಾಗಿ ಬಂದವಳು ನನ್ನನ್ನು ನೋಡಿ ಏಕೆ ಹೌಹಾರಲಿಲ್ಲ ? ಏಕೆ ನಾಚಿಕೊಳ್ಳಲಿಲ್ಲ ? ನನ್ನೆದುರೇ ಯಾವ ಸಂಕೋಚವೂ ಇಲ್ಲದೇ ಹೇಗೆ ಬಟ್ಟೆ ತೊಟ್ಟುಕೊಂಡಳು.....ಅವಳಲ್ಲಿಯ ಭಾವನೆಗಳೆಲ್ಲ ಸುಟ್ಟು ಬೂದಿಯಾಗಿ ಹೋಗಿದ್ದವು. ತಾನು ಹೆಣ್ಣು ಎಂಬು ದನ್ನೇ ಆಕೆ ಮರೆತಿದ್ದಳು. ತನ್ನ ಬಗೆಗೆ, ತನ್ನ ದೇಹದ ಬಗ್ಗೆ, ತನ್ನ ಸೌಂದರ್ಯದ ಬಗ್ಗೆ ಅವಳಿಗೆ ಒಂದು ಬಗೆಯ ಜಿಗುಪ್ಸೆ. ಯಾವುದನ್ನು ಒಂದು ಹೆಣ್ಣು ಸಾಯುವತನಕ ಪರಪುರುಷರಿಂದ ಮುಚ್ಚಿಡಲು ಬಯಸು ತ್ತದೋ....ಯಾವುದರ ರಕ್ಷಣೆಗಾಗಿ ಹೋರಾಡಿ ಪ್ರಾಣ ಅರ್ಪಿಸುತ್ತದೆಯೋ ಅದೇ ಜಗಜ್ಜಾಹಿರಾಗಿ ಬತ್ತಲೆಯಾದಾಗ ನಾಚಿಕೆ ಎಲ್ಲಿಂದ ಬರಬೇಕು ? ಯಾವುದನ್ನು ಮುಚ್ಚಿಟ್ಟುಕೊಳ್ಳಬೇಕು ? ಬಚ್ಚಿಟ್ಟುಕೊಳ್ಳಬೇಕು ? ಇಂದಾಕೆ ಒಂದು ಜೀವಂತ ಬೊಂಬೆ. ಸುಂದರ ನಿರ್ಜೀವ ಬೊಂಬೆ. ಪ್ರತಿ ಯೊಂದು ಚಟುವಟಿಕೆಗಳೂ ಯಾಂತ್ರಿಕವಾಗಿ ನಡೆಯುತ್ತವೆ. ಶೀಲ, ಸಂಸ್ಕಾರ, ನಾಚಿಕೆ ಎಲ್ಲಾ ಸುಟ್ಟು ಹೋಗಿವೆ ಅಷ್ಟೇ.

ಅವರಂಥವರು ಸಾವಿರಕ್ಕೊಬ್ಬರು ಇರಲು ಸಾಧ್ಯ ಎಂದುಕೊಂಡೆ ಮನದಲ್ಲಿ.

ಅವಳ ಬಗ್ಗೆ ಕರುಣೆ ಮೂಡಿತು...ಅವಳು ದಯೆಗೆ ಪಾತ್ರಳು.... ಅವಳಿಗೆ ಬೇಕು ಸಾಂತ್ವನ....ಮೇಲೆತ್ತುವ ಸಹಾಯ ಹಸ್ತ....ಏನೇ ಆಗಲಿ ನಾನವಳನ್ನು ನರಕ ಕೂಪದಿಂದ ಮೇಲೆತ್ತಬೇಕು ಎಂದು ನಿರ್ಧರಿಸಿದೆ.

ಅವಳತ್ತ ನೋಡಿದೆ.

ಅಪ್ಸರೆ ನನಗೆ ಅತೀ ಚೆಲುವೆಯಾಗಿ ಕಂಡಳು. ಮಂಜಿನಲ್ಲಿ ಮಿಂದು ಬಂದ ಶುಭ್ರ ಹೂವಿನಂತೆ ಕಂಡಳು. ಮನಸ್ಸು ಪ್ರಫುಲ್ಲವಾಯಿತು.... ತುಟಿಯರಳಿಸಿ ನಕ್ಕು ಸಂಜುಂಡಪ್ಪನೆಡೆ ದೃಷ್ಟಿಹರಿಸಿದೆ. ಆತ ಗುಬ್ಬಚ್ಚಿ ಮರಿಯಂತೆ ಒಂದೆಡೆ ಅವಿತು ಕುಳಿತಿದ್ದ. ಅಪ್ಸರೆ ಸಹಾಯಕ್ಕಾಗಿ ಅತ್ತಿತ್ತ

ದಿಟ್ಟಿಸುತ್ತಿದ್ದಳು... ಮೆಲ್ಲನೆ ಆವಳೆಡೆ ಸರಿದು ಬೆನ್ನ ಮೇಲೆ ಕೈ ಇಟ್ಟೆ. ಬೆಚ್ಚಿಬಿದ್ದ ಆಕೆ ನನ್ನೆಡೆ ನೋಡಿದಳು. ಕಣ್ಣಲ್ಲಿ ಆಚ್ಚರಿ... ಶಂಕೆ. "ಅಪ್ಸರಾ... ನಿನ್ನನ್ನು ನಾನು ತಪ್ಪು ತಿಳಿದಿದ್ದೆ... ಕ್ಷಮಿಸು. ನೀನು ಕೆಸರಿನಲ್ಲಿಯ ಕಮಲ" ಅಂದೆ. ಆಕೆ ನನ್ನನ್ನು ಬಲವಾಗಿ ಅಪ್ಪಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು. ಮನದ ಕಲ್ಮಶವೆಲ್ಲ ಕಣ್ಣೀರಿನಲ್ಲಿ ತೊಳೆದು ಹೋಗಿತ್ತು... ನಾನು ಸಮಾಧಾನ ಮಾಡುವದಕ್ಕೆ ಪ್ರಯತ್ನಿಸಲಿಲ್ಲ.

ನಂಜುಂಡಪ್ಪ ಅವಾಕ್ಕಾಗಿ ನಮ್ಮಿಬ್ಬರತ್ತ ನೋಡತೊಡಗಿದ.

"ಧಡ್.. ಧಡ್.... ಧಡಾರ್.... ಧಾಂ" ಸಪ್ಪಳದೊಂದಿಗೆ ಹೊರಗಿನ ಬಾಗಿಲು ಮುರಿದು ಬಿತ್ತು. ಹತ್ತೆಂಟು ಜನರ ಬೂಟುಗಾಲಿನ ಸಪ್ಪಳದಿಂದ ಮನೆ ಪ್ರತಿಧ್ವನಿಸಿತು. ಇನ್ನು ಮುಂದಿನ ಸರದಿ ನಾವಿದ್ದ ಕೋಣೆಯದು ಎಂದುಕೊಂಡೆ. ಮುಂದಿನ ಬಾಗಿಲಿನಷ್ಟು ಭದ್ರವಾಗಿರಲಿಲ್ಲ ಈ ಕೋಣೆ ಬಾಗಿಲು... ಎಂದುಕೊಳ್ಳುತ್ತಿದ್ದಂತೆ ಬಾಗಿಲ ಮೇಲೆ ಪ್ರಹಾರ ಆರಂಭವಾಯಿತು. ಎರಡೇ ನಿಮಿಷಗಳಲ್ಲಿ ಬಾಗಿಲು ಮುರಿಯಿತು ಎಲ್ಲಾ ಅಡೆತಡೆ ನಿವಾರಿಸಿ ಅವರು ಒಳಗೆ ಬಂದರು. ಜಾನ್ ಹಂದಿಯಂತೆ ಹಲ್ಲು ಕಿರಿಯುತ್ತ ನಮ್ಮತ್ತ ಬಂದ. ಹತಾಶನಾಗಿದ್ದ ನಂಜುಂಡಪ್ಪ ಓಡಿ ಹೋಗಲು ಪ್ರಯತ್ನಿಸಿ ನಾಲ್ಕು ಜನರ ಕೈಗೆ ಸಿಲುಕಿ ಹಣ್ಣುಗಾಯಿ, ನೀರುಗಾಯಿಯಾಗಿ ನೆಲಕಚ್ಚಿದ. ಹೆದರಿದ ಹರಿಣಿಯಂತಾದ ಅಪ್ಸರಾ ನನ್ನ ಹಿಂದೆ ಅವಿತುಕೊಂಡಳು. ಜೋರಾಗಿ ಅಟ್ಟಹಾಸ ಮಾಡಿ ನಕ್ಕ ಜಾನ್.

ನಿಧಾನವಾಗಿ ನಾನು ಮೇಲೆದ್ದು ನಿಂತೆ.

ಹೇಡಿ ಸಾವಿಗೆ ನಾನು ಸಿದ್ಧನಿರಲಿಲ್ಲ. ನಾನು ಬದುಕಬೇಕಿತ್ತು, ಅಪ್ಸರೆಯನ್ನು ಬದುಕಿಸಬೇಕಿತ್ತು... ಮನದಲ್ಲೇ ಖಿತೀಬ ಗುರುಗಳನ್ನು ನೆನೆಸಿಕೊಂಡು ವಂದಿಸಿದೆ. ನನ್ನ ಕಣ್ಣುಗಳು ಮೊದಲು ಚಿಕ್ಕದಾಗಿ ನಂತರ ದೊಡ್ಡದಾಗಿ ಅರಳಿದವು. ದೇಹದ ನರಗಳು ಬಿಗಿಯ ತೊಡಗಿದವು. ಹೆಬ್ಬಾವಿನಂತೆ ಮೈ ಉಬ್ಬಿಸಿ ಮೂಗು ಬಾಯಿಗಳಿಂದ ಭುಸ್ಸ್ ಎಂದು ನಾನು ಉಸಿರು ಬಿಟ್ಟಾಗ ಜಾನ್ ಹೆದರಿ ಒಂದು ಹೆಜ್ಜೆ ಹಿಂದೆ ಸರಿದ. ಅವನ ಚಂಚಾಗಳು ನಾಲ್ಕು ಹೆಜ್ಜೆ.

ಜಾನ್ ಅಚ್ಚರಿಯಿಂದ ನನ್ನೆಡೆ ನೋಡಿದ. ಗೋಕರ್ಣದಲ್ಲಿ ಒದೆ ತಿಂದು ನೆಲಕಚ್ಚಿದ ಅಂದಿನ ರೂಪಕ್ಕೂ ಇಂದಿನ ಈ ಕೆರಳಿದ ಸರ್ಪದ ರೂಪಕ್ಕೂ ಅಂತರ ಕಲ್ಪಿಸುತ್ತಿದ್ದನಾತ....ನಾ ಕಲಿತ ಪಾಠಗಳು, ಒಂದೊಂದಾಗಿ ನೆನಪಿಗೆ ಬರತೊಡಗಿದವು. ಎದುರಿಗಿದ್ದವರು ನನ್ನ ಮೇಲಿ ಅಕ್ರಮಣ ಮಾಡುವ ಮೊದಲೇ ನಾನವರ ಮೇಲೆ ಬಿದ್ದಿದ್ದೆ. ನನ್ನ ಮೈಯಲ್ಲಿ ದೈತ್ಯಶಕ್ತಿಯು ಸಂಚಾರವಾಗಿತ್ತು. ನನಗಿಂಥ ಅವರು ಬಲಶಾಲಿಗಳಾಗಿದ್ದರೂ ಅವರಿಗೆ ಎಚ್ಚತ್ತುಕೊಳ್ಳಲು ನಾನು ಅವಕಾಶವನ್ನೇ ಕೊಡಲಿಲ್ಲ. ಪರಿಣಾಮ....ಐದಾರು ನಿಮಿಷಗಳಲ್ಲಿ ಅವರು ಕೈಕಾಲು ಮುರಿದುಕೊಂಡು, ತಲೆ ಒಡೆದುಕೊಂಡು, ಬಾಯಿ ಮೂಗುಗಳಿಂದ ರಕ್ತ ಸುರಿಸುತ್ತ ನೆಲದ ಮೇಲೆ ಬಿದ್ದು ಹೊರಳಾಡತೊಡಗಿದರು.

ಜಾನ್‌ಗೆ ತನ್ನ ಕಣ್ಣುಗಳನ್ನು ನಂಬಲಾಗಲಿಲ್ಲ.

ನನ್ನೆಡೆ ವಿಚಿತ್ರ ದೃಷ್ಟಿಯಿಂದ ನೋಡುತ್ತಿರುವಾಗಲೇ ನಾನವನ ಎದೆ ಮೇಲೆ ಬಲಗಾಲಿನಿಂದ ಬಲವಾದ ಪ್ರಹಾರ ಮಾಡಿದೆ. ಅವನ ಕಂಠದಿಂದ ವಿಕಾರ ಧ್ವನಿ ಹೊರಟಿತು. ಬುಡಕಡಿದ ಮರದಂತೆ ಆತ ಹಿಂದಕ್ಕೆ ಎಗರಿ ಬಿದ್ದ. ನಾನು ಅಪ್ಸರೆಯ ಕೈ ಹಿಡಿದು ಬಲವಾಗಿ ಎಳೆಯುತ್ತ ಹೊರನಡೆದು, ಕೆಳಗಿನ ಮೆಟ್ಟಲತ್ತ ಓಡಿದೆ....ಸುಬ್ಬಾರಾವ್ ಮೇಲೇರಿ ಬರುತ್ತಿರುವದು ಕಾಣಿಸಿತು. ಹಾಗೇ ತಿರುಗಿ ಮೇಲೆ ಓಡಿದೆ. ಮೂರು ಮಹಡಿ ದಾಟಿ ತಾರಸಿಗೆ ಬಂದೆ. ಹಳೆ ಸಾಮಾನು ಇಡುವ ಕೋಣೆ ಕಾಣಿಸಿತು. ಅಲ್ಲೇ ಅವಿತುಕೊಂಡೆ. ನನ್ನ ಹಿಂದೆ ಅಪ್ಸರೆ ಕೂಡ.

ನಾಲ್ಕಾರು ನಿಮಿಷಗಳಲ್ಲಿ ಸುಬ್ಬಾರಾವ್ ಮೇಲೇರಿ ಬಂದರು. ಬಹುಶಃ ಅವರು ನಮ್ಮನ್ನು ನೋಡಿರಬೇಕು. ಅಲ್ಲೇ ನಿಂತು ಪ್ರೀತಿಯಿಂದ ಕರೆದರು.

"ಮಂದಾ....ಮಂದಾಕಿನೀ....ಬಾರಮ್ಮ....ಹೆದರಬೇಡ"

ಈ ತರಹದ ಮಮತೆಯ ಕರೆ ಕೇಳಿ ಅಪ್ಸರೆಗೆ ಎಷ್ಟು ವರ್ಷಗಳಾಗಿದ್ದವೋ. ಆಕೆ ಅಲ್ಲೇ ಕರಗಿ ನೀರಾದಳು. ನಾನು ತಡೆಯಲು ಯತ್ನಿಸಿದೆ. ಮತ್ತೆ ಅಪ್ಯಾಯಮಾನವಾದ ಕರೆ. "ಮಗು....ಮಂದಾ....ಬಾರಮ್ಮಾ...." ನನ್ನನ್ನು ಕೊಸರಿಕೊಂಡು ಆಕೆ ತಂದೆಯತ್ತ ಧಾವಿಸಿದಳು. "ಅಪ್ಪಾ ಅಪ್ಪಾ"

ಸುಬ್ಬಾರಾವ್ ಮಗಳನ್ನು ತಬ್ಬಿಕೊಂಡು ಗಳಗಳ ಅತ್ತರು. ಅಪ್ಸರೆಯೂ ಅಷ್ಟೇ....ಅವರ ಆ ಮಿಲನ ಕಂಡು ನನ್ನ ಕಣ್ಣುಗಳೂ ಹನಿಯಾಡಿದವು.

"ಗುಡ್..ಗುಡ್..ವ್ಹೆರಿ ಗುಡ್"

ಮೆಲ್ಲಗೆ ಬಾರಿಸಿದ ಚಪ್ಪಾಳೆಯೊಂದಿಗೆ ಕುತ್ಸಿತ ಧ್ವನಿ ಕೇಳಿಸಿತು ಸುಬ್ಬಾರಾಯರ ಹಿಂದಿನಿಂದ. ಅವರೊಂದಿಗೆ ನಾನೂ ಅತ್ತ ನೋಡಿದೆ. ಕೈಯಲ್ಲಿ ರಿವಾಲ್ವರ್ ಹಿಡಿದು ನಿಂತಿದ್ದ ಜಾನ್. ಕಟಬಾಯಿಯಿಯಿಂದ ಒಂದೆಡೆ ಮೆಲ್ಲನೆ ರಕ್ತ ಒಸರುತ್ತಿತ್ತು.

"ಜಾನ್....ಈಕೆ ನನ್ನ ಮಗಳು....ಮಂದಾಕಿನೀ"

"ನನಗೆ ಗೊತ್ತು" ಅಪಹಾಸ್ಯದೊಂದಿಗೆ ಆತ ಉತ್ತರಿಸಿದ.

"ಇವರ ಕೂದಲೂ ಸಹ ಸೊಂಕಕೂಡದು. ಆ ಬಾಸ್ಟರ್ಡ್‌ನ ದರ್ಶನ ನನ್ನು ಮುಗಿಸು"

"ಅಪ್ಪಾ....ಬೇಡ, ಬೇಡ" ಅಪ್ಸರಾ ಆರ್ತನಾದದೊಂದಿಗೆ ಕೂಗಿ ಕೊಂಡಳು.

"ಈತನಿಂದಲ್ಲೇ ಇಷ್ಟೆಲ್ಲಾ ಆದದ್ದು. ನನ್ನ ಚಿನ್ನದ ಲಂಕೆಗೆ ಬೆಂಕಿ ಇಟ್ಟವ ಈತನೇ. ಈತ ಬದುಕಕೂಡದು ಜಾನ'. ಈ ವಿಷದ ಹಾವನ್ನು ಹೊಸಕಿ ಹಾಕು...."

ಜಾನ್ ಕರಕರ ಹಲ್ಲು ಕಡಿದ. ರಿವಾಲ್ವರ್ ಹಿಡಿದ ಅವನ ಕೈ ನಿಧಾನವಾಗಿ ಸುಬ್ಬಾರಾವ್ ಕಡೇ ಹೊರಳಿತು.... ಗುರಿ ಈಗ ಅವರೆಡೆ.

"ಬಾಸ್ಟರ್ಡ್....ವಿಷದ ಹಾವು ನೀನು. ಮೊದಲು ನಿನ್ನ ಸರದಿ" ಜಾನ' ಗುರುಗುಟ್ಟಿದ.

ಸುಬ್ಬಾರಾವ್ ಕಕ್ಕಾಬಿಕ್ಕಿಯಾಗಿ ಬಡಬಡಿಸಿದರು. "ಜಾನ' ಇದೇನು"

"ಯು ಬಾಸ್ಟರ್ಡ್...ನನ್ನನ್ನು ಈ ಪ್ರಪಾತಕ್ಕೆ ತಳ್ಳಿದವನೇ ನೀನು. ನೀನು ಮಾತ್ರ ಸಾಧುವಾಗಿ ಜನತೆಯ ಪ್ರೀತಿಗೆ ಪಾತ್ರವಾಗಿ ದೇವತೆಯಾಗಿಯೆ ಉಳಿದೆ. ನಾನು ಕೊಲೆಗಡುಕ, ದರೋಡೆಕೋರ, ಸಮಾಜಘಾತುಕ, ದೇಶದ್ರೋಹಿ....ಪ್ರತಿದಿನ ನಾನು ಸಾವಿನೊಂದಿಗೆ ಸೆಣಸ್ಸಿ ದಿನನಿತ್ಯ ಹೊಸ ಜನ್ಮ ಪಡೆಯುತ್ತ ಗಳಿಸುತ್ತಿದ್ದ ಹಣದಲ್ಲಿ ಸಿಂಹಪಾಲು ಪಡೆದು ಸುಖದ ಸುಪ್ಪತ್ತಿಗೆಮೇಲೆ ಮೆರೆಯುವವ ನೀನಾದರೆ, ಎಲ್ಲಾ ಪಾಪ! ಅಪವಾದ

ಹೊತ್ತು ಭಯಾನಕ ಅಪರಾಧಿಯಾದವ ನಾನು. ನಮ್ಮ ಪರಂಪರೆ, ಸಂಸ್ಕೃತಿ, ನೀತಿಗಳನ್ನು ಅಧಃಪತನಕ್ಕೆ ಳಿಸಿದ ಕೀರ್ತಿ ನಿನ್ನದು. ಪರದೇಶ ದವರು ಗೌರವದಿಂದ ತಲೆಯೆತ್ತಿ ನೋಡುವ ನಮ್ಮ ದೇಶದ ನಾರಿಯರನ್ನು ಬೆತ್ತಲಾಗಿ ನಿಲ್ಲಿಸಿದವ ನೀನು. ಮೇಲ್ನೋಟಕ್ಕೆ ಫಬ್, ಬಾರ್‌ಗಳ ಮೇಲೆ ಕೆಂಡ ಕಾರುತ್ತ ಅವುಗಳನ್ನು ಮುಚ್ಚುವಂತೆ ಸತ್ಯಾಗ್ರಹ ಮಾಡಿದ ನೀನೇ ರಾತೋರಾತ್ರಿ ಒಳಗಿಂದೊಳಗೆ ನೂರಾರು ಪಬ್, ಬೀರ್-ಬ್ರಾಂಡಿಗಳ ಅಂಗಡಿಗಳನ್ನು ಹುಟ್ಟುಹಾಕಿ ಮಾಲೀಕನಾದೆ...ಸಮಾಜದ ಜನರಿಗೆಲ್ಲ ವಿಷ ಉಣಬಡಿಸಿ ನೀನ್ನು ಅಮೃತ ಸವಿದೆ. ಸಮುದ್ರ ಮಂಥನದ ಕಾಲಕ್ಕೆ ಹಾಲಾಹಲದಂಥ ವಿಷದೊಂದ್ದಿಗೆ ಒಳ್ಳೆಯ ವಸ್ತುಗಳೂ ಸಹ ಜನ್ಮ ತಾಳಿ ದವು. ಆದರೆ ನೀನು ಹುಟ್ಟು ಹಾಕಿದ ವಿಷ ಮಂಥವದಲ್ಲಿ ಕೇವಲ ವಿಷ ಹುಟ್ಟಿತು. ಕಾಲಕೂಟ ಜನ್ಮ ತಾಳಿತು. ಅದಕ್ಕೆ ಕಾರಣ ನೀನು....ನಿನ್ನ ತಾಳಕ್ಕೆ ತಕ್ಕಂತೆ ಕುಣಿದ ನನಗೆ ನೀನು ನೀಡಿದ್ದಾದರೂ ಏನು?....ನೇಣು ಗಂಬ ಇಲ್ಲವೇ ಪೊಲೀಸರ ಗುಂಡು....ಅಥವಾ ನನ್ನ ಪ್ರತಿಸ್ಪರ್ಧಿಗಳ ಚೂರಿಯ ಅಲಗು. ನೀನೋ ನಿನ್ನ ಮಗಳೊಂದ್ದಿಗೆ ಇಲ್ಲಿಂದ ದೇವರಂಥ ಮನುಷ್ಯನಾಗೇ ಪಾರಾಗುವೆ...."

"ಜಾನ್....ಏನು ಹುಚ್ಚುಚ್ಚಾಟವಿದು! ಮೊದಲು ಈ ಶತ್ರುವನ್ನು ಮುಗಿಸು....ಆಮೇಲೆ...."

"ಆಗದು ಸುಬ್ಬರಾವ್... ನನ್ನ ನಿಜವಾದ ಶತ್ರು ನೀವೇ...ನಿನ್ನನ್ನು ಮುಗಿಸಿದ ಮೇಲೆಯೇ ನಾನು ಮುಂದಿನ ಬಗ್ಗೆ ಯೋಚಿಸುವುದು"

ಹುಚ್ಚ.... ನೀನೊಬ್ಬ ಹುಚ್ಚ"

"ನಿನ್ನ ಮಾತು ಸತ್ಯ....ನಾನೊಬ್ಬ ಹುಚ್ಚನಾದುದರಿಂದಲೇ ಇಷ್ಟು ದಿನ ತಾಳಕ್ಕೆ ತಕ್ಕಂತೆ ಕುಣಿದೆ. ಇನ್ನು ಮುಂದೆ ಆಗದು. ನಿನ್ನಾಟ ಎಲ್ಲಾ ನನಗೆ ಗೊತ್ತು. ಎಂದಿಲ್ಲದ ಮಗಳ ಮಮತೆ ಇಂದು ಜಾಗೃತವಾಗಿದೆ. ಅದಕ್ಕಾಗಿ ಎಲ್ಲಾ ಸತ್ಯನಾಶ ಮಾಡಿ ಮಗಳೊಂದಿಗೆ ಪಲಾಯನ ಮಾಡುವ ಯೋಚನೆ ನಿನ್ನದು..... ಆಮೇಲೆ ನೀನುಳಿಸಿ ಹೋಗಿರುವ ಕಾಲಕೂಟ ವಿಷ ಕುಡಿದು ನೇಣುಗಂಬ ಏರುವಾತ ನಾನು....ನಿನ್ನೆಲ್ಲ ಪ್ಲಾನ್ ಬುಡ ಮೇಲು ಮಾಡಲೆಂದೇ ನಾನು ಬಂದಿದ್ದು....ಮೊದಲು ನಿನ್ನ ಮಗಳ ಸರದಿ.

ಇದರಿಂದಾಗಿಯೇ ನಾನು ಬೀದಿಗೆ ಬಂದದ್ದು....ಕಾನೂನಿನ ಕಣ್ಣಿಗೆ ಬಿದ್ದದ್ದು ಸಾವಿನ ದುಸ್ವಪ್ನ ಕಾಣುತ್ತಿದ್ದದ್ದು.... ನಿನ್ನ ಕಣ್ಣೆದುರೇ ನಿನ್ನ ಮಗಳಿಗೊಂದು ಗತಿ ಕಾಣಿಸಿದ ಮೇಲೆ ನಿನ್ನ ಸರದಿ. ಬಡವನಾಗಿ ಸ್ಲಮ್‌ನಲ್ಲಿ ಬೆಳೆಯುತ್ತಿದ್ದ ನನ್ನನ್ನು ಎತ್ತಿತಂದು ಅಪರಾದ ಜಗತ್ತಿಗೆ ಒಡೆಯನನ್ನಾಗಿ ಮಾಡಿ ನೀನು ಸಾಮ್ರಾಟನಾಗಿ ಮೆರೆಯುತ್ತಲಿರುವೆಯಲ್ಲ. ಅದಕ್ಕೆ ಬಹುಮಾನ ಬೇಡವೇ?''

"ಬೇಡ ಜಾನ್ ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಡಬೇಡ. ನನ್ನ ಮಾತನ್ನು ಕೇಳು"

ಸುಬ್ಬಾರಾವ್ ಅರಚಿಕೊಂಡರು.

ಮುಂದಾಗುವ ಅನಾಹುತ ನೆನೆಸಿಕೊಂಡು ನಾನು ಬಯಲಿಗೆ ಬರಲು ನಿರ್ಧರಿಸಿದೆ. ಸಾಯಲು ನನಗಿಚ್ಛೆ ಇರಲಿಲ್ಲ. ಸುಬ್ಬಾರಾವ್" ಹಾಗೂ ಅಪ್ಸರೆಯನ್ನು ಮುಗಿಸಿದ ಮೇಲೆ ಆತ ಖಂಡಿತವಾಗಿಯೂ ನನ್ನ ಕಡೆ ಸರಿಯುತ್ತಾನೆ....

ನಾನು ಜಾನ್‌ನೆಡ ಧಾವಿಸಿದೆ.

"ಢಂ....ಢಂ" ಎರಡು ಗುಂಡು ಸಿಡಿದವು.

ಸುಬ್ಬಾರಾವ್ ಮುಂದೋಡಿ ಬಂದಿದ್ದರು. ಹೀಗಾಗಿ ಅಪ್ಸರೆಯ ಎದೆ ಸೇರಲು ಹಾತೊರೆದಿದ್ದ ಗುಂಡುಗಳು ಅವರ ಎದೆ ಸೇರಿದ್ದವು.... ಮುಂದಿನ ಗಳಿಗೆಯೇ ನನ್ನ ಬಲಗಾಲು ಚಲಿಸಿತ್ತು. ಜಾನ್‌ನ ಕೈಯಲ್ಲಿಯ ರಿವಾಲ್ವರ್ ಹಾರಿ ಮೂರನೇ ಮಹಡಿಯಿಂದ ಭೂಮಿ ಕಂಡಿತು.

ಪೊಲೀಸ್ ಗಾಡಿ ಸೈರನ್.

ಜಾನ್ ಗಾಬರಿಯಾದ....ಹತಾಷನಾದ, ಗಾಯಗೊಂಡ ಹುಲಿಯಾದ. ಒಮ್ಮೆಲೆ ನನ್ನ ಮೇಲೆ ಹಾರಿದ. ಎಚ್ಚೆತ್ತುಕೊಳ್ಳಲೂ ನನಗೆ ಸಮಯ ನೀಡದೇ ಚೆನ್ನಾಗಿ ಚಚ್ಚಿದ. ನೆಲಕ್ಕೆ ಬಿದ್ದ ನಾನು ಓಡತೊಡಗಿದೆ. ತಂದೆಯ ಶವದ ಬಳಿ ಕುಳಿತು ದುಃಖಿಸುತ್ತಿದ್ದ ಅಪ್ಸರೆಯತ್ತ ಹೆಜ್ಜೆಹಾಕಿದ ಜಾನ್. ಸುಧಾರಿಸಿಕೊಳ್ಳಲು ನನಗೆ ಒಂದೆರಡು ನಿಮಿಷಗಳು ಬೇಕಾದವು. ಅಷ್ಟರಲ್ಲಿ ಅವನ ಕೈಯಲ್ಲಿ ಸಿಲುಕಿ ಅಪ್ಸರೆ ಒದ್ದಾಡುತ್ತಿದ್ದಳು. ಆತ ಅವಳ

ಕುತ್ತಿಗೆ ಹಿಚುಕುತ್ತಿದ್ದ. ನಾನು ಅತ್ತಿತ್ತ ನೋಡಿದೆ. ತುಕ್ಕು ಹಿಡಿದು ಬಿದ್ದಿದ್ದ ಕಬ್ಬಿಣದ ಸಲಾಕೆ ದೃಷ್ಟಿಗೆ ಬಿತ್ತು. ಅದನ್ನು ಕೈಗೆತ್ತಿಕೊಂಡೆ.

ದೇಹದಲ್ಲಿ ಶಕ್ತಿಯು ಸಂಚಾರವಾಯಿತು.

ಅಪ್ಸರೆಯನ್ನು ಬದುಕಿಸಬೇಕೆಂದರೆ ನಾನು ಬದುಕಬೇಕು.

ನಾನು ಬದುಕಬೇಕೆಂದರೆ ಜಾನ್‌ನನ್ನು ಮುಗಿಸಬೇಕು.

ಆವೇಶದಿಂದ ಕಂಪಿಸುತ್ತಿದ್ದ ನಾನು ಸರಳು ಹಿಡಿದು ಅವನತ್ತ ಧಾವಿಸಿದೆ. ಅಪ್ಸರೆಯನ್ನು ಬಿಟ್ಟು ಜಾನ್ ನನ್ನೆಡೆ ನೋಡಿದ. ಅವನ ಕಣ್ಣುಗಳಲ್ಲಿ ಮೂಡಿದ ಮೃತ್ಯುವಿನ ಕರಾಳಛಾಯೆ ನನಗೆ ಕಾಣಿಸಿತು. ನಾನು ಹಿಂದೆ ಮುಂದೆ ನೋಡದೇ ಒಂದೇ ಸಮನೆ ಸರಳಿನಿಂದ ಅವನಿಗೆ ಬಾರಿಸ ತೊಡಗಿದೆ. ಆತ ವಿಕಾರವಾಗಿ ಚೀರಿಕೊಳ್ಳುತ್ತಲೇ ಇದ್ದ. ತಲೆ, ಕಿವಿ, ಮೂಗು, ಬಾಯಿ ಎಲ್ಲಾ ಒಡೆದು ರಕ್ತ ಸಿಡಿದು ನನಗೂ ಅಭಿಷೇಕವಾಯಿತು

ಆತ ಅರಚುತ್ತಲೇ ಇದ್ದ.... ನಾನು ಬಾರಿಸುತ್ತಲೇ ಇದ್ದೆ.

ಮತ್ತೆ ನಾಲ್ಕಾರು ಜನ ಮೇಲೆ ಬಂದ ಸದ್ದು.

ಬಾಗಿಲು ದೂಡಿ ಮುಂದೆ ಬಂದವ ಅವನೇ.... ಬಳ್ಳಾರಿಯಿಂದ ನನ್ನ ಹಿಂದೆ ಬಿದ್ದವ. ಕೋಪ ಉಕ್ಕೇರಿ ಬಂದಿತು. ಜಾನನನ್ನು ಬಿಟ್ಟು ಅವನೆಡೆ ಹಾರಿದೆ. ಅವನ ಹಿಂದೆಯೇ ಕಾಣಿಸಿಕೊಂಡ ಸುಧೀರ.

"ದರ್ಶನ್.... ನಿಲ್ಲು.... ಈತ ಸಿ.ಐ.ಡಿ ಆಫೀಸರ್.... ನಿನ್ನ ರಕ್ಷಣೆಗೆಂದು ನಾನೇ ನಿಯಮಿಸಿದ್ದೆ.... ಇಲ್ಲಿಗೆ ನನ್ನನ್ನು ನಿನ್ನ ರಕ್ಷಣೆಗೆಂದು ಈತನೇ ಕರೆ ತಂದದ್ದು...."

ಕೈಯೊಳಗಿನ ಸರಳು ಜಾರಿ ಕೆಳಗೆ ಬಿತ್ತು.

ನಾನೂ ಕುಸಿದೆ.... ನನಗೆ ಮೂರ್ಛೆ ತಪ್ಪಿತ್ತು.

# 13

ಮುಂದೆ ನಾನು ಪೊಲೀಸ್‌ಗೆ ಶರಣಾದೆ.

ಅಪ್ಸರಾ ತನ್ನ ಬಳಿ ಇದ್ದ ಎಲ್ಲಾ ಸಾಕ್ಷಾಧಾರಗಳನ್ನು ಕೋರ್ಟಿನ ಮುಂದಿಟ್ಟಳು.

ಪೊಲೀಸ್ ಸಾಕ್ಷಿಯಾಗಿ ಎಲ್ಲಾ ಅಪವಾದ ತನ್ನ ಮೇಲೆ ತೆಗೆದು ಕೊಂಡಳು.

ನನಗೆ ವಾರ್ನಿಂಗ್ ನೀಡಿ ಬಿಡುಗಡೆ ಮಾಡಿದರು.

ಸುಧೀರ ಜಾಧವ ಪುನಃ ತನ್ನ ಕೆಲಸದ ಮೇಲೆ ಹಾಜರಾದ. ಆತ ನನಗಾಗಿ ಮಾಡಿದ ತ್ಯಾಗಕ್ಕೆ ಏನೆಂದು ಹೇಳುವದು....ಅದಕ್ಕೆ ಸಲ್ಲಿಸಲು ಒಂದೇ ಶಬ್ದ....ಕೃತಜ್ಞತೆ.

ಮುಕದ್ದಮೆ ನಡೆದು ಜಾನ್‌ಗೆ ಜೀವಾವಧಿ ಶಿಕ್ಷೆಯಾಯಿತು. ಅವನ ಸಂಗಡಿಗರಿಗೆ ತಲಾ ಐದೈದು ವರ್ಷ.

ಅಪ್ಸರಾಳಿಗೆ ಹತ್ತು ತಿಂಗಳ ಶಿಕ್ಷೆ.

ಆಕೆ ನಗು ನಗುತ್ತ ಸ್ವೀಕರಿಸಿದಳು.

## 14

ಅಪ್ಸರಾ ಶಿಕ್ಷೆ ಅನುಭವಿಸಿ ಬಂದಿದಾಳೆ. ಅವಳನ್ನು ಮನೆಗೆ ಕರೆ ತಂದೆ. ನನ್ನ ತಂದೆ ತಾಯಿ ಅವಳನ್ನು ಪ್ರೀತಿಯಿಂದ ಸ್ವಾಗತಿಸಿದರು. ಹೊಸ ಕತೆಗೆ ಪ್ಲಾಟ್ ಹುಡುಕಲು ಹೊರಟ ನನ್ನ ಕತೆಯೇ ನನ್ನ ಜೀವಂತ ಕಥೆಯೇ ನನ್ನ ಹೊಸ ಧಾರಾವಾಹಿಗೆ ಕತೆಯಾಯಿತು. ಬರೆದು ಪತ್ರಿಕೆಗೆ ಕಳಿಸಿದೆ. ಅದುಅದ್ಭುತ ರೀತಿಯಲ್ಲಿ ಜನಪ್ರಿಯವಾಯಿತು. ನನ್ನ ಹೆಸರು ಮನೆ ಮನೆಯ ಮಾತಾಯಿತು.

ಅಪ್ಸರಾ....ಈಗ ನನ್ನ ಪಾಲಿನ ಮಂದಾಕಿನಿ. ಆಕೆಯ ಗತಜೀವನದ ಬಗ್ಗೆ ನಾನು ತಲೆ ಕೆಡಿಸಿಕೊಂಡಿಲ್ಲ....ಮುಂದಿನ ಬದುಕಿಗಾಗಿ ಚಿಂತಿಸುತ್ತಿದ್ದೇನೆ. ಅವಳಿಗೆ ಹೊಸ ಜೀವನ ನೀಡಲು ಯೋಚಿಸಿದ್ದೇನೆ. ನನ್ನ ಬಾಳ ಸಂಗಾತಿಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದ್ದೇನೆ.

ನನ್ನ ತಂದೆ ತಾಯಿ ನನ್ನ ದೃಢ ನಿರ್ಧಾರದ ಮುಂದೆ ತಲೆಬಾಗಿ ಒಪ್ಪಿಗೆ ನೀಡಿದ್ದಾರೆ. ಮಂದಾಕಿನಿಯನ್ನು ಸೊಸೆಯನ್ನಾಗಿ ಮಾಡಿಕೊಂಡು ಮನೆ ತುಂಬಿಸಿಕೊಳ್ಳಲು ಕಾತುರರಾಗಿದ್ದಾರೆ.

ನಮ್ಮ ಮದುವೆ ನಿರ್ಧಾರವಾಗಿದೆ.

ಪೂಜಾರಿ ಸುಧೀರ ಜಾಧವ.

ಮದುವೆ ಗೋಕರ್ಣದಲ್ಲಿ.

ಇದೋ ನನ್ನ ಹಾಗೂ ಮಂದಾಕಿನಿಯ ಮದುವೆಗೆ ನಿಮಗೆ ನಮ್ಮ ಆತ್ಮೀಯ ಆಮಂತ್ರಣ. ದಯವಿಟ್ಟು ಬನ್ನಿ....ಯಾರಿಗೆ ಗೊತ್ತು ? ನನ್ನ ಹಾಗೆ ನಿಮಗೂ ಒಂದು ಪ್ಲಾಟ್ ಅಲ್ಲಿ ಕಾದಿರಬಹುದು. ಅಲ್ಲವೇ ? ನಮಸ್ಕಾರ.